ಪುಸ್ತಕ ಪ್ರಪಂಚ

ಡಿಸೆಂಬರ್ ೧೯೯೯



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೫೦ ಸಂಚಿಕೆ ೩ ಡಿಸೆಂಬರ್ ೧೯೯೯

ಪರಿವಿಡಿ

೧. ವಾಜಪೇಯಿ ಯಜ್ಞ ಸುಸೂತ್ರವಾಗಿ ಸಾಗಲಿ ೩
—ದೇಜಗೌ

೨. ಚನ್ನವೀರ ಕಣವಿಯವರ ಜೀವನದೃಷ್ಟಿ ೧೩
—ಡಾ॥ ಮಂಜುಳಾ ಹುಲ್ಲಹಳ್ಳಿ

೩. ನಿದ್ರೆ—ಪ್ರೊ॥ ಕೆ. ಕೇಶವಮೂರ್ತಿ ೧೯

೪. ಗುದ್ಲಿ ಶರಣರು—ಡಾ॥ ಸ. ಜ. ನಾಗಲೋಟಿಮಠ ೨೫

೫. ತಾರಕ್ಕ ಬಿಂದಿಗೆ!—ಟಿ. ಎಸ್. ಸಂಜೀವರಾವ್ ೨೮

೬. ಮಾನಭಂಗ—ಎಚ್. ಆರ್. ಚಂದ್ರವದನರಾವ್ ೩೧

೭. ಸಂಪಾತಿ ಕೌರಳ ದಾರುಣ ಸತೀ ಸಹಗಮನ ೩೫
—ಎ. ಪಿ. ಗೌರೀಶಂಕರ

೮. ನಿಮ್ಮ ಬದುಕನ್ನು ಸರಳವಾಗಿಸಿಕೊಳ್ಳಿ ೪೨
—ಡಿ. ವಿ. ಶಾಮಣ್ಣ

೯. ಬೆಲ್ಲ ಕಪ್ಪೆಂದು ಬೇಸರಗೊಳ್ಳಬೇಡಿ ೪೮
—ಎ. ಪಿ. ಚಂದ್ರಶೇಖರ

೧೦. ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೆ! ೫೬
—ಜಿ. ಟಿ. ನಾರಾಯಣರಾವ್

೧೧. ಸ್ವಾಮಿ ದಯಾನಂದ ಸರಸ್ವತಿಯವರ ಸಾಮಾಜಿಕ ಕಳಕಳಿ ೬೧
—ಎಂ. ಪಿ. ರಮೇಶ್

೧೨. ಏಶಿಯಾದ ಕೆಟ್ಟ ವಾಹನ ಚಾಲಕರು ೬೯
ಗೋಪಾಲ ಆಶ್ರಿತ

೧೩. ಪುಸ್ತಕ ವಿಮರ್ಶೆ—ಜಿ. ಟಿ. ನಾರಾಯಣರಾವ್ ೭೫
,, —ಡಾ॥ ಬಿ. ನಂ. ಚಂದ್ರಯ್ಯ

ಮುಖಪುಟ ಚಿತ್ರ : ಶ್ರೀ ಎಸ್. ಎಂ. ಕೃಷ್ಣ ಮುಖ್ಯಮಂತ್ರಿ, ಕರ್ನಾಟಕ ಸರ್ಕಾರ

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Ten

ಬಿಡಿಪ್ರತಿ : ರೂ. ೧೦

ವಾರ್ಷಿಕ ಚಂದಾ : ರೂ. ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-೫೭೦ ೦೦೬

ವಾಜಪೇಯಿ ಯಜ್ಞ ಸುಸೂತ್ರವಾಗಿ ಸಾಗಲಿ

ಇಬ್ಬರು ಹೆಣ್ಣುಗಳ ದೂರದೃಷ್ಟಿಯ ಅಭಾವದಿಂದಾಗಿ, ಸ್ವಾರ್ಥತಾ ಮೂಲದ ಅವಸರದಿಂದಾಗಿ, ಅವಿವೇಕದಿಂದಾಗಿ, ಒಂದು ವರ್ಷದಲ್ಲಿಯೇ ದೇಶ ಮತ್ತೊಂದು ಚುನಾವಣೆಯನ್ನು ಎದುರಿಸಬೇಕಾಗಿ ಬಂದದ್ದು ದುರ್ದೈವ. ಎರಡು ಕರಿತಲೆಗಳು ಒಂದಾಗುವುದಿಲ್ಲವೆಂಬ ನಾಣ್ಣುಡಿಯೂ ಈ ಸಂದರ್ಭದಲ್ಲಿ ನಿಜವಾಗಿದೆ. ಆದರೆ ಸಾಮಾನ್ಯ ಭಾರತೀಯರು ವಿವೇಕಿಗಳು, ದೂರದೃಷ್ಟಿಯುಳ್ಳವರು, ದೇಶಾಭಿಮಾನಿಗಳು, ಏಕತಾನಿಷ್ಠೆಯುಳ್ಳವರೆಂಬುದು ೧೯೯೯ ನೆಯ ಸಾಲಿನ ಚುನಾವಣೆಗಳಲ್ಲಿ ಅಭಿವ್ಯಕ್ತಗೊಂಡಿದೆ. ಹಿಂದಿನ ತಪ್ಪು ಪುನರಾವರ್ತನೆಯಾಗಬಾರದು, ಅತಂತ್ರ ಲೋಕಸಭೆಯಿಂದ ಅರಾಜಕತೆಯುಂಟಾಗಬಾರದು, ಮತ್ತೊಮ್ಮೆ ಅಟಲ ಬಿಹಾರಿ ವಾಜಪೇಯಿ ಅವರ ಕೈಗೆ ಅಧಿಕಾರ ಸೂತ್ರವನ್ನು ಕೊಟ್ಟು ನೋಡೋಣ ಎಂದು ಯೋಚಿಸಿ, ಜನ ರಾಷ್ಟ್ರೀಯ ಪ್ರಜಾತಾಂತ್ರಿಕ ಮೈತ್ರಿಕೂಟಕ್ಕೆ ಬೆಂಬಲ ನೀಡಿರುವಂತೆ ತೋರುತ್ತದೆ. ರಾಜ್ಯಗಳಲ್ಲಿ ಅತಂತ್ರ ಪರಿಸ್ಥಿತಿಯುಂಟಾಗದಂತೆಯೂ ಮತದಾರ ಎಚ್ಚರಿಕೆ ವಹಿಸಿದ್ದಾನೆ. ಮತದಾರನ ಈ ವಿಭಿನ್ನ, ಆದರೆ ಸುವಿವೇಕದ ನೀತಿಯನ್ನು ಕೇಂದ್ರ ರಾಜ್ಯ ಸರಕಾರಗಳೂ ರಾಜಕೀಯ ಪಕ್ಷಗಳೂ ಅರ್ಥ ಮಾಡಿಕೊಳ್ಳುವುದು ಮೇಲು.

ಅಧಿಕಾರ ಸೂತ್ರವನ್ನು ವಹಿಸಿಕೊಂಡ ಸಂದರ್ಭದಲ್ಲಿ ಪ್ರಧಾನಿ ವಾಜಪೇಯಿಯವರು ಮತದಾರರಿಗೆ ವಂದನೆಗಳನ್ನು ಸಲ್ಲಿಸುತ್ತ, ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಹೇಳಿರುವಷ್ಟನ್ನೆ ಕಾರ್ಯಗತಗೊಳಿಸಿದರೂ ಸಾಕು, ದೇಶ ಪ್ರಗತಿ ಪಥದಲ್ಲಿ ಮುಂದುವರಿಯುತ್ತದೆ. ಸೆಕ್ಯುಲರ್ ತತ್ತ್ವ, ಸಾಮಾಜಿಕ ನ್ಯಾಯ, ಸಾಮಾಜಿಕ ಸಾಮರಸ್ಯ ಮತ್ತು ಮಹಿಳಾಧಿಕಾರ ಪ್ರದಾನ, ಭಯಮುಕ್ತ, ಭೇದಮುಕ್ತ, ಸುಭದ್ರಯುಕ್ತ, ಪ್ರಜಾಸತ್ತಾತ್ಮಕ ಸಮಾಜ ನಿರ್ಮಾಣ, ನಿರುದ್ಯೋಗೆ ಸಮಸ್ಯೆಯ ಪರಿಹಾರ, ನಿರಕ್ಷರತೆಯ ನಿರ್ಮೂಲನ, ಕ್ಷುಧಾ ದಾರಿದ್ರ್ಯ ವಿನಾಶ, ಆರೋಗ್ಯ ಸಂರಕ್ಷಣೆ —ಇತ್ಯಾದಿಗಳು ತಮ್ಮ ಸರಕಾರದ ಮುಂದಿರುವ ಕಾರ್ಯಕ್ರಮಗಳೆಂದವರು ಘೋಷಿಸಿದ್ದಾರೆ. ಇವುಗಳನ್ನು ಪೂರೈಸುವ ದೃಷ್ಟಿಯಿಂದ ಆರ್ಥಿಕ, ವರಮಾನಿಕ ಮತ್ತು ಸಾಂಪತ್ತಿಕ ಸುಧಾರಣೆಗಳನ್ನು ರೂಪಿಸಲು ಸಂಕಲ್ಪಿಸಲಾಗಿದೆ. ಭಯೋತ್ಪಾದಕತೆಯ ನಿರೋಧ, ಭ್ರಷ್ಟಾಚಾರ ದಮನ ಮತ್ತು ಚುನಾವಣಾ ಸಂಹಿತೆಯ ನವೀಕರಣ ತಮ್ಮ ಮುಂದಿರುವ ಜರೂರು ಕಾರ್ಯ

ಗಳೆಂದು ಅವರು ಸ್ಪಷ್ಟಪಡಿಸಿದ್ದಾರೆ. ಹಿಂದಿನಿಂದ ಎಲ್ಲ ನಾಯಕರ ಇಂಥದೇ ಘೋಷಣೆಗಳನ್ನು ಕೇಳಿ ಕೇಳಿ ಜನರ ಕಿವಿ ಕಿವುಡಾಗಿವೆ. ಈ ಭಾಷಣ ಸಹ ಹಿಂದಿನವರ ಭಾಷಣಗಳ ಕಾಪಿಯಂತಿವೆ. ಘೋಷಣೆ ಕ್ರಿಯಾಮುಖವಾದಾಗ ಮಾತ್ರ, ಜನಕ್ಕೆ ಸಮಾಧಾನವಾಗುತ್ತದೆ; ಭಾರತ ಚೈತನ್ಯಯುಕ್ತವಾಗುತ್ತದೆ; ಹಳೆಯ ಘೋಷಣೆಗಳ ನಕಲಲ್ಲವೆಂದು ಸಾಬೀತಾಗುತ್ತದೆ.

ಕವಿ ವಾಜಪೇಯಿಯವರು ಕನಸುಗಾರರು, ಧೀಮಂತರು, ಸತ್ಯವಂತರು, ಪ್ರಾಮಾಣಿಕರು; ಸಂಪದ್ಭರಿತ ದೇಶವನ್ನು ಮುಂದಿನ ಶತಮಾನ—ಸಹಸ್ರಮಾನ (೨೦೦೧ ರಿಂದ) ಕ್ಕೊಯ್ಯುವ ಛಲವಂತರು; ಹಲವು ತೆರನ ತುಯ್ತ್ತೆಳೆತಗಳಿಗೆ ಸಿಕ್ಕಿಕೊಂಡು, ಮಾನಸಿಕ ದುರಂತತೆಗೆಲ್ಲಿ ಬಲಿಯಾಗುತ್ತಾರೆಯೋ ಎಂಬ ಶಂಕೆ ಅವರ ಅಭಿಮಾನಿಗಳಿಗಿದೆ. ಭಿನ್ನ ವಿಭಿನ್ನ ಪಕ್ಷೀಯ ಸರ್ಕಾರಗಳಿರುವ ರಾಜ್ಯಗಳನ್ನು ಎದುರುಹಾಕಿಕೊಳ್ಳದೆ, ಹೊಂದಾಣಿಕೆ ಮಾಡಿಕೊಂಡು, ಕೊಳು ಕೊಡೆಯ ನಿಯಮವನ್ನೊಪ್ಪಿಕೊಂಡು ಮುಂದುವರಿದರೇನೇ ದೇಶಕ್ಕೆ ಕ್ಷೇಮ. ಐತಿಹಾಸಿಕ, ಸಾಂಸ್ಕೃತಿಕ ಭೌಗೋಳಿಕ ವಿಶಿಷ್ಟ ಪರಂಪರೆಗಳನ್ನೊಳಗೊಂಡಿರುವ ರಾಜ್ಯಗಳಿಗೆ ಸ್ವಾಯತ್ತತೆ ನೀಡುವ ಮೂಲಕವೇ ರಾಷ್ಟ್ರದ ಭದ್ರತೆಯನ್ನು ಏಕತೆಯನ್ನು ರಕ್ಷಿಸಬೇಕೆಂಬ ವಿವೇಕ, ದೂರದೃಷ್ಟಿ ಜಾಗತಿಕ ಪ್ರಜ್ಞೆ ಮತ್ತು ಸಮಾನತಾ ಭಾವನೆಯನ್ನು ಬೆಳೆಸಿಕೊಳ್ಳಬೇಕು.

ಕೃಷ್ಣ ಸಾರಥ್ಯ ಯಶಸ್ವಿಯಾಗಲಿ

ಹಿಂದಿನ ಸರ್ಕಾರದ ವೈಫಲ್ಯ ಹಾಗೂ ಸ್ವಾರ್ಥಾಹಂಕಾರ ಮೂಲ ಪ್ರತಿಷ್ಠೆಯ, ಕುತ್ಸಿತ ಬುದ್ಧಿಯ ನಾಯಕರ ಕಿತಾಪತಿ ಸೃಷ್ಟಿಸಿದ ಗೊಂದಲದಿಂದಾಗಿ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಮುತ್ಸದ್ದಿತನ ಚಾರಿಸ್ಮಗಳಿಂದಾಗಿ, ಅವರ ಪಾಂಚಜನ್ಯದ ಮೊಳಗಿನಿಂದಾಗಿ, 'ಕಾಂಗ್ರೆಸ್' ಹೆಸರಿನ ಮೋಡಿಯಿಂದಾಗಿ, ಜತೆಗೆ ಜನರ ವಿವೇಕದಿಂದಾಗಿ, ಕಾಂಗ್ರೆಸ್ಸಿಗೆ ಅಧಿಕಾರ ಸೂತ್ರ ಹಿಡಿಯುವ ಭಾಗ್ಯಕಂಕಣ ಲಭಿಸಿದೆ. ಸುಸಂಸ್ಕೃತ ರಾಜಕೀಯ ನಾಯಕರ ಕುಟುಂಬದಲ್ಲಿ ಹುಟ್ಟಿದ ಶ್ರೀ ಸೋಮನಹಳ್ಳಿ ಮಲ್ಲಯ್ಯ ಕೃಷ್ಣ ಅವರ ಮಾತಿನ ಮೋಡಿಯನ್ನು, ವಾಗ್ಮಿತೆಯನ್ನು, ಕುಶಾಗ್ರಮತಿಯನ್ನು ಅವರನ್ನು ವಿದ್ಯಾರ್ಥಿ ದಶೆಯಲ್ಲಿಯೇ ಬಲ್ಲ ಜನ ಅವರ ಬಗ್ಗೆ ಇಟ್ಟುಕೊಂಡಿದ್ದ ಭರವಸೆ ಹುಸಿಯಾಗಲಿಲ್ಲ. ಅಮೆರಿಕೆಯಲ್ಲಿ ಉಚ್ಚ ಶಿಕ್ಷಣವನ್ನು ಪಡೆದು, ಅಲ್ಲಿಂದ ಹಿಂದಿರುಗುತ್ತಿದ್ದಂತೆಯೇ ೧೯೬೨ ರಲ್ಲಿ ವಿಧಾನಸಭೆಗೆ ಚುನಾವಣೆಯಲ್ಲಿ ಗೆದ್ದು, ನಾಲ್ಕಾರು ವರ್ಷ ಯಶಸ್ವೀ ಕಾನೂನು ಪ್ರಾಧ್ಯಾಪಕರಾಗಿ, ಸ್ನೇಹಶೀಲ ವಿನಯಶ್ರೀ ಬುದ್ಧಿವಂತಿಕೆಯ ಜಾದೂಗಾರಿಕೆಯಿಂದ ಎಲ್ಲ

ರಾಜಕೀಯ ಪಕ್ಷಗಳ ನಾಯಕರಿಗೆ ಅಚ್ಚುಮೆಚ್ಚಿನವರಾಗುತ್ತಾರೆ. ಸುಮಾರು ನಾಲ್ಕು ದಶಕಗಳ ಕಾಲ ಸಂಸತ್ ಮತ್ತು ಶಾಸನ ಸಭೆಗಳ ಸದಸ್ಯರಾಗಿ, ಕೇಂದ್ರ ರಾಜ್ಯಗಳಲ್ಲಿ ಮಂತ್ರಿಗಳಾಗಿ, ವಿಧಾನಸಭೆಯ ಅಧ್ಯಕ್ಷರಾಗಿ ಅವರು ಪಡೆದ ಅನುಭವ ಅಪಾರ, ಗಳಿಸಿದ ಯಶಸ್ಸು ಅಪರಂಪಾರ. ವಿಧಿಯಿಚ್ಛೆ ಎಂಬಂತೆ ೧೯೮೯ ರಲ್ಲಿ ಕೈಗೆ ಬಂದ ಮುಖ್ಯಮಂತ್ರಿ ಪದವಿ ಜಾರಿಹೋದರೂ ೧೯೯೯ ರಲ್ಲಿ ಅವರನ್ನರಸಿಕೊಂಡು ಬಂತೆಂದೇ ಹೇಳಬಹುದು. ಸೌಜನ್ಯ ಶೀಲ ಸಭ್ಯಾಚಾರದಿಂದ,ಇಂಗ್ಲಿಷ್–ಕನ್ನಡಗಳ ಮೇಲಣ ಪ್ರಾಢಿಮೆಯಿಂದ, ಭಾವೋದ್ರೇಕರಹಿತ ವಾಗ್ಝರಿಯಿಂದ, ಚಿಂತನ ಮೌಲ್ಯಗಳಿಂದ ಅವರು ಎದುರಾಳಿಗಳನ್ನು ಸಹ ಆಕರ್ಷಿಸಿಕೊಳ್ಳಬಲ್ಲರು. ಪಾಶ್ಚಾತ್ಯ ಶಿಕ್ಷಣದ ಉತ್ತಮಾಂಶಗಳನ್ನು ಜೀರ್ಣಿಸಿಕೊಂಡು, ಭಾರತೀಯ ಸಂಸ್ಕೃತಿಯಲ್ಲಿ ನೆಲೆ ನಿಂತಿರುವ ಶಿಷ್ಟತನವೇ ಸಾಕಾರ ಪಡೆದಂತಿರುವ ಕೃಷ್ಣ ಅವರು ಅತೃಪ್ತರನ್ನು ವಿರೋಧ ಪಕ್ಷವನ್ನು ಉಪಾಯಾಂತರದಿಂದ ಒಲಿಸಿಕೊಂಡು ಅಥವಾ ಗೆದ್ದುಕೊಂಡು, ಐದು ವರ್ಷ ಆಡಳಿತ ನಡೆಸುತ್ತಾರೆ, ದೇಶವನ್ನು ಕಟ್ಟುತ್ತಾರೆ, ದಲಿತರನ್ನು ಹಿಂದುಳಿದವರನ್ನು ಮೇಲೆತ್ತುತ್ತಾರೆ ಎಂಬ ಭರವಸೆಯನ್ನಿಟ್ಟುಕೊಂಡು, ಜನತಾಶಕ್ತಿ ಅವರಿಗೆ ಸದವಕಾಶವನ್ನೊದಗಿಸಿದೆ. ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ, ದೇವರಾಜ ಅರಸು ಅವರಂತೆ ಇತಿಹಾಸವನ್ನು ನಿರ್ಮಿಸುವ, ಅದರಲ್ಲಿ ಎಂದೂ ಅಳಿಯದ ಹೆಜ್ಜೆಯನ್ನು ಬಿಟ್ಟುಹೋಗುವ ಜನತಾ ಜನಾರ್ದನನ ಅನುಗ್ರಹ ದೊರೆತಿದೆ. ಈ ಸದವಕಾಶ ಮತ್ತು ಅನುಗ್ರಹವನ್ನು ಸರಿಯಾಗಿ ಬಳಸಿಕೊಳ್ಳುವ ಛಾತಿ ಅವರಿಗಿದೆ ಎಂದು ನಂಬಬಹುದಾಗಿದೆ. ಆದರೂ ಕಾದು ನೋಡಬಹುದು.

ವಿರೋಧ ಪಕ್ಷದ ಜವಾಬ್ದಾರಿ

ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದ ಪಾತ್ರ ಆಡಳಿತ ಪಕ್ಷದಷ್ಟೇ ಮುಖ್ಯ. ಆಡಳಿತದಲ್ಲಿ ಅವರ ಪಾಲು, ಪಾತ್ರ, ಹೊಣೆಗಾರಿಕೆ ಇದ್ದೇ ಇವೆ. ವಿಧಾನ ವ್ಯತ್ಯಾಸವಾಗಬಹುದು. ಅದು ಮಾಡುವ ರಚನಾತ್ಮಕ ಟೀಕೆಯನ್ನು ಆಡಳಿತ ಪಕ್ಷ ಗೌರವದಿಂದ ಸ್ವೀಕರಿಸಬೇಕು. ಮುಷ್ಕರ ಧರಣಿ ಕಲಹ ಬಯ್ಗುಳ ಅನುಚಿತ ಕಾಲಹರಣ ತಪ್ಪಬೇಕು ; ಸಾಮಾನ್ಯ ಜನತೆಯ ರಕ್ತ ಬೆವರುಗಳ ಬಸಿತದಿಂದ ಉತ್ಪತ್ತಿಯಾಗುವ ಹಣವನ್ನು ಜೋಕೆ ಜೋಪಾನದಿಂದ ಖರ್ಚುಮಾಡಬೇಕು. ಆಡಳಿತ ಪಕ್ಷದವರಾಗಲಿ, ವಿರೋಧ ಪಕ್ಷದವರಾಗಲಿ ಮಿತ್ರರಂತೆ, ಸಹೋದರರಂತೆ, ಭಾರತಮಾತೆಯ ಕನ್ನಡ ತಾಯಿಯ ಮಕ್ಕಳಂತೆ ಮಾನವರಂತೆ ವರ್ತಿಸಬೇಕೇ ಹೊರತು, ಆಜನ್ಮ ಶತ್ರುಗಳಂತೆ ದ್ವೇಷದಿಂದ ವರ್ತಿಸಬಾರದು. ದೇಶದ ಸರ್ವಾಂಗೀಣ ಏಳ್ಗೆ

ನ್ಯಾಯಾಲಯಗಳ ತೀರ್ಪು ಪ್ರಶ್ನಾತೀತವಲ್ಲ. ತೀರ್ಪು ನೀಡುವವರು ಎಲ್ಲರಂಥ ಮನುಷ್ಯರೇ ಆಗಿದ್ದು ದುರಾಗ್ರಹ ಪೂರ್ವಗ್ರಹಗಳಿಂದ ಮುಕ್ತರಲ್ಲ. ವರಿಷ್ಠ ನ್ಯಾಯಾಲಯಕ್ಕಿಂತ, ಜನತೆಯೇ ವರಿಷ್ಠತಮ ನ್ಯಾಯಾಲಯ. ಭಾಷಾ ಸಮಸ್ಯೆಯ ಬಗ್ಗೆ ತೀರ್ಪು ನೀಡುವಾಗ, ನ್ಯಾಯಾಲಯ ಪ್ರಜಾಪ್ರಭುತ್ವ ತತ್ತ್ವವನ್ನೂ ಮನೋವೈಜ್ಞಾನಿಕ ಸಿದ್ಧಾಂತಗಳನ್ನೂ ಟಾಗೋರ್ ಗಾಂಧಿಯರಂಥ ಮಹಾತ್ಮರ ಅನುಭವಗಳನ್ನೂ ಜನತೆಯ ಆಶಯವನ್ನೂ ಗಮನದಲ್ಲಿರಿಸಿಕೊಳ್ಳಬೇಕಾದ್ದು ಅತ್ಯವಶ್ಯ. ಭಾಷಾ ಅಲ್ಪಸಂಖ್ಯಾತರ ಮತ್ತು ಬಹುಸಂಖ್ಯಾತರ ಸಮಸ್ಯೆಯನ್ನು ಸಮನ್ವಯಗೊಳಿಸುವಾಗ ರಾಷ್ಟ್ರದ ಏಕತೆಯನ್ನು ಮರೆಯಬಾರದು. ತಂತಮ್ಮ ಭಾಷೆಯನ್ನು ಕಲಿಯುವ ಅವಕಾಶ ಸರ್ವರಿಗೂ ಇರಬೇಕಾದ್ದು ಧರ್ಮ. ಆದರೆ ವಿವಿಧ ವಿಷಯಗಳ ಕಲಿಕೆಯ ಮಾಧ್ಯಮ, ಆಡಳಿತ ಮಾಧ್ಯಮ ದೇಶ ಭಾಷೆಯೇ ಆಗಿರಬೇಕೆಂಬ ನೈಸರ್ಗಿಕ ತತ್ವವನ್ನು ಒಂದಲ್ಲ ಒಂದು ದಿನ ಎಲ್ಲರೂ ಅಂಗೀಕರಿಸಬೇಕಾಗುತ್ತದೆ. ನಾನು ಹಲವು ವರ್ಷಗಳಿಂದ ಹೇಳುತ್ತಿದ್ದೇನೆ, ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಮುಕ್ತಾವಕಾಶವಿರಲಿ, ಅವು ನಿರ್ದಿಷ್ಟ ಪ್ರಮಾಣದ ಶುಲ್ಕ ನೀಡುವಂತಾಗಲಿ, ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಮಾತ್ರ ಸರ್ಕಾರಿ ಉದ್ಯೋಗಗಳಲ್ಲಿ ಅವಕಾಶವಿರಲಿ ಎಂದು. ಕನ್ನಡೇತರ ಭಾಷೆಗಳಲ್ಲಿ ನಡೆಸುವ ಪತ್ರ ವ್ಯವಹಾರಗಳಿಗೆ ಶುಲ್ಕ ಕೊಡುವಂತಾಗಬೇಕು. ಈ ಸಲಹೆ ಯಾರ ಕಿವಿಗೂ ಬಿದ್ದಂತಿಲ್ಲ.

'ಹಿಂದಿಯನ್ನು ರಾಷ್ಟ್ರಭಾಷೆಯಾಗಿ ನಿಜವಾದ ಅರ್ಥದಲ್ಲಿ ರೂಪಿಸುವುದಕ್ಕಾಗಿ, ಅದನ್ನೊಂದು ಸಂಪರ್ಕ ಭಾಷೆಯಾಗಿ ಜಾರಿಗೆ ತರುವುದಕ್ಕಾಗಿ ಭಾಷಾ ಮೂಲಭೂತವಾದ ಮತ್ತು ಪ್ರಾದೇಶಿಕತೆ ಅಂಧಾಭಿಮಾನವನ್ನು ಕೈಬಿಡಬೇಕು' ಎಂದು ಪ್ರಧಾನಿ ವಾಜಪೇಯಿಯವರು ಲಂಡನ್‌ನಲ್ಲಿ ನಡೆದ ವಿಶ್ವ ಹಿಂದೀ ಸಮಾವೇಶಕ್ಕೆ ನೀಡಿದ ಸಂದೇಶ (೧೫–೯–೯೯ ಕನ್ನಡ ಜನ ಅಂತರಂಗ) ದಲ್ಲಿ ತಿಳಿಸಿದ್ದಾರೆ. ದೇಶ ಭಾಷೆಯ ಬಳಕೆಯನ್ನು ಪ್ರಾದೇಶಿಕತೆಯ ಅಂಧಾಭಿಮಾನವೆಂದು ಕರೆಯುವಾಗಲೇ ಅವರ ಹಿಂದಿಯ ಅಂಧಾಭಿಮಾನ ವ್ಯಕ್ತವಾಗುತ್ತದೆ. ರಾಷ್ಟ್ರದ ಎಲ್ಲ ಶಿಷ್ಟ ಭಾಷೆಗಳೂ ರಾಷ್ಟ್ರಭಾಷೆಗಳೆಂದು ರಾಜ್ಯಾಂಗ ಒಪ್ಪಿಕೊಂಡಿದೆ. ಭಾಷಾ ಸಮಸ್ಯೆ ಸಂಪೂರ್ಣವಾಗಿ ಪರಿಹಾರವಾಗಬೇಕಾದರೆ ಪ್ರತಿ ದೇಶಭಾಷೆ ಮತ್ತು ಹಿಂದಿ ಎರಡೂ ಜೋಡಿ ಸಂಪರ್ಕ ಭಾಷೆಗಳಾಗಲಿ, ತನ್ನಲ್ಲಿರುವ ನಾಲ್ಕು ಭಾಷೆಗಳಿಗೂ ಸಮಾನ ಸ್ಥಾನ ನೀಡಿರುವ ಸ್ವಿಟ್ಜರ್ಲೆಂಡ್ ಆದರ್ಶವಾಗಲಿ ಎಂದು ಇಲ್ಲಿ ಸೂಚಿಸಬಹುದಾಗಿದೆ. ಒಂದು ಸಂಸ್ಕೃತಿಯನ್ನು ನಾಶಪಡಿಸಬೇಕಾದರೆ, ಒಂದು ಪ್ರದೇಶದ ಜನರ ಅಂತಶ್ಶಕ್ತಿ ಆತ್ಮಗೌರವಗಳನ್ನು ನಿರ್ಮೂಲ ಮಾಡಬೇಕಾದರೆ, ಅಲ್ಲಿಯ ಭಾಷೆಯನ್ನು ಮೊದಲು ಕೊಲ್ಲಬೇಕೆಂಬ ಮೆಕಾಲೆ ಮಹಾಶಯನ

ಸೂತ್ರದ ಅರಿವು ನಮ್ಮ ಜನರಿಗಿರಬೇಕು; ಪ್ರಾದೇಶಿಕ ಸಂಸ್ಕೃತಿಗಳ ಸಮ್ಮಿಲನದಿಂದಾಗಿ ರಾಷ್ಟ್ರೀಯ ಸಂಸ್ಕೃತಿ ಸಂಪದ್ಭರಿತವಾಗಿದೆ, ವೈವಿಧ್ಯಮಯವಾಗಿದೆ, ಬಹುವರ್ಣರಂಜಿತವಾಗಿದೆಯೆಂಬ ಸತ್ಯ ನಾಯಕರಿಗೆ ಮನವರಿಕೆಯಾಗಬೇಕು. ನಮ್ಮ ರಾಷ್ಟ್ರನಾಯಕರು ತಮ್ಮ ಮಂಕುತನ, ವಿಚಿತ್ರ ಭಾವನೆ, ತಿಕ್ಕಲು ಬುದ್ಧಿ ಮತ್ತು ಜಾಣಗುರುಡನ್ನು ತೊರೆದು, ಜಗತ್ತಿನ ನಾನಾ ದೇಶಗಳಲ್ಲಿ(ಇಂಗ್ಲೆಂಡೂ ಸೇರಿದಂತೆ)ಭಾಷಾಸಮಸ್ಯೆಯನ್ನು ಹೇಗೆ ಬಿಡಿಸಿಕೊಳ್ಳುತ್ತಿದ್ದಾರೆಂಬುದನ್ನು ಮರೆತು ಅವಿವೇಕ ಅಂಧಾಭಿಮಾನವನ್ನು ಪ್ರದರ್ಶಿಸುವುದಾದರೆ, ಬಾಂಗ್ಲಾದೇಶ, ಯುಗೋಸ್ಲಾವಿಯಾ, ಸೋವಿಯಟ್ ರಷ್ಯಾಗಳಿಗೊದಗಿರುವ ಗತಿಯೆ ಇಂಡಿಯಾಕ್ಕೂ ಒದಗುತ್ತದೆಯೆಂದು,ಇಂಡಿಯಾದ ಏಕತೆ ಭಾಷಾ ಸಾಮರಸ್ಯವನ್ನವಲಂಬಿಸಿದೆಯೆಂದು ಈ ಬಗ್ಗೆ ದೇಶದ ಹಿತದೃಷ್ಟಿಯಿಂದ ಎಚ್ಚರಿಕೆ ನೀಡಬೇಕಾಗಿದೆಯೆಂದು, ನಾಯಕತ್ವದಲ್ಲಿ ವಿನಯದಿಂದ ವಿನಂತಿಸಿಕೊಳ್ಳಬೇಕಾಗಿದೆ.

ಕವಿ ಕಣವಿಗೆ ಪಂಪ ಪ್ರಶಸ್ತಿ

ಕನ್ನಡ ಸಾಹಿತ್ಯಲೋಕದ ಆಧುನಿಕ ಮಹಾ ಸುವರ್ಣಯುಗದ ಸುಸಮೃದ್ಧ ಸೋಜ್ವಲ ವೈಭವಕ್ಕೆ ಪಾಶ್ಚಾತ್ಯ ಸಾಹಿತ್ಯಗಳೊಡನೆ ಹೋಲಿಸುವಾಗ ಕನ್ನಡ ಸಾಹಿತ್ಯ ಹಿಂದೆ ಬಿದ್ದಿಲ್ಲವೆಂಬ ಹೆಮ್ಮೆಗೆ ಕಾರಣರಾದವರಲ್ಲಿ ಕವಿ ಚನ್ನವೀರಕಣವಿಯವರೂ ಒಬ್ಬರು. ಸಾಹಿತ್ಯ ಕ್ಷೇತ್ರದಲ್ಲಿ ಅವರ ಸಾಧನೆ ನಾಲ್ಕು ದಶಕಗಳ ದೀರ್ಘಾವಧಿಯದು. ಕಾವ್ಯವೇ ಅವರ ಧರ್ಮ ಕರ್ಮಯೋಗ ಬದುಕು ಎಲ್ಲವೂ; ಅವರ ಜೀವದ ಜೀವಾತುವೂ ಅದೇಯೆ. ಉಳಿದ ಅವರ ದೈನಂದಿನ ಕರ್ಮಗಳೆಲ್ಲ ಮಾತ್ರವಲ್ಲ, ಅವರ ಲೌಕಿಕಾಸಕ್ತಿಗಳೆಲ್ಲವೂ ಕಾವ್ಯಾರಾಧನೆ ಸಾಧನೆಗಳಿಗೆ ಮೀಸಲು, ಪ್ರೇರಕ, ಪೋಷಕ; ಅವರ ಕಲ್ಪನೆಯ ಮುಕ್ತಿಗೆ ಅದೇ ಮಹಾದ್ವಾರ.

ಕಾವ್ಯಾಕ್ಷಿ, ಭಾವಜೀವಿ, ಆಕಾಶಬುಟ್ಟಿ, ಮಣ್ಣಿನ ಮೆರವಣಿಗೆ, ನೆಲಮುಗಿಲು, ನಗರದೆಲ್ಲಿ ನೆಳಲು ಮೊದಲಾದ ಹದಿನಾಲ್ಕು ಕವಿತಾ ಸಂಕಲನಗಳಲ್ಲಿ ನೂರಾರು ವಿಷಯಾಶಯಗಳ ಭಾವಾತ್ಮಕವೂ, ರಸಾತ್ಮಕವೂ, ಉಪಮಾ ರೂಪಕ ಪ್ರತಿಮಾ ಸಂಶ್ಲಿಷ್ಟವೂ ಆದ ಅಭಿವ್ಯಕ್ತಿಯಿದೆ. ಕಾಮ ಪ್ರೇಮ ಸ್ನೇಹ ವಾತ್ಸಲ್ಯ ಆಶೆ ನಿರಾಶೆ ವಿಷಾದ ಮೊದಲಾದ ಮಾನವಸಹಜ ಭಾವವಿಭಾವ ಸ್ವಭಾವಗಳ ಚಿತ್ರಣವನ್ನಿಲ್ಲಿ ಕಾಣಬಹುದು. ಪ್ರಕೃತಿ ವರ್ಣನೆಯಲ್ಲವರು ಆನಂದವನ್ನು ಕಾಣುತ್ತಾರೆ; ಚೈತನ್ಯೋಲ್ಲಾಸ ರಸಭೋಗವನ್ನನುಭವಿಸುತ್ತಾರೆ. ಆತ್ಮಕಥನರೂಪದ 'ಭಾವಜೀವಿ' ಆತ್ಮಶೋಧ

ಹಾಗೂ ಆತ್ಮನಿವೇದನೆಯ ಸುಂದರ ದೀರ್ಘ ಕವಿತೆ. ಭಾವಜೀವಿ ಯಾವಾಗಲೂ ಆಶಾವಾದಿಯೆಂಬುದನ್ನು ಮರೆಯುವಂತಿಲ್ಲ. ಸಮಕಾಲೀನತೆ ಅವರ ಕವಿತೆಗಳಲ್ಲಿ ಗಾಢವಾಗಿದೆ. ಆಧುನಿಕ ನಾಗರಿಕತೆಯ ದೊರಗು ದೊಸಕು ದೊಳ್ಳಾಸ ವಿಪರ್ಯಾಸ ವೈಪರೀತ್ಯಗಳನ್ನವರು ಬಲ್ಲರು. 'ಕುಸಿಯುತೊಡಗಿದೆ ಕೆಳಗೆ ನೆಲಗಟ್ಟು, ಮೇಲೆ ಬಿದ್ದಿದೆ ಭಾರ ನೀಗದಷ್ಟು' (ಮಣ್ಣಿನ ಮೆರವಣಿಗೆ) ಎಂಬ ವಾಸ್ತವ ಸ್ಥಿತಿ ಅವರಿಗೆ ಗೊತ್ತಿದ್ದರೂ ಅವರನ್ನು ನಿರಾಶೆ ಕಾಡುವುದಿಲ್ಲ. ಸಮಾಜದ ಆಗುಹೋಗುಗಳಿಗೆ ಅವರು ಪ್ರತಿಕ್ರಿಯಿಸುವರಾದರೂ,

ಕಾಲಗತಿಯೊಡನೆ ಸಮರಸವಾಗಿ ಸಾಗುವುದೆ
ಜೀವನ ಪ್ರವಾಹಕ್ಕೆ ದೊರೆತ ಗುರಿಯು

(ಹೊಸ ಬಾಳು ನಮ್ಮದಿದೆ) ಎನ್ನುವಲ್ಲಿ ಅವರ ಜೀವನಶ್ರದ್ಧೆ ಹಾಗೂ ಸಮತೋಲನ ಪ್ರಜ್ಞೆ ಎದ್ದು ಕಾಣುತ್ತದೆ. ಅನೇಕ ವಿಭೂತಿ ಪುರುಷರನ್ನು ಕುರಿತ ಕವಿತೆ ಹಾಗೂ ಸುನೀತಗಳಲ್ಲಿ ಅವರ ಬಗೆಗಿನ ಕಕ್ಕುಲತೆ, ಗೌರವ, ಆರಾಧನಾ ಮನೋಭಾವ, ಅವರಂತಾಗಬೇಕೆನ್ನುವ ಹಂಬಲ ಮೈದೋರುತ್ತವೆ.

ವಚನ ಸಾಹಿತ್ಯ, ಬೇಂದ್ರೆ ಮಧುರಚೆನ್ನರ ಕೃತಿಗಳು ಅವರ ಮೇಲೆ ವಿಶೇಷ ಪ್ರಭಾವ ಬೀರಿದ್ದರೂ ಕುವೆಂಪು ಪುತಿನ ವಿನಾಯಕ ವ್ಹಿಟ್‌ಮನ್ ಏಲಿಯಟ್‌ರನ್ನು ಮರೆತಿಲ್ಲವಾದರೂ ಅವುಗಳನ್ನು ಮೀರಿ ಸ್ವಂತಿಕೆ ಸ್ವೋಪಜ್ಞತೆಗಳನ್ನು ಪ್ರಾಮಾಣಿಕೆಯನ್ನು ಅವರು ತಮ್ಮ ಕವಿತೆಗಳಲ್ಲಿ ಪ್ರತಿಬಿಂಬಿಸಿದ್ದಾರೆ. ತಮ್ಮ ಜೀವಿತ ಕಾಲದಲ್ಲಿಯೇ ಅನೇಕ ಸಾಹಿತ್ಯ ಪಂಥ ಚಳುವಳಿಗಳು ಆಗಿಹೋಗಿದ್ದರೂ ಕುವೆಂಪು ಶಿವರುದ್ರಪ್ಪರಂತೆ ಯಾವುದಕ್ಕೂ ಶರಣಾಗದೆ, ಯಾವುದನ್ನೂ ಬಿಡದೆ, ಎಲ್ಲವನ್ನೂ ಮೀರಿ ಮೇಲೆದ್ದ, ಆದರ್ಶ ವಾಸ್ತವತೆಗಳ ಸಮನ್ವಯವನ್ನು ಸಾಧಿಸುತ್ತ, ಅತಿರೇಕ ವೈಪರೀತ್ಯ ಔದ್ಧತ್ಯಗಳನ್ನು ಬಳಿ ಸೇರಿಸದೆ, ಸಾತ್ವಿಕ ಜೀವನದಿಂದ ಸಾಹಿತ್ಯವನ್ನೂ ಮೌಲಿಕ ಸಾಹಿತ್ಯದಿಂದ ಜೀವನನನ್ನೂ ಸಮೃದ್ಧಗೊಳಿಸಿಕೊಂಡ ಸಿದ್ಧ ಕವಿಯುವರು. ಕವಿಯಾಗಿ ಪ್ರಸಿದ್ಧರಾದಂತೆ, ವಿಮರ್ಶಕರಾಗಿಯೂ ಸಾಹಿತ್ಯ ಚಿಂತನ, ಸಮತೋಲನ ಮೊದಲಾದ ಐದು ಕೃತಿಗಳ ಮೂಲಕ ಹೆಸರು ಮಾಡಿದ್ದಾರೆಂಬುದನ್ನು ಗುರುತಿಸಲೇಬೇಕು. ಈ ಕವಿಗೆ ದೊರೆತ ಪಂಪ ಪ್ರಶಸ್ತಿ ನಿಜವಾದ ಯೋಗ್ಯತೆಗೆ ದೊರೆತ ಪುರಸ್ಕಾರವೆಂದು ತಿಳಿದು ಕನ್ನಡನಾಡು ಅವರಿಗೆ ಕೃತಜ್ಞತಾಪೂರ್ವಕವಾಗಿ ಅಭಿನಂದಿಸುತ್ತದೆ.

ಇನ್ನೆಲ್ಲಿಯ ಚಂದ್ರಶೇಖರ ಆರಾಧ್ಯರು ?

ನಿನ್ನೆ ಸಂಜೆ (೨೫-೧೧-೯೯) ಚಂದ್ರಶೇಖರ ಆರಾಧ್ಯರು ಶಿವಸಾಯುಜ್ಯ ಹೊಂದಿದರೆಂಬ ಸಂಕಟದ ಸುದ್ದಿ ಇಂದು ಬೆಳಿಗ್ಗೆ ನನ್ನ ಕಿವಿದೆರೆಯನ್ನು ಮೀಟಿದಾಗ, ನಾಡಿಯು ಮಿಡಿತವನ್ನು ತೀವ್ರಗೊಳಿಸಿದಾಗ, ನಾನು ಕೆಲವು ನಿಮಿಷ ಅವಾಕ್ಕಾದೆ. ಎಂದೂ ಬರದಿದ್ದ ಅವರು ಕಳೆದ ವಾರ ಇದೇ ದಿನ (೧೯-೧೧-೯೯) ನನಗೆ ವಿದಾಯ ಹೇಳಿ ಹೋಗಲು ನನ್ನ ಕುಟೀರಕ್ಕೆ ಬಂದಿದ್ದರೇನೊ ಎಂದು ಈಗ ನನಗನ್ನಿಸುತ್ತಿದೆ. ಈ ಒಂದು ಅಗೋಚರ ಪ್ರಜ್ಞೆಯ ಘಟನೆಯಿಂದ ನನ್ನ-ಅವರ ಭಾವಸಂಬಂಧ, ಅವರು ನನ್ನಲ್ಲಿಟ್ಟಿದ್ದ ಅಪೂರ್ವ ಗೌರವ, ಅಕ್ಕರೆ ಮತ್ತು ವಿಶ್ವಾಸಗಳು ಅಭಿವ್ಯಕ್ತವಾಗುತ್ತವೆ.

ಅವರು ಬಂದರು. ಅವರ ಬರವು ನನಗೇ ಆಶ್ಚರ್ಯವಾಯಿತು. ವಯಸ್ಕರ ಶಿಕ್ಷಣ ಸಮಿತಿಯ ವಿದ್ಯಮಾನಗಳನ್ನು ವಿವರಿಸಿದರು. ಅದರ ಇತಿಹಾಸವನ್ನು ಮೆಲುಕು ಹಾಕಿದೆವು. ಸರ್ಕಾರ ನಡಸುವವರಿಗೆ ಅದರ ಮಹತ್ವದ ಅರಿವಿಲ್ಲ ಎಂಬುದನ್ನು ನೆನೆದು ವಿಷಾದಗೊಂಡೆವು. ಸಮಿತಿಯ ಕೆಲವು ಆಗುಹೋಗುಗಳನ್ನು ನೆನೆಸಿಕೊಂಡು ಅವರು ವಿಹ್ವಲಿಸಿದರು. 'ನಾನು ಹೋಗಿ ಬರಲೆ ? ಸಾರ್' ಎಂದು ಎದ್ದು ನಿಂತು ಕೈಮುಗಿದರು. ಹೊರಗೆ ಹೋಗುತ್ತ ಹೋಗುತ್ತ ಎರಡು ಮೂರು ಸಾರಿ ನನ್ನತ್ತ ತಿರುಗಿ ನೋಡಿದರು. ನೋಡುವಾಗ ಅವರ ಮುಖದ ಮೇಲೆ ನಗೆಮಿಂಚು ಅಲೆದಾಡುತ್ತಿತ್ತು. ಆ ನಗುವಿನ ಅರ್ಥ ನನಗಾಗ ಗೊತ್ತಾಗಲಿಲ್ಲ.

ಪುಸ್ತಕ ಪ್ರಪಂಚಕ್ಕೆ ತಾಯಿಯಂತಿದ್ದ, ರಕ್ಷೆಯಾಗಿದ್ದ, ಜೀವಾಳವಾಗಿದ್ದ ಆರಾಧ್ಯರು ಅದನ್ನು ತಬ್ಬಲಿ ಮಾಡಿ, ಸಹೋದ್ಯೋಗಿಗಳಿಗೆ ವಿಯೋಗ ದುಃಖವನ್ನುಂಟುಮಾಡಿ, ಅನಿರೀಕ್ಷಿತವಾಗಿ, ಅಕಾಲಿಕ ಅಂತ್ಯವನ್ನನುಭವಿಸುತ್ತಾರೆಂದು ಅವರ ಬಳಿಯವರಾರೂ ಊಹಿಸಿರಲಿಲ್ಲ. ಅಂಥ ಮೃದುವಚನದ, ಸೌಮ್ಯ ಪ್ರವೃತ್ತಿಯ, ತಾಳ್ಮೆಯ, ಸ್ನೇಹಶೀಲದ, ಪ್ರಶಾಂತ ಚಿತ್ತದ, ಸದಾ ನಗೆಮೊಗದ ಸಜ್ಜನರಿಗೆ, ಶಿವಪ್ರೇಮಿಗೆ ಅಕಾಲ ಮರಣವುಂಟೆ ಎಂಬ ಸಂದೇಹ ಜತೆಗಾರರ ಅಂತರಂಗವನ್ನು ಕಾಡುತ್ತದೆ ನಿಜ, ಶಿವಪ್ರೇಮಿಯಾದ್ದರಿಂದಲೇ ಬೇಗ ಶಿವಸಾನ್ನಿಧ್ಯವನ್ನು ಸೇರಿದರು.

ಹುಟ್ಟಿದಾಗಿನಿಂದ ಪುಸ್ತಕ ಪ್ರಪಂಚ ದಕ್ಷರಾದ ಸಂಪಾದಕರನ್ನು ಕಂಡಿದೆ. ಆ ಸಂಪಾದಕ ಪರಂಪರೆಯ (ಪ್ರೊ ಜಿ. ಹನುಮಂತರಾಯರು ಪ್ರಧಾನ ಸಂಪಾದಕರಷ್ಟೆ)ಲ್ಲಿ ನಾನು ಇಬ್ಬರನ್ನೆಂದೂ ಮರೆಯಲಾರೆ:

ರಾ. ವೆಂ. ಶ್ರೀನಿವಾಸಮೂರ್ತಿ ಮತ್ತು ಚಂದ್ರಶೇಖರ ಆರಾಧ್ಯ. ಇಬ್ಬರೂ ಬುದ್ಧಿವಂತರು, ಭಾವಶ್ರೀಮಂತರು, ಸದಭಿರುಚಿಸಂಪನ್ನರು. ಸಹನೆ ಸಹಕಾರ ಅವರ ಹುಟ್ಟುಗುಣ; ಪ್ರೊ. ಜಿ. ಟಿ. ನಾರಾಯಣರಾಯರಂತೆ ಹೊಸ ಲೇಖಕರನ್ನು ಸೃಷ್ಟಿಸುವಲ್ಲಿ ದಿಮ್ಮಿದರು. ಆ ಈ ಭೇದ ಅವರ ಬಳಿ ಎಂದೂ ಸುಳಿದಿದ್ದಿಲ್ಲ; ಯೋಗ್ಯತೆಗೆ ಪಟ್ಟ ಕಟ್ಟಿದವರು. ಅದರಿಂದಾಗಿ ಪುಸ್ತಕ ಪ್ರಪಂಚ ಸಂಪುಷ್ಟವಾಗಿ, ಬಹುಜನಪ್ರಿಯವಾಗಿ, ಲೋಕಕಲ್ಯಾಣಕಾರಿಯಾಗಿ, ಕನ್ನಡನಾಡಿನ ಆಶಾಕಿರಣವಾಗಿ ಬೆಳೆಯಿತು.

ಚಂದ್ರಶೇಖರ ಆರಾಧ್ಯರು ನಿಜವಾದ ಅರ್ಥದಲ್ಲಿ ಅಜಾತಶತ್ರು. ಸಂಪಾದಕ ಮಂಡಲಿಯ ಎಲ್ಲ ಸದಸ್ಯರೂ ಅವರನ್ನು ತಮ್ಮ ಸೋದರ ಬಂಧುವಿಗಿಂತ ಮಿಗಿಲಾಗಿ, ಆತ್ಮೀಯತೆಯಿಂದ ಪ್ರೀತಿಸುತ್ತಿದ್ದರು, ಗೌರವಿಸುತ್ತಿದ್ದರು. ಆರಾಧ್ಯರ ಮರಣದಿಂದ ಮಂಡಲಿ, ಪುಸ್ತಕ ಪ್ರಪಂಚದ ಬಳಗ ಹಾಗೂ ಆರಾಧ್ಯರ ಬಂಧುಮಿತ್ರರು ಅಪಾರ ದುಃಖಕ್ಕೀಡಾಗಿದ್ದಾರೆ. ಆ ದುಃಖವನ್ನು ಭರಿಸುವ ಶಕ್ತಿಯನ್ನು ವಿಶ್ವಶಕ್ತಿ ಸರ್ವರಿಗೂ ನೀಡಲೆಂದು ಪ್ರಾರ್ಥಿಸುತ್ತೇನೆ.

ಸನ್ಮಾನ್ಯ ಶ್ರೇಷ್ಠ ನ್ಯಾಯಮೂರ್ತಿಗಳು ಕನ್ನಡದಲ್ಲಿ ಬೋಧಿಸಿದ ಪ್ರತಿಜ್ಞೆಯನ್ನು ಸನ್ಮಾನ್ಯ ರಾಜ್ಯಪಾಲರು ಕನ್ನಡದಲ್ಲಿಯೇ ಸ್ವೀಕರಿಸಿದ್ದನ್ನು ಕೇಳಿದಾಗ ನನ್ನಂತೆ ಸಮಸ್ತ ಕನ್ನಡಿಗರೂ ರೋಮಾಂಚಗೊಂಡಿರಬೇಕೆಂದು ನಂಬಿದ್ದೇನೆ. ತಾವು ಜಡ ನಿಷ್ಕ್ರಿಯಾ ರಾಜ್ಯಪಾಲರಾಗದೆ, ಕನ್ನಡ ಕಲಿತು ಉಪಯುಕ್ತ ಕ್ರಿಯಾಶೀಲ ರಾಜ್ಯಪಾಲರಾಗಿ ಜನಜೀವನದಲ್ಲಿ ಒಂದಾಗುವ, ಸಮಾಜಸೇವೆಯಲ್ಲಿ ನಿರತರಾಗುವ ಅವರ ಬಯಕೆಯಂತು ಅತ್ಯಂತ ಪರಿಣಾಮಕಾರಿಯಾಗಿ, ಅವರು ಕನ್ನಡಿಗರ ಆಶೋತ್ತರಗಳ ಸಂಕೇತವಾಗಬಹುದೆಂಬ ನಂಬಿಕೆಯನ್ನು ಪ್ರತೀಕ್ಷೆಯನ್ನು ಶ್ರೀಮತಿ ರಮಾದೇವಿಯವರು ಜನಮನದಲ್ಲಿ ಮೂಡಿಸಿದ್ದಾರೆ. ಕನ್ನಡ ಭುವನೇಶ್ವರಿಯ ಅಂಶಾವತಾರದಂತಿರುವ ಈ ತಾಯಿಯ ಬಯಕೆಯಂತೆ ರಾಜಭವನದಲ್ಲಿಯೂ ಕನ್ನಡ ವಿಜೃಂಭಿಸುವುದಾದರೆ, ಇಡೀ ರಾಜ್ಯದಲ್ಲಿ ಕನ್ನಡದ ಸ್ಥಾನಮಾನಗಳು ಸುಭದ್ರವೆಂದು ಧೈರ್ಯ ತಾಳಬಹುದಾಗಿದೆ. ಇಂಥ ಅಪೂರ್ವ ರಾಜ್ಯಪಾಲರ ಪ್ರತಿಜ್ಞೆ ಈಡೇರಲಿ, ಅವರು ಸಮಗ್ರ ಕನ್ನಡಿಗರ ಅಭಿವಂದನೆ ಕೃತಜ್ಞತೆಗಳಿಗೆ ಪಾತ್ರರಾಗಲೆಂದು ಹಾರೈಸುತ್ತೇನೆ.

ದೇಜಗೌ

ಚನ್ನವೀರ ಕಣವಿಯವರ ಜೀವನದೃಷ್ಟಿ

ಡಾ|| ಮಂಜುಳಾ ಹುಲ್ಲಹಳ್ಳಿ
ಉಪನ್ಯಾಸಕಿ, ಶ್ರೀ ವಿವೇಕಾನಂದ ಕಾಲೇಜು
ಜಯಲಕ್ಷ್ಮೀಪುರಂ, ಮೈಸೂರು

ಅರವತ್ತೈದನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕನ್ನಡ ನಾಡಿನ ಗಮನವನ್ನು ತಮ್ಮತ್ತ ಸೆಳೆದು ಕೊಂಡ ಪ್ರೇಮಲ ಮನಸ್ಸಿನ, ರಸಿಕ ಹೃದಯದ, ಪರಿಶುದ್ಧ ಅಭಿರುಚಿಯ ಸಮತೋಲನ ನಿಲುವಿನ,ಸೂಕ್ಷ್ಮಾಂತಃಕರಣ ಪ್ರಜ್ಞೆಯ, ನವನವೋನ್ಮೇಷ ಪ್ರತಿಭಾ ವಿಲಾಸದ, ಜ್ಞಾನದಾಸೋಹಿ, ಭಾವಜೀವಿ ಕವಿ ಶ್ರೀ ಚನ್ನವೀರ ಕಣವಿ ಅವರು.

ಸ್ನೇಹ, ಪ್ರೀತಿ, ವಿಶ್ವಾಸ, ಹಾಸ
ಮಧುಹಾಸ ತುಂಬಿದೊಸಗೆ ||
ವಧುವಿನಂತೆ ನಸುನಾಚಿ ನಮಿಸಿ
ಈ ಜೀವ ಬಂತು ಹಸೆಗೆ ||

ಎನ್ನುವಂತಹ ಸೌಜನ್ಯಪೂರ್ಣ ವ್ಯಕ್ತಿತ್ವ.

ತಮ್ಮ ನಡೆನುಡಿಗಳ ಸಮನ್ವಯದಿಂದ, ಆಚಾರ ವಿಚಾರಗಳ ಸಾಂಗತ್ಯದಿಂದ, ಮತಿ ಕೃತಿಗಳ ಸಾಮರಸ್ಯದಿಂದ, ರಸ–ಧ್ವನಿ. ಔಚಿತ್ಯಪ್ರಜ್ಞೆಯಿಂದ, ಹಸನಾದ ಸಾರ್ಥಕ ವಾದ ಪರಿಪೂರ್ಣವಾದ ಜೀವನಕಾವ್ಯದ ಸೊಗಸಿನಿಂದ ಕನ್ನಡದ ಜನಮನ ಗೆದ್ದು ಕೊಂಡಿರುವ ಕಣವಿಯವರು ಅದಕ್ಕಾಗಿ ಕನ್ನಡತಾಯಿಗೆ ಕಾಣಿಕೆಯಾಗಿ, ಕಾವ್ಯಾಕ್ಷಿ, ಭಾವಜೀವಿ, ಆಕಾಶಬುಟ್ಟಿ. ಮಧುಚಂದ್ರ, ದೀಪಧಾರಿ, ಮಣ್ಣಿನ ಮೆರವಣಿಗೆ, ನೆಲಮುಗಿಲು, ಎರಡು ದಡ, ನಗರದಲ್ಲಿ ನೆರಳು, ಜೀವಧ್ವನಿ, ಕಾರ್ತೀಕದ ಮೋಡ, ಜೀನಿಯಾ, ಹಕ್ಕಿಪುಚ್ಚ, ಶಿಶಿರ ದಲ್ಲಿ ಬಂದ ಸ್ನೇಹಿತ ಈ ಹದಿನಾಲ್ಕು ಕವನ ಸಂಕಲನಗಳನ್ನೂ ಸಾಹಿತ್ಯ ಚಿಂತನ, ಸಮಾಹಿತ, ಸಮತೋಲನ ಮುಂತಾದ ಐದು ವಿಮರ್ಶೆ ಕೃತಿಗಳನ್ನೂ ಕನ್ನಡದ ಕಾಲು ಶತಮಾನ, ಸಿದ್ಧಿವಿನಾಯಕ ಮೋದಕ, ಕವಿತೆಗಳು, ನವಿಲೂರು ಮನೆ ಯಿಂದ, ನವ್ಯಧ್ವನಿ, ಆಧುನಿಕ ಕನ್ನಡ ಕಾವ್ಯ, ರತ್ನ ಸಂಪುಟ ಮೊದಲಾದ ಹನ್ನೆರಡು ಸಂಪಾದಿತ ಕೃತಿಗಳನ್ನೂ ಬಾಬಾ ಫರೀದ್ ಎಂಬ ಒಂದು ಭಾಷಾಂತರ ವನ್ನೂ ಸಮರ್ಪಿಸಿದ್ದಾರೆ. ಇವರ 'ಜೀವ ಧ್ವನಿ'ಯು ಜೀವಂತ ಮಿಡಿತಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಕೂಡ ಸ್ಪಂದಿಸಿದೆ. ಅಂತೆಯೇ ಕೇಂದ್ರ ಸಾಹಿತ್ಯ ಅಕಾಡೆಮಿ, ರಾಜ್ಯ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಕನ್ನಡ

ವಿಶ್ವವಿದ್ಯಾನಿಲಯ ಮೊದಲಾದ ಗೌರವಾನ್ವಿತ ಸಂಸ್ಥೆಗಳ ಸದಸ್ಯತ್ವಗಳು ಇವರನ್ನು ಅರಿಸಿಕೊಂಡು ಬಂದಿವೆ.

ನಿಸರ್ಗ ಪ್ರಿಯತೆ, ಮಾನವೀಯತೆ, ಮೌಲ್ಯಪ್ರಜ್ಞೆ, ಅನುಭಾವಿಕತೆಗಳಿಂದ ಕೂಡಿದ ಇವರ ಪ್ರಾಮಾಣಿಕ ಮನೋಧರ್ಮ ಹಾಗೂ ಕಾವ್ಯಧರ್ಮಗಳಿಗೆ ಇವರ ಕೃತಿಗಳು ನಿಚ್ಚವಾಗಿ ಹೊಮ್ಮಿರುವುದರಿಂದ ಒಂದೊಂದು ಕೃತಿಯೂ ಕವಿಯ ಜೀವನ ದೃಷ್ಟಿಯನ್ನು ಹಿಡಿದಿಡುವಲ್ಲಿ ಸಾರ್ಥಕತೆ ಪಡೆಯುತ್ತದೆ.

ನಿಸರ್ಗದ ಚೆಲುವು, ಕುಟುಂಬದ ಒಲವು, ಸಮಾಜದ ಕಾಳಜಿ ಹಾಗೂ ಕಾವ್ಯಕ್ಷೇತ್ರದ ಕಳಕಳಿ ಇವು ಕವಿಯ ಗಮನವನ್ನು ಸೆಳೆದುಕೊಂಡ ಪ್ರಧಾನ ಭೂಮಿಕೆಗಳಾದುದರಿಂದ ಇವುಗಳ ಹಿನ್ನೆಲೆಯಲ್ಲಿ ಕವಿಯ ದೃಷ್ಟಿಯನ್ನು ಹಿಡಿದಿರಿಸಿಕೊಳ್ಳುವ ಕಿರುಯತ್ನ ಇಲ್ಲಿದೆ.

ದಿನದಿನಕೊಂದು । ಹೊಸತನ ತಂದು ।
ಸೆರಗನು ಹೊಚ್ಚಿ । ಕಣ್ಣಿವೆ ಮುಚ್ಚಿ ।
ತೆರೆತೆರೆದಂತೆ । ಚೆಲುವಿನ ಸಂತೆ ।

ಇಂಥ ಪ್ರಕೃತಿಯ ಕಡೆಗೆ ಇವರು ತೋರುವ ಗಾಢವಾದ ಪ್ರೀತಿ, ಸಹಜವಾದ ಹಂಬಲ, ಆತ್ಮೀಯವಾದ ಸ್ನೇಹಗಳ ಕಾರಣದಿಂದ ಪ್ರಕೃತಿಯೂ ಇವರೆಡೆಗೆ ಮನದುಂಬಿ ಒಲಿದಿದೆ. ಇವರ ಕಾವ್ಯಜೀವನದ ಜೀವದುಸಿರಾಗಿದೆ. ಇವರ ಪ್ರಕೃತಿ ಪ್ರೀತಿ ನೆರೆಹೊರೆಯವರಲ್ಲಿ ಸುಖ ದುಃಖ ಹಂಚಿಕೊಳ್ಳುವ ವಿವೇಕದ ರಸಪ್ರಜ್ಞೆಯದಾಗಿದೆ. ಆದರೆ ಅಷ್ಟಕ್ಕೆ ನಿಲ್ಲದೆ, ಪ್ರಕೃತಿಯೊಡನೆ ಅದ್ವೈತ ಭಾವನೆಯ ತುಡಿತ ಹೊಂದಿ ರಸಾನುಭವದ ಆನಂದರೂಪಿಯೂ ಆಗಿದೆ ಅಂತೆಯೇ ಇವರು ಹೂದೋಟದಲ್ಲಿ ಬಾಡಿರುವ ಹೂಗಳ ತೆಗೆದು ಒಣಗಿದೆಲೆಗಳ ಗುಡಿಸಿ, ಜರಜರಿಯಿಂದ ನೀರೆರೆದು ಅವಚನೀಯ ಸುಖ ಅನುಭವಿಸಿದಂತೆ, ಗಾಳಿಯೊಡನೆ ಕರುಮೋಡವಾಗಿ ಬಾನೆಲ್ಲಾ ಅಲೆಯಬೇಕೆಂದೂ ಬಾನದೇಗುಲದಲ್ಲಿ ನಮ್ರವಾಗಿ ಮೈದುಂಬಿ ನಿಲ್ಲಬೇಕೆಂದೂ ಮಳೆಯಬಿಲ್ಲ ಮೈದೊಡವೆ ಧರಿಸಿ ಮಣಿಹನಿಗಳಾಗಬೇಕೆಂದೂ ಚಂದ್ರನೆದೆಯ ತಿಳಿಯೊಲವನುಂಡು ಶ್ರೀಕಾಂತಿ ಪಡೆಯಬೇಕೆಂದೂ ಬಯಸುತ್ತಾರೆ. ಹೀಗಾಗಿ ಈ ಕವಿಯ ರಸದೃಷ್ಟಿಗೆ ಮಾವು ಹೂವಿನ ತೇರಿನಂತೆಯೂ ಹೊಂಗೆ ತುಂಬಿದ ಬಸುರಿಯಂತೆಯೂ ಬೂರಲ ಉರಿವ ದೀಪಸ್ತಂಭದಂತೆಯೂ ಕಾಣುವುದಷ್ಟೇ ಅಲ್ಲ ಆ ಗಿಡಾ ಈ ಗಿಡ ಒಂದೊಂದು ಜೇಂಗೊಡಗಳಾಗಿ ಬಾಂದೇವಿಗೆ ನೆಲದಾಯಿ ನೀಡುವ ಹೂಗೊಂಡೆಯ ಹೊಂಗೊಡಗಳಾಗಿ ಗೋಚರಿಸುತ್ತವೆ. ಇಂತಹ ಪ್ರಕೃತಿ ಸೌಂದರ್ಯದ ಸಾನ್ನಿಧ್ಯದಲ್ಲಿ ಕವಿ ಚೈತನ್ಯದ ಸ್ಫುರಿಯನ್ನು ಕಂಡು ಇದರಿಂದ ಬಾಳಕೊಳೆಯನ್ನು ತೊಳೆದುಕೊಂಡು ಬದುಕು ಸಿಂಗರಿಸಿಕೊಳ್ಳುವ ರಸದೀಕ್ಷೆಯನ್ನು ಪಡೆಯುತ್ತಾರೆ, ಜೊತೆಗೆ ಈ ಹಸಿರು ಸಾಮ್ರಾಜ್ಯದಲ್ಲಿ ಕುಸುಮಿಸಿರುವ ನೆಲದಾಯ ಕಾರುಣ್ಯವನ್ನು ಕಂಡ ಹಸುಮಕ್ಕಳಿಗೂ ಕಣ್ಮನಗಳಲ್ಲಿ ರಸಭಾವ ಸಂಚಾರಗೊಂಡು ಅವರೂ ಕವಿಗಳಾಗಬಹುದೆಂಬ ಪ್ರೇರಣೆಯನ್ನು ನೀಡುತ್ತಾರೆ. ವಿಶ್ವಕವಿಯ ದೃಶ್ಯಕಾವ್ಯವಾದ ಪ್ರಕೃತಿ ತನ್ನೆಡೆಯ ರಸವಾಟಿಕೆಯನ್ನು ತೆರೆದಿರಲು ಅದನು ಸವಿ ಹೀರದೆಯೇ ಸಾಗಬಹುದೇ?

ಎಂದು ಕೇಳುತ್ತಾ ಬಾಳ ಹಾದಿಯಲ್ಲಿ ಸಾಗುವ ಒಬ್ಬೊಬ್ಬ ಪಥಿಕನೂ ಪ್ರಕೃತಿಯೋಪಾಸಕನಾಗಿರಬೇಕೆಂದು ಹಂಬಲಿಸಿದ್ದಾರೆ.

ಹೀಗೆ ನಿಸರ್ಗದ ಸೊಬಗು-ಸೌಂದರ್ಯ, ಬೆಡಗು-ಬಿನ್ನಾಣ, ಆಟನೋಟಗಳನ್ನೆಲ್ಲಾ ಊಹೆಯ ನಯವಾದ ಎಳೆಯಲ್ಲಿ ಕಲ್ಪನೆಯ ಜಾಲದಲ್ಲಿ, ಮೃದುಶಬ್ದಗಳ ಮಲಕಿನಲ್ಲಿ ಸೆರೆಹಿಡಿದು ರಸಿಕರಿಗೆ ಹೊಸ ದೃಷ್ಟಿ ನೀಡಿದ್ದಾರೆ.

ಇನ್ನು ಕವಿಯ ಕುಟುಂಬ ವತ್ಸಲತೆಯ ಬಗೆಗೆ ಕಣ್ಣು ಹಾಯಿಸಿದರೆ, ಇವರ ಬಾಲ್ಯ ಇವರ ಬಾಳಸಂಪುಟದಲ್ಲಿ ಅಳಿಸಲಾರದ ಒಂದು ಮಧುರ ಭಾವಗೀತವಿದ್ದಂತೆ ತಂದೆ ನಸುಕಿನಲ್ಲೆದ್ದು ಓದುತ್ತಿದ್ದ ಅನುಭವಾಮೃತವನ್ನು ಸಕ್ಕರೆಯ ನಿದ್ದೆಯೊಂದಿಗೇ ಸವಿದು ನಾದಲಹರಿಯ ನೂಲ ನೇಯ್ದು ಬೆಳೆದ ಇವರಿಗೆ ಈಗಿನ ಈ ತುಂಬು ಹರೆಯದಲ್ಲೂ ಬಾಲ್ಯದ ಆಟ-ನೋಟಗಳು ತಟ್ಟನೆ ನೆನಪಾಗುತ್ತಿರುತ್ತವೆ. ಹರೆಯದಲ್ಲಿ ಕನಸಿನ ಹೊನ್ನತಾವರೆ ಹೂವರಳಿ ಬೊಗಸೆಯಲ್ಲಿ ಕಂಗೊಳಿಸಿದಾಗ, ಸೃಷ್ಟಿಯ ಸೌಂದರ್ಯೋಪಾಸನೆಯಲ್ಲಿ ಜೊತೆಯಾದ ಮೀನುಕಂಗಳ ಸಖಿ ರಾಗಪುಲಕಿತೆಯಾಗಿ ಎದೆಯನಾಳುವಾಗ, ಮಳೆ ಬಂದ ಮರುಚಣದ ಇಳೆಯ ಹೊಸತನದಂತೆ ಸಂತೃಪ್ತರಾದ ಇವರ ಜೋಡಿಯನ್ನು ಕಂಡ ಸೂರ್ಯಚಂದ್ರರೂ ನಕ್ಕು ಹೊನ್ನ ಜೊನ್ನ ಕಿರಣಗಳಲ್ಲಿ ಶಾಂತಿ ಸವಿಯನ್ನಿತ್ತರಂತೆ. ಮುಂದೆ ಇವರ ಬಾಳ ಬಳ್ಳಿಗೊಗೆದ ಹೊಚ್ಚ ಹೊಸತು ಮಲ್ಲಿಗೆಗಳ ಜೊತೆಯಲ್ಲಿ ಇವರೂ ಮಗುವಾಗಿ ಬೆಳೆದಿದ್ದಾರೆ. ಗುಬ್ಬಿಯ ಪುಟ್ಟ ಆಕೃತಿಯಲ್ಲಿಯೂ ತಾಯ ವಿಶಾಲ ಹೃದಯವನ್ನು ಕಂಡು ಮಣಿದಿದ್ದಾರೆ. ಗೆಳೆತನದ ಸಾರಸವಿಯನ್ನು ಮನದಣಿಯೇ ಹೀರಿ, ಅದರ ಶುಚಿರುಚಿಗೆ ಎಣೆಯಾದದ್ದು ಈ ಲೋಕದಲ್ಲಿ ಯಾವುದೂ ಇಲ್ಲ ಎಂದು ಸಾರಿ ಶುದ್ಧ ಗೆಳೆತನದ ಹಂಬಲವನ್ನು ಎದೆಯಾಳಗಳಲ್ಲಿ ಬಿತ್ತಿದ್ದಾರೆ. ಹೀಗೆ ಹಸನಾದ ಬಾಳಿಗೆ ಪರಮ ಪ್ರೀತಿಯೇ ನೆಲಗಟ್ಟು, ಪ್ರೀತಿಯೇ ಚೌಕಟ್ಟು ಬೇರೆಯಲ್ಲ ಎಂದು ತುಂಬು ಪ್ರೀತಿಯೇ ಬದುಕಿನ ಸಿದ್ಧಾಂತವೆಂದು ಘೋಷಿಸಿ ಜೀವನದ ಯಶಸ್ಸಿನ ಸೂತ್ರವನ್ನು ತೆರೆದಿಟ್ಟಿದ್ದಾರೆ.

ಕವಿಯ ಸಾಮಾಜಿಕ ನಿಲುವಿನತ್ತ ಗಮನ ಹಾಯಿಸಿದರೆ ಇವರದು ಸಮಾಜದತ್ತ ಸದಾ ತೆರೆದ ಕಣ್ಣು ಎಂಬುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದಲೇ ಇವರ ಕಾವ್ಯ ಜೀವಂತಗತಿಯನ್ನು ಪಡೆದುಕೊಂಡಿರುವುದು. ಹೊಲತುಂಬ ಸಿಕ್ಕಂತೆ ಬೀಜ ಚೆಲ್ಲಿದರೆ ಬರುವುದೆಲ್ಲ ಬೆಳೆಯಲ್ಲ, ಕಳೆ ಎಂದು ಅತಿಸಂತಾನದ ವಿರುದ್ಧ ಎಚ್ಚರಿಕೆ ನೀಡಿದ್ದಾರೆ. ಸೌಂದರ್ಯಸ್ಪರ್ಧೆಗಳಂತಹವು ವಿಶ್ವಸೌಂದರ್ಯಕ್ಕೆ ತಿದ್ದಿ ತೀಡಿದ ಗಂಧದಂತಿರಬೇಕೆಂದು ವ್ಯಾಖ್ಯಾನಿಸಿದ್ದಾರೆ. ಒಂದು ರೈಲುಗಾಡಿಯ ಪಯಣದ ಪ್ರತೀಕದಲ್ಲಿ ಇಡೀ ವಾಸ್ತವ ಬದುಕಿನ ಅಸ್ತವ್ಯಸ್ತತೆ ಮತ್ತು ಅರ್ಥಹೀನತೆಯನ್ನು ಸೊಗಸಾಗಿ ಚಿತ್ರಿಸಿದ್ದಾರೆ. ಭೂಮಿ-ಕಾಲ ಮನುಷ್ಯರ ನಡುವಣ ಸಂಬಂಧವನ್ನು ಕುರಿತಂತೆ ಆಳವಾದ ವಿಚಾರಮಾಡಿದ್ದಾರೆ. ಸಮಕಾಲೀನ ರಾಜಕೀಯ ಭ್ರಷ್ಟಾಚಾರಗಳನ್ನೂ ರಾಜ

ಕಾರಣಗಳನ್ನೂ ಮನೋಜ್ಞವಾಗಿ ವಿಡಂಬಿಸುತ್ತಾ ಭಾರತೀಯ ಪ್ರಜಾಪ್ರಭುತ್ವಕ್ಕೆ ಒದಗಿರುವ ಆತಂಕ ಆಘಾತಗಳ ಬಗೆಗೆ ಕಳವಳಿಸಿದ್ದಾರೆ.

ಬೆಳೆಯುತ್ತಿರುವ ಚಿಣ್ಣರ ಬಗೆಗೆ ಕಾಳಜಿ ವ್ಯಕ್ತಪಡಿಸುತ್ತ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಅವರ ಮಾತೃಭಾಷೆಯಲ್ಲಿ ನೀಡುವ, ನಿಸರ್ಗದ ಒಡನಾಟದಲ್ಲಿ ಸಾಹಸ ಮನೋಭಾವ ರೂಢಿಸಿಕೊಳ್ಳುವಂತೆ ತರಬೇತಿ ನೀಡುವ ಬಗೆಗೆ ಚಿಂತಿಸುತ್ತಾರೆ ಮತ್ತು ಆ ಎಳೆಯ ಚೇತನಗಳನ್ನು ಕಲುಷಿತಗೊಳಿಸುತ್ತಿರುವ ಚಾಕ್ಷುಕ ಮಾಧ್ಯಮಗಳ ವಿರುದ್ಧ ಶಿಕ್ಷಣತಜ್ಞರು ಆಲೋಚಿಸಬೇಕೆಂದು ಎಚ್ಚರಿಸುತ್ತಾರೆ. ಮಕ್ಕಳು ಬಾಲ್ಯದಿಂದಲೇ ಪುಸ್ತಕ, ಹಣ, ಕಂಪ್ಯೂಟರ್, ಪದವಿ ಇವುಗಳೆಲ್ಲವನ್ನೂ ಮೀರಿದ್ದು ಜೀವನ ಎಂಬುದನ್ನು ಅರಿತು ಬೆಳೆಯಬೇಕೆಂಬುದು ಇವರ ಆಶಯ.

ಕನ್ನಡ, ಕನ್ನಡತನದ ಬಗೆಗೆ ಗಹನವಾಗಿ ಚಿಂತಿಸುವ ಕಣವಿಯವರು ನಾಡಿನ ಸದ್ಯದ ಅಸಮಾಧಾನಕರ ಪರಿಸ್ಥಿತಿಗೆ ಪ್ರಾದೇಶಿಕ ಅಸಮತೋಲನವೇ ಕಾರಣ ಎಂದು ಗುರುತಿಸಿ ಅಧಿಕಾರದ ಹಂಚಿಕೆಯಿಂದ ಪರಿಸ್ಥಿತಿ ಸುಧಾರಿಸಬಹುದೆಂಬ ಆಶಾಭಾವ ವ್ಯಕ್ತಪಡಿಸುತ್ತಾರೆ. ಇವರ ದೃಷ್ಟಿಯಲ್ಲಿ ಕನ್ನಡನಾಡು ಬರೀ ರಾಜಕೀಯ ಭೌಗೋಳಿಕ ಸೀಮಾರೇಖೆಯಲ್ಲ. ಅದು ಜೀವಂತ ಸೃಜನಶೀಲ ಜನಪದ ಸೃಷ್ಟಿ. ಅಂತಹ ಕನ್ನಡವ ಕೆಲಸಗಳನ್ನು 'ಆಡದೆಯೇ ಮನಮುಟ್ಟಿ ಮಾಡಿ ರೂಢಿಯೊಳಗುತ್ತಮ' ಎನಿಸಿಕೊಳ್ಳುವ ಯಶಸ್ವೀ ಸರ್ಕಾರದ ನಿರೀಕ್ಷೆಯಲ್ಲಿ ಇದ್ದಾರೆ.

ನಮ್ಮ ಮೇಲೆ ಸಾಂಸ್ಕೃತಿಕ ಮತ್ತು ವಾಣಿಜ್ಯ ಆಕ್ರಮಣ ನಡೆಯುತ್ತಿರುವ ಈ ಸಂಧಿಸಮಯದಲ್ಲಿ ಭಾರತೀಯತೆಯ ಪುನಃಶೋಧದ ತುರ್ತು ಅಗತ್ಯವನ್ನು ಎತ್ತಿ ಹೇಳುತ್ತಾ ಹಳೆಯ ಕಾಲದ ಜಡ್ಡು ಜಾಡ್ಯಗಳನ್ನು ಒದರಿ, ಜಾತಿ ವರ್ಗಗಳ ನಡುವಣ ವಿಧಿ ನಿಷೇಧದ ಕಟ್ಟುಕಟ್ಟಳೆಯ ಹುಟ್ಟಳಿಸಿ ಹೊಸ ಸ್ವಚ್ಛ ಸಮಾಜ ಕಟ್ಟಲು ಇಳೆಗೆ ಇಳಿದು ಆ ನಭಕೆ ಬೆಳೆದು ಜಗ ಕಾಸಿ ಬಡಿದ ಕುಲುಮೆಯಂಥ ಉತ್ಸಾಹ ತುಂಬಿದ ಯುವ ಜನತೆಯನ್ನು ಹುರಿದುಂಬಿಸುತ್ತಾರೆ. ದೇಶಕ್ಕೆ ಭವಿಷ್ಯವೇ ಇಲ್ಲ ಎಂದು ಕೈಚೆಲ್ಲಿ ಕುಳಿತುಕೊಳ್ಳುವ ಬದಲು ಪರಿಸ್ಥಿತಿ ಸುಧಾರಿಸುವ ಕಾರ್ಯವನ್ನು ಪ್ರತಿಯೊಬ್ಬರೂ ಆರಂಭಿಸಬೇಕೆಂದೂ ಬರಹಗಾರರು ಇವರಿಗೆ ಮಾರ್ಗದರ್ಶನ ನೀಡಬೇಕೆಂದೂ ಕರೆ ನೀಡಿದ್ದಾರೆ. ಇಡೀ ದೇಶದ ಸಮಗ್ರ ಬದಲಾವಣೆ ನವನಿರ್ಮಾಣ ಕ್ರಾಂತಿಯಿಂದ ಸಾಧ್ಯವಾಗುತ್ತದೆಂಬ ಭರವಸೆ ಇವರದು.

ಇನ್ನು ಕಾವ್ಯಕ್ಷೇತ್ರಕ್ಕೆ ಬಂದರೆ, ಹೊಸಗನ್ನಡ ಕಾವ್ಯ ದಾಟಿ ಬಂದಿರುವ ಎಲ್ಲಾ ಸ್ತರಗಳನ್ನು ತೀರ ಹತ್ತಿರದಿಂದ ಗಮನಿಸಿರುವ ಇವರು ಕಾವ್ಯದ ಈ ಬದಲಾವಣೆಗಳಲ್ಲಿ ಕೈಗೆ ಕೈ ಜೋಡಿಸಿ ಅದನ್ನು ಮುನ್ನಡೆಸಿದವರೂ ಆಗಿದ್ದಾರೆ. ಈ ರೀತಿಯ ಮಾರ್ಗ ಬದಲಾವಣೆಗೆ ಹಿಂದಿನ ಕಾವ್ಯಮಾರ್ಗದ ದೋಷವೇ ಮುಖ್ಯ ಕಾರಣ ಇದೊಂದು ಜೀವಂತ ಸಾಹಿತ್ಯದಲ್ಲಿ ನಿರಂತರವಾಗಿ ನಡೆಯುವ ಪ್ರಕ್ರಿಯೆ ಎಂಬುದನ್ನು ಗುರುತಿಸುತ್ತಾ ಇಂಥ ಸಾಹಿತ್ಯದಲ್ಲಿ ಯಾವುದೇ ಒಂದು ಪಂಥಾಭಿ

ಮೌನಿಯಾಗಿ ಉಳಿಯದೇ ಸಮಗ್ರ ಸಾಹಿತ್ಯದ ಬಗೆಗೆ ಒಲವು ಬೆಳೆಸಿಕೊಳ್ಳುವ ಅಗತ್ಯವನ್ನು ಎತ್ತಿ ಹಿಡಿಯುತ್ತಾರೆ. ಆದುದರಿಂದಲೇ ವಸ್ತುನಿಷ್ಠೆ ಮತ್ತು ವಾಸ್ತವಪ್ರಜ್ಞೆಗಳ ತಳಹದಿಯ ಮೇಲೆ ಬೆಳೆದಿರುವ ಇವರ ಕಾವ್ಯ ಯಾವುದೇ ಒಂದು ಸಿದ್ಧಾಂತಕ್ಕೆ ತಳುಕು ಹಾಕಿಕೊಂಡು ಸ್ಥಗಿತವಾಗದೆ ತನ್ನ ಅಭಿರುಚಿಗೆ ನಿಲುಕಿದ ಹಾಗೂ ಕಾವ್ಯಪ್ರಜ್ಞೆಗೆ ಒಳಗಾದ ಎಲ್ಲವುಗಳೊಂದಿಗೆ ನಂಟು ರಚಿಸಿಕೊಳ್ಳುತ್ತಾ ಐದು ದಶಕಗಳಿಂದಲೂ ತನ್ನ ಜೀವಂತ ಗತಿಯನ್ನು ಉಳಿಸಿಕೊಂಡಿದೆ, ಬೆಳೆಸಿಕೊಂಡು ಬರುತ್ತಿದೆ. ಮೊದಲಿಗೆ ಎಳೆಯ ಬೆರಗುಗಣ್ಣುಗಳಿಗೆ ಪರಿಚಿತವಾಗುವ ಈ ನೆಲದ ಸೊಬಗುಗಳನ್ನು, ಸೊಗಸುಗಳನ್ನು, ಒಗಟುಗಳನ್ನು ಚಿತ್ರಿಸುವ ಇವರ ಕಾವ್ಯ ನಂತರ ಬೆಳೆಬೆಳೆದಂತೆ ಅನುಭವಕ್ಕೆ ಬರುವ ಅದರ ವಾಸ್ತವಗಳನ್ನು, ಕಟುಸತ್ಯಗಳನ್ನು ಹೃದ್ಯವಾಗಿ ತೆರೆದಿಡುತ್ತದೆ. ಜೊತೆಗೇ ಈಗ ತಾನು ನಿಂತಿರುವ ಪರಿಸರ ಈ ವಿಶ್ವದ ಹಿನ್ನೆಲೆಯಲ್ಲಿ ಎಷ್ಟು ಅಸ್ತವ್ಯಸ್ತ, ಶೋಚನೀಯ ಎಂಬುದನ್ನು ಗುರುತಿಸುವ ಸಮಗ್ರತೆಯನ್ನು ಪಡೆದುಕೊಳ್ಳುತ್ತದೆ.

ಕವಿಯ ಮೂಲಮನೋಧರ್ಮದಲ್ಲಿ ತಟಸ್ಥಭೂಮಿಕೆಯಿಂದ ಸೃಷ್ಟಿ ಸೌಂದರ್ಯವನ್ನು, ಜೀವನ ಲೀಲೆಯನ್ನು ಕಣ್ಣಿಟ್ಟು ನೋಡಿ ಕುಸುರು ಕುಸುರಾದ ಚಿತ್ರಗಳನ್ನು ಕಟ್ಟುತ್ತಾ ಬಣ್ಣಿಸಬೇಕು ಎಂಬ ತುಡಿತ ಇದೆ. ಜಗದ ಯಾವುದೋ ಒಂದು ಮೂಲೆಯಲ್ಲಿ ಕುಳಿತು ಭೂರಂಗದಲಿ ನಡೆವ ಅಕಟೋವಿಕಟ ನಾಟಕದ ಹಿನ್ನೆಲೆಯನ್ನು ಬಗೆದು ನೋಡುವ ಬಯಕೆ ಇದೆ. ಆದರೆ ಇವರು ಬೊಗಸೆಗಂಗಳನ್ನು ತೆರೆದು ಜಗವ ತುಂಬಿದ ಬೆಳಕನ್ನು ಮೊಗೆಮೊಗೆದು ಕುಡಿದಷ್ಟೂ ಇವರ ಹೃದಯಾಂತರಾಳದ ಪುರಾತನ ದಾಹ ಹೆಚ್ಚಾಗಿ ಆ ಬೆಳಕು ಬಂದಷ್ಟು ಇಂಗುವ, ಮತ್ತೆ ಬರಿದಾಗುವ ಎಷ್ಟು ಸೆಲೆಯೊಡೆದರೂ ವಿಫಲ ಎನ್ನುವ ಅತೃಪ್ತಿಯ ಕುದಿತ ವೈಮನಸಗಳನ್ನು ತುಂಬಿಕೊಂಡು ಕವಿಯ ಆಕಾಂಕ್ಷೆ 'ಚಿರಂತನ ದಾಹ'ವಾಗಿಯೇ ಉಳಿಯುತ್ತದೆ. ಈ ದಾಹವೇ ಹೊಸ ಹೊಸ ದೃಷ್ಟಿಗಳಿಗೆ, ಹೊಸ ಸೃಷ್ಟಿಗಳಿಗೆ ಚಾಲಕ ಶಕ್ತಿಯಾಗುತ್ತದೆ.

ಕಾವ್ಯಕ್ಷೇತ್ರದ ವಿವಿಧ ಛಂದೋರೂಪಗಳಲ್ಲಿ ಕೈಯಾಡಿಸಿದರೂ 'ಹರಳುಗೊಂಡ ಕಾವ್ಯಪ್ರತಿಮೆ' ಎನಿಸುವ ಸುನೀತಗಳತ್ತ ಇವರದು ವಿಶೇಷ ಒಲವು.

ಕಡಲ ಗುಟುಕರಿಸಿ ಚಿಕ್ಕೆ ಮುಕ್ಕಳಿಸುವರು
ಹಣ್ಣಾದ ಕೇದಗೆಯ ಹೊಡೆ: ಚೂಪಾದ ಗರಿ;
ಹುಷಾರಿ
ಕಂಪಿಗೆಲ್ಲಿಯ ಕೊರತೆ? ನಡೆದದ್ದೇ ಸಾಧನಕೇರಿ
ನುಡಿದದ್ದೇ ಕವಿತೆ

ಇಂತಹ ಈ ಸಾಲುಗಳು ವ್ಯಕ್ತಿಚಿತ್ರಣದ ಸಾರ್ಥಕ ಭಾವವನ್ನು ಹೃದ್ಯವಾಗಿ ತೆರೆದಿಡುತ್ತವೆ.

ಆದರೂ ಕಾವ್ಯಕಲೆಯಲ್ಲಿ ಪರಿಣತಿ ಎಂಬುದು ಮೃಗಜಲದಂತೆ ಎಂಬ ಎಚ್ಚರವನ್ನು ಸದಾ ಹೊಂದಿರುವ ಕಣವಿಯವರು ಸಹೃದಯ ವಿಮರ್ಶಕರೂ ಹೌದು. ಕವಿಯ ಹೃದಯದಲ್ಲಿ ವಿಮರ್ಶಕ ಇರುವಂತೆ ವಿಮರ್ಶಕನ ಹೃದಯದಲ್ಲಿ ಕವಿಯೊಬ್ಬ ಅಡಗಿರುತ್ತಾನೆ ಎಂಬ ನಂಬಿಕೆಯಿಂದಲೇ

ವಿಮರ್ಶೆಗೆ ಕೈ ಹಚ್ಚುವುದರಿಂದ ವಿಮರ್ಶೆ ವಿವರಣೆಗಳಲ್ಲೂ ಇವರ ಗಮನ ಹರಿಯುವುದು ಚಲುವಿನತ್ತಲೇ. ಇವರಿಗೆ ಚನ್ನಾದುದರ ಅನುಭವ ಕಾವ್ಯವಾಗಿ ಮೂಡಿದರೆ ಆದರ ರಸಾನುಭವ ವಿಮರ್ಶೆಯಾಗಿ ಮೈದುಂಬಿಕೊಳ್ಳುತ್ತದೆ. ಪಾರಿಜಾತ ಹೂವ ಸುರಿದಂತೆ, ಮಲ್ಲಿಗೆಯ ಸವಿಯೊಲವು ಕರಗಿ ಕಂಬನಿಯಾಗಿ ಹೆಣ್ಣು ಕಣ್ಣಂಚಿನಲ್ಲಿ ತುಳುಕುವಂತೆ, ಮರವನಪ್ಪಿದ ಬಳ್ಳಿ ಬಳುಕುವಂತೆ ನಯನಾಜೂಕುಗಳ ಮಾತುಗಾರಿಕೆಯು, ಪ್ರೇಮ ಪವಿತ್ರತೆಗಳ, ಶುಭ್ರ ಮಾಧುರ್ಯಗಳ ಸೌಂದರ್ಯ ಸಂವೇದನೆಯು, ಕಾವ್ಯ ದೇವಾಯತನದ ರೂಹಾರಿಯಾಗಿ, ಭಾವದೇವಾಲಯದ ಪೂಜಾರಿಯಾಗಿ ಸದಾ ರಸಗಂಗೆಯಲ್ಲಿ ಮೀಯುವ ಈ ಚಿನ್ನಗನ್ನಡದ ಅಕ್ಕಸಾಲಿಯ ಜೀವನದೃಷ್ಟಿಯೂ ಅಷ್ಟೇ ಸೂಕ್ಷ್ಮವಾದುದು, ಉದಾತ್ತವಾದುದು, ಉನ್ನತವಾದುದು. ಕಾಲಮೌಲ್ಯವನ್ನುಳ್ಳದ್ದು. ಇದೀಗ ಕರ್ನಾಟಕ ಸರ್ಕಾರದ ಅತ್ಯುನ್ನತ ಪ್ರಶಸ್ತಿಯಾದ 'ಪಂಪ ಪ್ರಶಸ್ತಿ' ಇವರದಾಗಿರುವುದು ಇವರ ಸಾಧನೆಗೆ ಮೆಚ್ಚಿದ ಕನ್ನಡದೇವಿ ತೊಡಿಸಿರುವ ಅಮೂಲ್ಯ ತೊಡುಗೆ ಎಂಬ ಹೆಮ್ಮೆ ನಮ್ಮೆಲ್ಲರದು.



ಮರವಿದ್ದು ಫಲವೇನು ? ನೆಳಲಿಲ್ಲದನ್ನಕ್ಕ ಧನವಿದ್ದು ಫಲವೇನು ? ದಯವಿಲ್ಲದನ್ನಕ್ಕ ಹಸುವಿದ್ದು ಫಲವೇನು ? ಹದವಿಲ್ಲದನ್ನಕ್ಕ ರೂಪಿದ್ದು ಫಲವೇನು ? ಗುಣವಿಲ್ಲದನ್ನಕ್ಕ ಆಗಲಿದ್ದು ಫಲವೇನು ? ಮನವಿಲ್ಲದನ್ನಕ್ಕ ನಾನಿದ್ದು ಫಲವೇನು ? ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನಾ ?

—ಮಹಾದೇವಿಯಕ್ಕ

ನಾನು ನನ್ನದು, ಎಂಬ ಅಭಿಮಾನ ಬಿಡಿರಿ. ಮಾಡಬೇಕಾದ್ದನ್ನು ಕರ್ತವ್ಯ ದೃಷ್ಟಿಯಿಂದಲೂ ಶ್ರದ್ಧೆಯಿಂದಲೂ ಮಾಡಿ ಮುಗಿಸಿರಿ. ಅದರ ಫಲಾಫಲಗಳ ಕಡೆ ಗಮನ ಬೇಡ.

—ಪರಮಹಂಸ

ನಿದ್ರೆ

ಪ್ರೊ|| ಕೆ. ಕೇಶವಮೂರ್ತಿ
ವಿಶ್ರಾಂತ ಪ್ರಾಂಶುಪಾಲರು,
ಎಲ್–೪೧೧, ೭ನೇ ಮುಖ್ಯ ರಸ್ತೆ,
ರಾಮಕೃಷ್ಣನಗರ ಹೆಚ್. ಬ್ಲಾಕ್,
ಮೈಸೂರು–೫೭೦೦೨೩

ದುಡಿಯುತ್ತಿರುವ ದೇಹಕ್ಕೆ ಆಲೋಚಿಸುತ್ತಿರುವ ಮನಸ್ಸಿಗೆ ವಿಶ್ರಾಂತಿ ಬೇಕೇ ಬೇಕು. ವಿಶ್ರಾಂತಿಯಿಲ್ಲದೆ ಸತತವಾಗಿ ದುಡಿಯುತ್ತಿದ್ದರೆ ದೇಹವು ಕೃಶವಾಗಿ ಮನಸ್ಸು ಮ್ಲಾನವಾಗುತ್ತದೆ. ಚಿಕ್ಕಮಗು ಕೂಡ ಆಟವಾಡಿದ ದಣಿವನ್ನು ಪರಿಹರಿಸಿಕೊಳ್ಳಲು ವಿಶ್ರಾಂತಿ ಪಡೆಯುತ್ತದೆ. ಐವತ್ತೆಂಟು ಅಥವಾ ಅರುವತ್ತು ವರ್ಷಗಳ ಕಾಲ ದುಡಿದ ನೌಕರರನ್ನು ಸರಕಾರ ನಿವೃತ್ತಿಗೊಳಿಸುತ್ತದೆ. ಅಂದಿನಿಂದ ಅವರು ವಿಶ್ರಾಂತ ನೌಕರರು. ಇದರ ಉದ್ದೇಶ ಅವರಿಗೆ ವಿಶ್ರಾಂತಿಯ ಅಗತ್ಯವಿದೆ ಎಂಬುದು. ಸವೆದ ಅಂಗಾಂಗಳ ಪುನರ್ ನಿರ್ಮಾಣಕಾರ್ಯ ಹಾಗೂ ಮನಸ್ಸಿಗೆ ಉಲ್ಲಾಸ ವಿಶ್ರಾಂತಿಯಿಂದಲೇ. ಆದಕಾರಣ ಆಬಾಲವೃದ್ಧರೇ ಆದಿಯಾಗಿ ಎಲ್ಲರಿಗೂ ವಿಶ್ರಾಂತಿ ಆಗತ್ಯ.

ಇಂಥ ವಿಶ್ರಾಂತಿ ಮೂರು ಬಗೆಯಾಗಿದೆ. ಮೊದಲನೆಯದು ಏನೂ ಕೆಲಸ ಮಾಡದೆ ಕುಳಿತುಕೊಳ್ಳುವುದು. ಯೋಗಾಭ್ಯಾಸವಾದ ಮೇಲೆ ಶವಾಸನ ಒಂದು ಬಗೆಯ ವಿಶ್ರಾಂತಿ. ಮಲಗಿ ನಿದ್ರಿಸುವುದು ಮೂರನೆಯ ಬಗೆ. ಇದು ದೀರ್ಘಕಾಲಾವಧಿಯ ವಿಶ್ರಾಂತಿ. ನಮ್ಮ ಜೀವಿತಕಾಲದ ಅರ್ಧ ಭಾಗವನ್ನು ನಾವು ನಿದ್ರೆಯಲ್ಲಿ ಕಳೆಯುತ್ತೇವೆ.

ಹಾಗಾದರೆ 'ನಿದ್ರೆ' ಎಂದರೇನು ? ನಮಗೆ ಮೂರು ಅವಸ್ಥೆಗಳಿವೆ. ಮೊದಲನೆಯದು ಜಾಗ್ರತಾವಸ್ಥೆ ಅಂದರೆ ಎಚ್ಚರ. ಎರಡನೆಯದು ಸ್ವಪ್ನಾವಸ್ಥೆ. ಕಡೆಯದೇ ನಿದ್ರಾವಸ್ಥೆ ಅಥವಾ ಸುಷುಪ್ತಿ. ಮಲಗಿಕೊಂಡಿರುವಾಗಲೇ ಸ್ವಪ್ನವು ಬರುತ್ತದೆ. ಸ್ವಪ್ನವನ್ನು ಕಾಣುತ್ತಿದ್ದರೆ ಅದು ನಿದ್ರೆಯಲ್ಲ. ಪಾತಂಜಲ ಯೋಗ ಸೂತ್ರದಲ್ಲಿ "ಅಭಾವ ಪ್ರತ್ಯಯಾಲಂಬನಾ ನಿದ್ರಾ' ಎಂದು ಹೇಳಿದೆ. ಸಾಮಾನ್ಯವಾದ ಅರಿವಿನ ಅಭಾವಕ್ಕೆ ಕಾರಣವಾದುದನ್ನು ಅಂದರೆ ತಮಸ್ಸನ್ನು ಅವಲಂಬಿಸಿರುವ ವೃತ್ತಿಯೇ ನಿದ್ರೆ. ಇಂದು ಚಿತ್ತದ ಪಂಚವೃತ್ತಿಗಳಲ್ಲಿ ಒಂದು. ನಿದ್ರೆಯು ಒಂದು ವಿಶೇಷ ಬಗೆಯ ಅರಿವೆಂದು ವ್ಯಾಸಭಾಷ್ಯ ಹೇಳುತ್ತದೆ. ಏಕೆಂದರೆ ಎಚ್ಚರವಾದ ಮೇಲೆ ಅದು

ನೆನಪಿಗೆ ಬರುತ್ತದೆ. ನಾನು ಸುಖವಾಗಿ ಮಲಗಿದ್ದೆ. ನಾನು ತುಂಬಾ ನಿದ್ರೆ ಮಾಡಿದೆ. ನನಗೆ ಸರಿಯಾಗಿ ನಿದ್ರೆ ಬರಲಿಲ್ಲ." ಇತ್ಯಾದಿ ನೆನಪುಗಳು ಅನಂತರ ಬರುತ್ತದೆ. ನಿದ್ರೆ ಮಾಡುತ್ತಿರುವಾಗ ಅರಿವಿಲ್ಲದಿದ್ದರೆ ಎಚ್ಚೆತ್ತ ಮೇಲೆ ನಮಗೆ ಇಂಥ ನೆನಪಾಗುತ್ತಿರಲಿಲ್ಲ ಮತ್ತು ನಿದ್ರೆಗೆ ಸಂಬಂಧಿಸಿದ ನೆನಪುಗಳು ಆ ಅರಿವುಗಳನ್ನು ತಿಳಿಸುತ್ತಿರಲಿಲ್ಲ. ಆದ ಕಾರಣ ನಿದ್ರೆಯನ್ನು ಒಂದು ವಿಶೇಷ ಬಗೆಯ ಅರಿವೆಂದು ಭಾಷ್ಯಕಾರರು ಪರಿಗಣಿಸಿದ್ದಾರೆ. ನಿದ್ರೆಯಲ್ಲಿ ಏಕಾಗ್ರತೆಯಿದ್ದರೂ ಅದು ಸಬೀಜ ನಿರ್ಬೀಜ ಸಮಾಧಿಗಳಿಗೆ ತೊಡಕನ್ನುಂಟುಮಾಡುವುದರಿಂದ ಅದನ್ನು ನಿರೋಧಿಸಬೇಕೆನ್ನುತ್ತಾರೆ ಭಗವತ್ಪಂಜಲಿಗಳು.

ಈಗ ಚರಕಸೂತ್ರಕ್ಕೆ ಬರೋಣ. ಅಲ್ಲಿ ನಿದ್ರೆಯ ನಿರ್ವಚನೆ ಹೀಗಿದೆ.

ಯದಾತು ಮನಸಿಕ್ಲಾಂತೇ ಕರ್ಮಾತ್ಮಾನಃ
ಕ್ಲಮಾನ್ವಿತಾಃ ।
ವಿಷಯೇಭ್ಯೋ ನಿವರ್ತಂತೇ ತದಾ ಸ್ವಪಿತಿ
ಮಾನವಃ ।

ಮನಸ್ಸು ದಣಿದಾಗ, ಇಂದ್ರಿಯಗಳು ಸೋತಾಗ ಅವು ತಮ್ಮ ತಮ್ಮ ಕರ್ತವ್ಯಗಳಿಂದ ವಿಮುಖವಾಗುವುದೇ ನಿದ್ರೆ. ಇಲ್ಲಿ ಮೈಮನಸ್ಸುಗಳೆರಡೂ ವಿಶ್ರಾಂತಿ ಪಡೆಯುವುದರಿಂದ ಇದಕ್ಕೆ 'ನಿದ್ರೆ' ಎಂದು ಹೆಸರು.

ನಿದ್ರೆ ನಮಗೆಷ್ಟು ಬೇಕು? ಒಬ್ಬ ವ್ಯಕ್ತಿ ಒಂದು ದಿನಕ್ಕೆ ಎಷ್ಟು ಹೊತ್ತು ನಿದ್ರೆ ಮಾಡಬೇಕೆಂಬುವುದಕ್ಕೆ 'ಇದಮಿತ್ಥಂ' ಎಂಬ ಸೂತ್ರವೇನೂ ಇಲ್ಲ. ವ್ಯಕ್ತಿಯು ತನ್ನ ಅಭ್ಯಾಸ ಮತ್ತು ದೇಹ ಪ್ರಕೃತಿಗಳಿಗೆ ಅನುಕೂಲವಾದ ಪ್ರಮಾಣದಲ್ಲಿ ನಿದ್ರಿಸಬೇಕು. "ಯಥಾಕಾಲಮತೋ ನಿದ್ರಾಂ ರಾತ್ರೌ ಸೇವೇತ ಸಾತ್ಮತಃ"—ಎಂದು ಹೇಳಿರುವುದರಿಂದ ನಿದ್ರೆಯು ಪ್ರಮಾಣವು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ನವಜಾತಶಿಶುವಿಗೆ ದಿನಕ್ಕೆ ಇಪ್ಪತ್ತು ಗಂಟೆಗಳ ಕಾಲ ನಿದ್ರೆ ಬೇಕು. ವಯಸ್ಕರಿಗೆ ೬ ರಿಂದ ೮ ಗಂಟೆಗಳ ನಿದ್ರೆ ಸಾಕು. ವೃದ್ಧಾಪ್ಯದಲ್ಲಿ ಚಿಂತೆಯಿಂದಾಗಿ ನಿದ್ರೆಯ ಪ್ರಮಾಣ ಕಡಿಮೆಯಾಗುತ್ತದೆ. ಅದು ನಾಲ್ಕೈದು ಗಂಟೆಗಳಿಗೆ ಇಳಿಯುವುದೂ ಉಂಟು. ರೋಗಿಗಳಿಗೆ ನಿದ್ರೆಯಲ್ಲೇ ರೋಗವು ಗುಣಮುಖವಾಗಬೇಕಾಗಿರುವುದರಿಂದ ವೈದ್ಯರು ನಿದ್ರೆಬರುವಂಥ ಔಷಧಿಗಳನ್ನು ಕೊಡುತ್ತಾರೆ. "ಚಿಂತೆಯಿಲ್ಲದವನಿಗೆ ಸಂತೇಲಿ ನಿದ್ದೆ ಬಂತು" ಎಂಬ ಗಾದೆಯೊಂದಿದೆ. ಚಿಂತೆಯೇನೂ ಇಲ್ಲದಿದ್ದರೆ ವೃದ್ಧಾಪ್ಯದಲ್ಲೂ ನಿದ್ರೆ ಚೆನ್ನಾಗಿ ಬರುತ್ತದೆ. ಚೆನ್ನಾಗಿ ನಿದ್ರೆ ಬರುವುದು ಆರೋಗ್ಯದ ಲಕ್ಷಣ. ನಿರ್ನಿದ್ರತೆ ಒಂದು ವ್ಯಾಧಿ. ಕಷ್ಟಪಟ್ಟು ಕೆಲಸ ಮಾಡುವವರಿಗೆ ಚೆನ್ನಾಗಿ ನಿದ್ರೆ ಬರುತ್ತದೆ.

ನಿದ್ರಾಕಾಲ :

ನಿದ್ರೆಯನ್ನು ಯಾವಾಗ ಮಾಡಬೇಕು? ರಾತ್ರಿಯೇ ನಿದ್ರೆಗೆ ಪ್ರಶಸ್ತ ಕಾಲ. ಕಾರಣ ದೇಹ ಮತ್ತು ಮನಸ್ಸು ಹಗಲೆಲ್ಲಾ ದುಡಿದು ಆಯಾಸಗೊಂಡಿರುತ್ತದೆ. ಈ ಆಯಾಸ ಪರಿಹಾರ ಹಾಗೂ ದೀರ್ಘಾಯುಸ್ಸಾಧನೆಗೆ ರಾತ್ರಿಕಾಲದ ನಿದ್ರೆಯೇ ಸಮಂಜಸವಾದುದು.

ಆದರೆ ರಾತ್ರಿ ಪಾಳಿಗಳಲ್ಲಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಬಸ್ಸು ಮತ್ತು ರೈಲು ಚಾಲಕರು, ಅಲ್ಲಿಯ ಸಿಬ್ಬಂದಿವರ್ಗ ಇವರುಗಳು ಹಗಲೇ ನಿದ್ರಿಸಿ ಅನಿವಾರ್ಯವಾಗಿ ರಾತ್ರಿ ಎಚ್ಚರವಾಗಿರಲೇಬೇಕು. ಹಾಗೆ ನಿದ್ರಿಸುವ ಅಭ್ಯಾಸ ಅವರಿಗೆ ಸಾತ್ಮ್ಯವಾಗಿರುವುದರಿಂದ ಅದರಿಂದ ಯಾವ ದುಷ್ಪರಿಣಾಮವೂ ಅವರಿಗಾಗುವುದಿಲ್ಲ. ಆದರೆ ಈ ಸಂದರ್ಭದಲ್ಲಿ ಒಂದು ಎಚ್ಚರಿಕೆ ಮಾತು ಅಗತ್ಯ.

"ಅಸಾತ್ಮ್ಯ ಜಾಗರಾದರ್ಧಂ ಪ್ರಾತಃ ಸ್ವಪ್ಯಾತ್ ಅಭುಕ್ತವಾನ್"

ಎಂದು 'ಅಷ್ಟಾಂಗ ಹೃದಯ' ಸೂತ್ರ ಹೇಳುತ್ತದೆ. ಅಂದರೆ ರಾತ್ರಿ ಜಾಗರಣೆ ಮಾಡುವ ಅಭ್ಯಾಸವಿಲ್ಲದವರು ಜಾಗರಣೆ ಮಾಡುವ ಪ್ರಸಂಗ ಬಿದ್ದರೆ ಅವರು ಬೆಳಿಗ್ಗೆ ಏನನ್ನೂ ಸೇವಿಸದೆ ಮಲಗಬೇಕು. ಆಗಿನ ನಿದ್ರೆ ರಾತ್ರಿಯ ನಿದ್ರೆಯ ಅರ್ಧದಷ್ಟಿದ್ದರೂ ಸಾಕು.

ನಿದ್ರೆಯ ವಿಧಗಳು :

ಚರಕ ಸೂತ್ರವು ಐದು ನಿದ್ರಾವಿಧಗಳನ್ನು ತಿಳಿಸುತ್ತದೆ.

೧ ತಮೋಭವ ನಿದ್ರೆ — ಮನಸ್ಸಿನಲ್ಲಿ ತಮೋಗುಣ ಹೆಚ್ಚಾದಾಗ ಬರುವ ನಿದ್ರೆ. ನಿದ್ರೆಯು ತಮೋಗುಣದ ಲಕ್ಷಣ. ಸಾತ್ತ್ವಿಕರಲ್ಲಿಯೂ ನಿದ್ರೆಗೆ ಬೇಕಾಗುವಷ್ಟು ತಮೋಗುಣ ಇದ್ದೇ ಇರುತ್ತದೆ.

೨ ಶ್ಲೇಷ್ಮಸಮುದ್ಭವ ನಿದ್ರೆ–ಶರೀರದಲ್ಲಿ ಕಫವು ಹೆಚ್ಚಾದಾಗ ಬರುವ ನಿದ್ರೆ.

೩ ಶ್ರಮಸಂಭವ ನಿದ್ರೆ–ಇಂದ್ರಿಯಗಳ ದಣಿವಿನಿಂದ ಬರುವ ನಿದ್ರೆ. ಇದು ಸಹಜ ಆರೋಗ್ಯಕರ ನಿದ್ರೆ.

೪ ಆಗಂತುಕೀ ನಿದ್ರೆ—ಗಾಂಜಾ, ಅಫೀಮು ಮುಂತಾದ ಮಾದಕ ದ್ರವ್ಯಗಳ ಸೇವನೆಯಿಂದ ಬರುವ ನಿದ್ರೆ. ನಿದ್ರಾಮಾತ್ರೆಯನ್ನೂ ಸಹ ಈ ಗುಂಪಿಗೇ ಸೇರಿಸಬಹುದು.

೫ ವ್ಯಾಧ್ಯಗುವರ್ತಿನೀ ನಿದ್ರೆ—ವಿಶಿಷ್ಟ ವ್ಯಾಧಿಗಳಿಂದ ಸಂಭವಿಸಬಹುದಾದ ನಿದ್ರೆ.

ಹಗಲು ನಿದ್ರೆ : (ದಿವಾಸ್ವಾಪಃ)

ರಾತ್ರಿಯ ನಿದ್ರೆಯನ್ನು ಆಯುರ್ವೇದಾಚಾರ್ಯರಾದ ಚರಕರು 'ಸ್ವಭಾವ ಪ್ರಭವಾ' ಎಂದು ಕರೆದಿದ್ದಾರೆ. ರಾತ್ರಿಯ ವಾತಾವರಣ ಶಾಂತ ಮತ್ತು ಪೋಷಕ ಗುಣಗಳನ್ನು ಹೊಂದಿರುವುದರಿಂದ ಈ ನಿದ್ರೆಯನ್ನು 'ಭೂತಧಾತ್ರೀ' ಎಂದಿದ್ದಾರೆ. ಅಂದರೆ ಪ್ರಾಣಿಗಳನ್ನು ಸಂರಕ್ಷಣೆ ಮಾಡುವಂಥದು. ಹಗಲಿನಲ್ಲಿ ಶಾಂತ ಮತ್ತು ಪೋಷಕರ ವಾತಾವರಣವಿಲ್ಲದಿರುವುದರಿಂದ ಹಗಲು ನಿದ್ರೆ ಒಳ್ಳೆಯದಲ್ಲ. ಹಗಲು ನಿದ್ರೆಯು ಮಂಕುತನವನ್ನು ತರುವುದೇ ಅಲ್ಲದೆ ಸ್ಥೂಲಕಾಯಕ್ಕೂ ಕಾರಣವಾಗುತ್ತದೆ. ವಿದ್ಯಾರ್ಥಿಗಳಿಗಂತೂ ಹಗಲು ನಿದ್ರೆ ಸುತರಾಂ ಒಳ್ಳೆಯದಲ್ಲ.

ಅಪವಾದ:

ಚರಕ ಸೂತ್ರದಲ್ಲಿ ಹಗಲು ನಿದ್ರೆಗೆ ಕೆಲವು ಅಪವಾದಗಳಿವೆ. ಸಂಗೀತ ಮುಂತಾದ ಲಲಿತಾಕಲಾಭ್ಯಾಸಿಗಳು: ಸಂಶೋಧಕರು, ಮಾರ್ಗಾಯಾಸಿಗಳು: ಶರೀರಶ್ರಮದಿಂದ ದಣಿಯುವವರು: ಶರೀರವು ಕೃಶವಾಗಿ ಬಳಲುವವರು, ಕೋಪ, ಶೋಕ, ಭಯಗ್ರಸ್ತರು, ಅಜೀರ್ಣ, ಅತಿಸಾರ ಮುಂತಾದ ರೋಗಗಳಿಂದ ಬಳಲುವವರು, ವೃದ್ಧರು, ಮಕ್ಕಳು ಮತ್ತು ಗಾಯಾಳುಗಳು ಹಗಲು ನಿದ್ರೆ ಮಾಡಬಹುದು.

ಆದರೆ ಸ್ಥೂಲಕಾಯರು, ಕಫಯುಕ್ತವಾದ ಕೆಮ್ಮು ಇರುವವರು, ಪೀನಸ, ಮೈನವೆ, ಪಿತ್ತದಬಾವು ಇರುವವರು ಹಗಲು ನಿದ್ರೆ ಮಾಡಬಾರದು. ನಿದ್ರೆ ಮಾಡಿದರೆ ಆ ರೋಗ ಹೆಚ್ಚಾಗಬಹುದೆಂದು ಹಾರೀತ ಸಂಹಿತೆಯಲ್ಲಿ ಹೇಳಿದೆ.

"ಭುಕ್ತ್ವಾ ನ ಸ್ವಪ್ನಂ ಸೇವೇತ ಸ್ವಸ್ಥೋಪ್ಯ
ಸುಖೀಭವೇತ್"

ಊಟವಾದೊಡನೆಯೇ ಮಲಗಕೂಡದು.

ರಾತ್ರಿ ಎಷ್ಟು ಹೊತ್ತಿಗೆ ಮಲಗಬೇಕು? "ಅರ್ಲೀ ಟು ಬೆಡ್ ಅಂಡ್ ಅರ್ಲೀ ಟು ರೈಸ್" ಎಂಬ ಆಂಗ್ಲೋಕ್ತಿಯಂತೆ ಬೇಗನೆ ಮಲಗಿ ಬೆಳಗ್ಗೆ ಬೇಗನೆ ಏಳುವುದು ಆರೋಗ್ಯಕ್ಕೆ ಒಳ್ಳೆಯದು. ಆದರೆ ಇಂದಿನ ನಮ್ಮ ವಿದ್ಯಾರ್ಥಿಗಳು ರಾತ್ರಿಯೆಲ್ಲಾ ಓದಿ ಬೆಳಗ್ಗೆ ನಿದ್ರೆ ಮಾಡುತ್ತಾರೆ. ಇದರಿಂದಾಗಿ ಅವರು ಓದಿದ್ದೆಲ್ಲವನ್ನೂ ಮರೆಯುವ ಸಂಭವವಿದೆ. ರಾತ್ರಿ ೧೦ ಗಂಟೆಗೆ ಮಲಗಿ ಬೆಳಗಿನ ಜಾವ ಐದು ಗಂಟೆಗೆ ಏಳುವುದು ತುಂಬಾ ಒಳ್ಳೆಯದು. ಇದನ್ನು ಆಯುರ್ವೇದದಲ್ಲಿ ಬ್ರಾಹ್ಮೀ ಮುಹೂರ್ತವೆನ್ನುತ್ತಾರೆ.

"ಬ್ರಾಹ್ಮೇ ಮುಹೂರ್ತೇ ಉತ್ತಿಷ್ಠೇತ್
ಸ್ವಸ್ಥೋರಕ್ಷಾರ್ಥಮಾಯುಷಃ"

ಬ್ರಾಹ್ಮೀ ಮುಹೂರ್ತಕ್ಕೆ ಎದ್ದರೆ ಆರೋಗ್ಯ ಮತ್ತು ಆಯುಷ್ಯಗಳು ವರ್ಧಿಸುತ್ತವೆ. ಸೂರ್ಯೋದಯಕ್ಕೆ ಒಂದು ಗಂಟೆ ಮೊದಲು ಬ್ರಾಹ್ಮೀಮುಹೂರ್ತ.

ಹೆಚ್ಚು ನಿದ್ರೆ ಮಾಡುವುದು ಹೇಗೆ ಅಪಾಯಕಾರಿಯೋ ಕಡಿಮೆ ನಿದ್ರೆ ಮಾಡುವುದೂ ಸಹ ಅಷ್ಟೇ ಅಪಾಯಕಾರಿ. ಗೀತೆಯಲ್ಲಿ

"ಯುಕ್ತ ಸ್ವಪ್ನಾವಬೋಧಸ್ಯ ಯೋಗೋ
ಭವತಿ ದುಃಖಹಾ!"

ಎಂದಿದೆ. ನಿದ್ರೆ ಮತ್ತು ಎಚ್ಚರಗಳಲ್ಲಿ ಮಿತವಾಗಿರುವವನಿಗೆ ಯೋಗವು ದುಃಖನಾಶಕವಾಗುತ್ತದೆ. ನಿರ್ನಿದ್ರತೆಯಿಂದ ನರಳುವವರು ಶೀರ್ಷಾಸನ ಚಕ್ರ, ಪಶ್ಚಿಮೋತ್ತಾನಾಸನ ನಾಡೀಶೋಧನ ಪ್ರಾಣಾಯಾಮ ಷಣ್ಮುಖೀಮುದ್ರಾ ಮತ್ತು ಶವಾಸನಗಳನ್ನು ಮಾಡಿದರೆ ರೋಗವು ಪರಿಹಾರವಾಗುತ್ತದೆ.

ರಾತ್ರಿ ನಿದ್ರೆ ಯಾರಿಗೆ ಬರುವುದಿಲ್ಲ?

ಕುಮಾರವ್ಯಾಸ ಕವಿಯು ತನ್ನ ಭಾರತದಲ್ಲಿ ರಾತ್ರಿ ನಿದ್ರೆ ಬರುವುದಿಲ್ಲವೆಂಬುದನ್ನು ಪಟ್ಟಿ ಮಾಡಿದ್ದಾನೆ.

ಬಲವಿಹೀನನು ಬಲ್ಲಿದನ ಕೂ
ಡೊಲಿದು ತೊಡಕಿದವಂಗೆ ಕಾಮುಕ
ಕಳವಳಿಪಲಿರ್ದಂಗೆ ಧನದಳಲಿಂದ ಮರುಗುವಗೆ
ಕಳವಿನಲಿ ಕುದಿವಂಗೆ ದೈವದ
ನೆಲೆಯನರಿಯದವಂಗೆ ದಿಟವಿದು
ತಿಳಿಯೆ ಬಾರದು ನಿದ್ರೆಯೆಂದನು ಭೂಪತಿಗೆ
ವಿದುರ

ಅಬಲನಾದವನು ಪ್ರಬಲನಾದವನೊಡನೆ ಸ್ಪರ್ಧಿಗಿಳಿದಾಗ, ಕಾಮುಕನಿಗೆ, ಧನಾಪೇಕ್ಷೆಯಿಂದ ತೊಳಲುವವನಿಗೆ, ಕಳ್ಳನಿಗೆ ದೇವರ ಅಸ್ತಿತ್ವವನ್ನು ದೃಢವಾಗಿ ತಿಳಿಯದವನಿಗೆ ರಾತ್ರಿ ನಿದ್ರೆ ಬರುವುದಿಲ್ಲ. ಆದಕಾರಣ ಬಲಿಷ್ಠನೊಡನೆ ಸ್ಪರ್ಧೆಯೂ ಅತಿ ಕಾಮುಕತೆಯೂ ಅತಿ ಧನಾಪೇಕ್ಷೆಯೂ ಕಳ್ಳತನವೂ ನಾಸ್ತಿಕವೂ ಕೂಡದು.

ನಿದ್ರಾನಾಶ

ಕಾಫಿ, ಟೀ, ಮದ್ಯ, ತಂಬಾಕು–ಇವುಗಳ ಸೇವನೆಯಿಂದ ನಿದ್ರಾನಾಶವಾಗುತ್ತದೆ. ಅಲ್ಲದೆ ಕಹಿ, ಕಾರ, ಒಗರು ರಸಗಳಿಂದ ಕೂಡಿದ ಆಹಾರ ಸೇವನೆಯಿಂದ ನಿದ್ರಾನಾಶವಾಗುತ್ತದೆ. ಆದಕಾರಣ ಇವುಗಳನ್ನು ವರ್ಜಿಸಬೇಕು.

"ಶೀಲಯೇನ್ಮಂದ ನಿದ್ರಸ್ತು ಕ್ಷೀರ ಮದ್ಯರಸಾನ್‌ದಧಿ"–ಎಂಬ ಉಕ್ತಿಯಂತೆ ಆಹಾರದಲ್ಲಿ ಹಾಲು, ಬೆಣ್ಣೆ, ಮೊಸರು, ಇವುಗಳ ಉಪಯೋಗದಿಂದ ನಿದ್ರೆಬರಲು ಸಹಾಯವಾಗುತ್ತದೆ.

ಸುಖನಿದ್ರೆಯ ಫಲ

ಚರಕಸೂತ್ರ ಹೀಗೆ ಹೇಳುತ್ತದೆ. ನಿದ್ರಾಯತ್ತಂ ಸುಖಂದುಃಖಂ ಪುಷ್ಟಿಃಕಾರ್ಶ್ಯಂ ಬಲಾಬಲಮ್ । ವೃಷತಾ ಕ್ಲೀಬತಾ ಜ್ಞಾನಮಜ್ಞಾನಂ ಜೀವಿತಂ ನ ಚ॥ ಸುಖನಿದ್ರೆಯಿಂದ ಆರೋಗ್ಯ, ಜ್ಞಾನ, ಶಕ್ತಿ, ಪುಷ್ಟಿ, ವೀರ್ಯವಂತಿಕೆಗಳು ಲಭಿಸುತ್ತದೆ. ನಿದ್ರಾನಾಶದಿಂದ ಅನಾರೋಗ್ಯ, ಕೃತಕ, ದೌರ್ಬಲ್ಯ, ವೀರ್ಯಹೀನತೆ, ಅಜ್ಞಾನಗಳುಂಟಾಗುತ್ತವೆ.

ಆಧ್ಯಾತ್ಮಿಕ ದೃಷ್ಟಿಯಲ್ಲಿ ನಿದ್ರೆ

ಇದುವರೆಗೆ ಆರೋಗ್ಯದ ದೃಷ್ಟಿಯಿಂದ ನಿದ್ರೆಯೇನೆಂಬುದನ್ನು ತಿಳಿದೆವು. ಈಗ ವೇದಾಂತಿಗಳ ದೃಷ್ಟಿಯಿಂದ ನಿದ್ರೆಯೆಂದರೇನೆಂಬುದನ್ನು ತಿಳಿಯೋಣ ಅಲ್ಲಿಯೂ ಕರಣಗಳ ವಿಶ್ರಾಂತಿ ಎಂಬ ಉತ್ತರವೇ ದೊರೆಯುತ್ತದೆಯಾದರೂ ನಿದ್ರೆ ಯಾರಿಗೆ? ನಿದ್ರೆಯ ಕಾಲದಲ್ಲಿ ಪ್ರಪಂಚವು ಏನಾಗಿತ್ತು? ನಿದ್ರೆಯಲ್ಲಿ ನಾವು ಏನಾಗಿದ್ದೆವು? ನಿದ್ರೆಯಿಂದ ಎಚ್ಚರವಾದಮೇಲೆ ಉಂಟಾಗುವ ಚಟುವಟಿಕೆಗಳಿಗೇನು ಕಾರಣ? ಇತ್ಯಾದಿ ಪ್ರಶ್ನೆಗಳು ಉತ್ತರಕ್ಕಾಗಿ ನಮ್ಮನ್ನು ಆಧ್ಯಾತ್ಮಿಕತೆಯತ್ತ ಒಯ್ಯುತ್ತವೆ.

ನಮ್ಮ ಜೀವಿತದ ಅರ್ಧದಷ್ಟನ್ನು ನಾವು ನಿದ್ರೆಯಲ್ಲಿ ಕಳೆಯುತ್ತೇವೆ. "ಆಯುರ್ವರ್ಷಶತಂ ನೃಣಾಂ ರಾತ್ರೌ ತದರ್ಧಂಗತಃ" ಎಂದಿದ್ದಾರೆ. ಮನುಷ್ಯ ಮಾತ್ರವಲ್ಲ. ಎಲ್ಲ ಜೀವರಾಶಿಗಳೂ ರಾತ್ರಿ ನಿದ್ರಿಸುತ್ತವೆ. ಈ ದೃಷ್ಟಿಯಿಂದ ಎಚ್ಚರದಂತೆಯೇ ನಿದ್ರೆಯೂ ಸಹ ನಮ್ಮ

ಜೀವನದ ಅವಿಭಾಜ್ಯ ಅಂಶ. ಶ್ರುತಿಯ ಆಧಾರದಿಂದ ನಿದ್ರೆ ಸುಖಸ್ವರೂಪ ರಾತ್ರಿ ನಿದ್ರೆಮಾಡಿ ಎದ್ದವನನ್ನು ನಿದ್ರೆ ಹೇಗಿತ್ತು ಎಂದರೆ ಸುಖವಾಗಿತ್ತು ಎನ್ನುತ್ತಾನೆ. ಈ ಸುಖ ಯಾವುದರಿಂದ ಬಂತು. ನಿದ್ರೆಯಿಂದ ಎಂದುತ್ತರಿಸಿದರೆ ನಿದ್ರೆಯಲ್ಲಿ ನಮಗೇನಾಯಿತು? ನಿದ್ರೆಯಲ್ಲಿ ನಾವು ಎಲ್ಲಿ ಮಲಗಿದ್ದೇವೆ? ಮಂಚವೇ? ನೆಲವೇ? ಹಾಸಿಗೆಯೇ? ಈ ಯಾವ ಪರಿವೆಯೂ ನಮಗಿರುವುದಿಲ್ಲ. ಎಚ್ಚರವಾದಮೇಲೆಯೇ ಅದರ ಪರಿವೆ ನಮಗೆ ಬರುವುದು. ನಿದ್ರೆಯಲ್ಲಿ ನಮ್ಮ ಬಂಗಲೆ, ಕಾರು, ಆಳುಕಾಳು, ಅಧಿಕಾರ, ಹೆಂಡತಿ, ಮಕ್ಕಳು, ಐಶ್ವರ್ಯ–ಇದಾವುದೂ ಇಲ್ಲದೆಯೇ ನಾವು ಸುಖವಾಗಿದ್ದೆವು. ಹಾಗಾದರೆ ಸುಖಕ್ಕೆ ಇದಾವುದೂ ಬೇಕಾಗಿಲ್ಲವೆಂಬುದು ಮೇಲುನೋಟಕ್ಕೇ ಸ್ಪಷ್ಟವಾಗುತ್ತದೆ. 'ನಿದ್ರೆ ಮಾಡುತ್ತಾನೆ' ಎಂಬ ಪದಕ್ಕೆ ಸಂಸ್ಕೃತದಲ್ಲಿ 'ಸ್ವಪಿತಿ' ಎನ್ನುತ್ತಾರೆ. "ಸ್ವಂ ಅಪಿತೋ ಭವತೀತಿ ಸ್ವಪಿತಿ"–ಅಂದರೆ ತನ್ನ ಒಳಗೆ ಹೋಗಿರುತ್ತಾನೆ ಎಂದರ್ಥ ತನ್ನ ಒಳಗೆ ಹೋದವರು ಯಾರು? ತಾನೇ ಅಂದರೆ ಆತ್ಮ ಎಚ್ಚರವಾಗಿದ್ದಾಗ ವ್ಯವಹಾರ ಮಾಡುತ್ತಿದ್ದ ಈ ಜೀವಾತ್ಮ ನಿದ್ರೆಯ ಕಾಲದಲ್ಲಿ ನಿಜ ಸ್ವರೂಪವಾದ ಪರಮಾತ್ಮನಲ್ಲಿ ಒಂದಾಗುತ್ತಾನೆ. ಹಾಗಾದರೆ ಜೀವಾತ್ಮ-ಪರಮಾತ್ಮರು ಬೇರೆಬೇರೆಯೇ? ಎಂದಿಗೂ ಇಲ್ಲ. ಎಚ್ಚರವಾಗಿದ್ದಾಗ ಈ ದೇಹೇಂದ್ರಿಯಗಳನ್ನು ನನ್ನದು ಎಂದು ತಿಳಿದುಕೊಂಡಿದ್ದು ವ್ಯವಹರಿಸುತ್ತಿದ್ದ ಈ ಆತ್ಮವೇ ನಿದ್ರೆಯಲ್ಲಿ ಆ ಉಪಾಧಿಗಳಿಂದ ಮುಕ್ತನಾಗಿ ತಾನೊಬ್ಬನೇ ಉಳಿದುಕೊಳ್ಳುವುದನ್ನೇ ನಿದ್ರೆ ಎಂದರು. ಆಗ ಜೀವವು ಪರಬ್ರಹ್ಮನಲ್ಲಿ ಒಂದಾಗಿರುತ್ತಾನೆಂದು ಹೇಳುತ್ತಾರೆ. ಇದನ್ನೇ ಶಾಂಡಿಲ್ಯೋಪನಿಷತ್ತಿನಲ್ಲಿ "ಜೀವಾತ್ಮ ಪರಮಾತ್ಮೈಕಾವಸ್ಥಾಯೋಗಃ" ಎಂದು ಕರೆದಿದೆ. ಭಗವಂತ ಗೀತೆಯಲ್ಲಿ ಇದನ್ನೇ ಆತ್ಮಸಂಸ್ಥ ಎಂದದ್ದು. ವೇದಾಂತದಲ್ಲಿ ಇದು ಶ್ರೌತಪ್ರಸಿದ್ಧಿ.

ನಿದ್ರೆಯಲ್ಲಿ ನಾವು ಅನುಭವಿಸುವ ಸುಖ ಎಚ್ಚರದಲ್ಲಿದ್ದಾಗಲೂ ಲಭಿಸಿದರೆ ಅದೇ ಮೋಕ್ಷ.

———

ಎಂಥ ನಿಶ್ವಕತ್ತಲೆಯಾದರೂ, ಒಂದು ಹಣತೆಯ ಪ್ರಕಾಶವನ್ನು ನಾಶಗೊಳಿಸಲಾರದು. ಎಂಥ ಪಾಶವೀಶಕ್ತಿಯಾದರೂ ಸತ್ಯದ ಪ್ರಕಾಶವನ್ನು ನಾಶಗೊಳಿಸಲಾರದು

—ಗಾಂಧೀಜಿ

ಗುದ್ಲಿ ಶರಣರು

ಡಾ|| ಸ. ಜ. ನಾಗಲೋಟಿಮಠ

ವೈದ್ಯಕೀಯ ನಿರ್ದೇಶಕರು
ಬ. ವಿ. ವ. ಸಂಘ
ಬಾಗಲಕೋಟೆ ೫೮೭ ೧೦೧

ಕೆಲ ದಿನಗಳ ಹಿಂದೆ ನಾನು ಬಾಗಿಲು ಕೋಟೆಯ ಸಮೀಪದ ಊರಿಗೆ ಸಮಾರಂಭದಲ್ಲಿ ಭಾಗವಹಿಸಲು ಹೋಗಿದ್ದೆ. ಸಮಾರಂಭ ಅದ್ದೂರಿಯಾಗಿ ನಡೆಯಿತು. ಅದೇ ಊರಿನ ಕೆಲವು ಹಿರಿಯರೊಡನೆ ಹರಟೆ ಹೊಡೆಯುತ್ತ ಕುಳಿತಿದ್ದೆ. ಆಗ ಅಲ್ಲಿಗೆ ಒಬ್ಬ ನಿವೃತ್ತ ಇಂಜನಿಯರ್ ಬಂದರು. ಪರಸ್ಪರ ನಮಸ್ಕಾರಗಳನ್ನು ವಿನಿಮಯ ಮಾಡಿಕೊಂಡೆವು. ಅವರು ನನ್ನನ್ನು ತಮ್ಮ ಮನೆಗೆ ಬರಲು ಆಮಂತ್ರಿಸಿದರು. ಪ್ರಾರಂಭದಲ್ಲಿ ಹಿಂದೇಟು ಹಾಕಿದರೂ ಬರಲು ಒಪ್ಪಿಗೆ ಇತ್ತೆ. ಅವರು ಸಂತೋಷದಿಂದ ಹೋದರು. ಅವರು ಅತ್ತ ಹೋದೊಡನೆಯೆ ನಾನು ಅಲ್ಲಿದ್ದ ಹಿರಿಯರನ್ನು ಕೇಳಿದೆ "ಯಜಮಾನರೆ, ಈಗ ಆಮಂತ್ರಣ ಕೊಟ್ಟು ಹೋದ ಇಂಜನಿಯರ್ ಬಗ್ಗೆ ನನಗೆ ಹೆಚ್ಚಿಗೆ ಪರಿಚಯವಿಲ್ಲ. ನೀವು ಅವರ ಬಗ್ಗೆ ಹೇಳಿರಲ್ಲ" ಎಂದೆ. ಯಜಮಾನರು ಖುಷಿಯಿಂದ ಹೇಳಿದರು. "ಅವರನರ್‍ರಿ. ನಮ್ಮ ಊರಿನ ಬಹು ಒಳ್ಳೆಯ ವ್ಯಕ್ತಿ. ಅವರು ಒಳ್ಳೆಯ ಇಂಜನಿಯರ್ ಎಂದು ಹೆಸರು ಗಳಿಸಿದ್ದಾರೆ" ಎಂದರು. ಯಜಮಾನರು ಮುಂದುವರೆದು ಹೇಳಿದರು "ಅವರು ನಮ್ಮ ಗುದ್ಲಿ ಶರಣರ ಮಕ್ಕಳು".

ನನಗೆ ಕೊನೆಯ ಮಾತು ವಿಚಿತ್ರ ಎನಿಸಿತು "ಇನ್ನೊಮ್ಮೆ ಹೇಳ್ರಿ" ಎಂದೆ. ಯಜಮಾನರು "ಹೌದ್ರಿ ಸಾಹೇಬ್ರ, ಇವರು ಗುದ್ಲಿ ಶರಣರ ಹಿರಿಯ ಮಗ ಎಂದರು. ನಾನು ಕೇಳಿದೆ "ಗುದ್ಲಿ ಶರಣರು ಅಂದರೆ ಏನು ?" "ಓಹೋ ನಿಮಗೆ ನಮ್ಮ ಶರಣರ ಬಗ್ಗೆ ತಿಳಿದಿಲ್ಲ ಅಂದಾಂಗಾತು. ಕೇಳ್ರಿ ಹೇಳುತ್ತೇನೆ." ಯಜಮಾನರು ಹೇಳಿದ ವಿಷಯವನ್ನೇ ನಾನು ತಮ್ಮ ಮುಂದೆ ಇಡುತ್ತಿರುವೆ.

ಅದೊಂದು ಚಿಕ್ಕಹಳ್ಳಿ. ಹಳ್ಳಿಯ ಜನರು ಕೇವಲ ಬೇಸಾಯ ಮಾಡಿ ಜೀವಿಸುತ್ತಿದ್ದರು. ಆ ಹಳ್ಳಿಯ ಸುತ್ತಲೂ ಒಳ್ಳೆಯ ಎರೆಭೂಮಿ. ಜನರು ಹೊಲಕ್ಕೆ ಹೋಗಿ ಹರಗಿ ಬರುತ್ತಿದ್ದರು. ಎರಡನೆಯ ಸಲ ಬಿತ್ತಲು ಹೋಗುವುದು. ಮೂರನೆಯ ಸಲ ಬೆಳೆಯನ್ನು ಕೊಯ್ದುಕೊಂಡು ಬರಲು ಹೋಗುವಪು ರೂಢಿ. ಅಂದರೆ ಆ ಭೂಮಿಯಲ್ಲಿ ಕಸ-ಕಡ್ಡಿ ಅನ್ನುವದೇ ಕಡಿಮೆ.

ಅಂಥ ಫಲವತ್ತಾದ ಭೂಮಿ ಅದು. ಅಂಥ ಹಳ್ಳಿಯಲ್ಲಿ ಒಬ್ಬ ಸಾಧಾರಣ ವ್ಯಕ್ತಿ ವಾಸವಾಗಿದ್ದ. ಅವರು ತಮ್ಮ ಗುರುಗಳ ಕಡೆಯಿಂದ ದೀಕ್ಷೆ ಪಡೆದಿದ್ದರು. ವೀರಶೈವರಲ್ಲಿ ದೀಕ್ಷೆ ಪಡೆದ ವ್ಯಕ್ತಿಗಳು ಬಹು ಆದರ್ಶ ಜೀವನ ನಡೆಸುತ್ತಾರೆ.

ಈ ವ್ಯಕ್ತಿ ನಿತ್ಯ ನಸುಕಿನಲ್ಲಿ ಏಳುತ್ತಿದ್ದರು. ಸ್ನಾನಾದಿಗಳನ್ನು ತೀರಿಸಿಕೊಂಡು ಒಂದು ತಾಸು ಲಿಂಗಪೂಜೆಯಲ್ಲಿ ತಲ್ಲೀನರಾಗುತ್ತಿದ್ದರು. ಅನಂತರ ಅವರು ಪ್ರಸಾದ ತೆಗೆದುಕೊಳ್ಳುತ್ತಿದ್ದರು. ಪ್ರಸಾದದಲ್ಲಿ ಎರಡು ಬಿಸಿ ಬಿಸಿ ಜೋಳದ ರೊಟ್ಟಿ ಸ್ವಲ್ಪ ಜೋಳದ ನುಚ್ಚು ಹಾಲು–ಮಜ್ಜಿಗೆ ಇರುತ್ತಿದ್ದವು. ಅವರು ಪ್ರಸಾದ ಮುಗಿಸಿ ಎದ್ದು ಮನೆಯಲ್ಲಿಯ ಅಂಥ ಇಂಥ ಕಾರ್ಯ ಪೂರೈಸುವಷ್ಟರಲ್ಲಿ ಅವರ ಧರ್ಮ ಪತ್ನಿ ಬುತ್ತಿಕಟ್ಟಿ ಕಟ್ಟೆಯ ಮೇಲೆ ಇಡುತ್ತಿದ್ದರು. ಬುತ್ತಿಯೊಡನೆ ಒಂದು ದೊಡ್ಡ ಹಿತ್ತಾಳೆಯ ತಂಬಿಗೆ ತುಂಬ ಕುಡಿಯುವ ನೀರು ಇಡುತ್ತಿದ್ದರು.

ತಮ್ಮ ಕಾರ್ಯಗಳನ್ನು ಪೂರೈಸಿ ಒಂದು ಹೆಗಲಮೇಲೆ ಗುದ್ದಲಿಯನ್ನು ಇಟ್ಟು ಕೊಂಡು ಒಂದು ಕೈಯಲ್ಲಿ ಬುತ್ತಿ ಇನ್ನೊಂದು ಕೈಯಲ್ಲಿ ನೀರಿನ ತಂಬಿಗೆ ಹಿಡಿದುಕೊಂಡು ಹೊಲದ ದಾರಿಯಲ್ಲಿ ಸಾಗುತ್ತಿದ್ದರು. ಇಂಥದೇ ನಿಶ್ಚಿತ ಹೊಲಕ್ಕೆ ಎನ್ನದೇ ನಡೆಯುತ್ತಿದ್ದರು. ಹಾಗೆ ಹೋಗುವಾಗ ಅತ್ತಿತ್ತ ನೋಡುವದು ಅವರ ಪರಿಪಾಠ. ಹಾಗೆ ನೋಡುತ್ತಿರುವಾಗ ಯಾವದೋ ಯಾರದೋ ಹೊಲದಲ್ಲಿ ಕರಿಕೆ ಬೆಳೆದದ್ದು ಕಂಡರೆ ಸಾಕು. ಈ ವ್ಯಕ್ತಿ ನೇರವಾಗಿ ಆ ಹೊಲಕ್ಕೆ ಹೋಗುತ್ತಿದ್ದರು. ಆ ಹೊಲದ ಸಮೀಪದ ಒಂದು ಗಿಡದ ಕೆಳಗೆ ತಮ್ಮ ಬುತ್ತಿ–ನೀರು ಇಟ್ಟು, ಉಟ್ಟ ಧೋತರವನ್ನು ಮಡಿಚಿ ಗಂಡು ಗಚ್ಚೆ ಹಾಕಿ ಆ ಹೊಲದಲ್ಲಿದ್ದ ಕರಿಕೆ ಬೆಳೆದ ಸ್ಥಳದಲ್ಲಿ ಅಗತಿ ಮಾಡಲು ಪ್ರಾರಂಭಿಸುತ್ತಿದ್ದರು. ಎಂಥದೇ ದಣಿವು ಪರಿಶ್ರಮ ಇಲ್ಲದೆ ಸೂರ್ಯ ನೆತ್ತಿಯ ಮೇಲೆ ಬರುವ ತನಕ ಅಗತಿ ಮಾಡುತ್ತಿದ್ದರಂತೆ. ಆಗ ತಾತ್ಪೂರ್ತಿಕವಾಗಿ ಕಾರ್ಯವನ್ನು ನಿಲ್ಲಿಸಿ ಗಿಡದ ನೆರಳಿಗೆ ಬಂದು ಕೈಕಾಲುಗಳನ್ನು ಶುಚಿ ಮಾಡಿಕೊಂಡು ತಂದ ಬುತ್ತಿಯನ್ನು ಉಣ್ಣುತ್ತಿದ್ದರು. ಅನಂತರ ೧೦-೧೫ ನಿಮಿಷ ವಿಶ್ರಾಂತಿ. ಮತ್ತೆ ಕಾರ್ಯ ಪ್ರಾರಂಭವಾಗುತ್ತಿತ್ತು. ಸೂರ್ಯ ಪಶ್ಚಿಮ ದಿಕ್ಕಿನಲ್ಲಿ ಮುಳುಗುವವರೆಗೆ ಅಗತಿ ನಡೆಯುತ್ತಿತ್ತು. ಸುಮಾರಾಗಿ ಅಷ್ಟು ವೇಳೆಗಾಗಲೇ ಆ ಹೊಲದಲ್ಲಿದ್ದ ಎಲ್ಲ ಕರಿಕೆ ಇಲ್ಲದಂತಾಗುತ್ತಿತ್ತು. ಆಗ ತಮ್ಮ ಕಾರ್ಯವನ್ನು ನಿಲ್ಲಿಸಿ ಸಂಜೆಯ ಪೂಜೆಗೆ ಹಳ್ಳಿಯ ಕಡೆಗೆ ಹೆಜ್ಜೆ ಹಾಕುತ್ತಿದ್ದರು. ಇಂಥ ಜೀವನವನ್ನು ಅವರು ಸುಮಾರು ೫೦ ವರ್ಷ ನಡೆಸಿದರು.

ಯಾರಾದರೂ ಅಪರಿಚಿತರು ಇವರನ್ನು ನೋಡಿ "ಅಲ್ರೆಪಾ, ಇದು ನಿಮ್ಮ ಹೊಲ ಅಲ್ಲ. ಬೇರೆಯವರ ಭೂಮಿ ಇದು ನೀವು ಯಾಕೆ ಇಲ್ಲಿ ಅಗತಿ ಮಾಡುತ್ತಿರುವಿರಿ ? ಎಂದು ಕೇಳಿದಾಗ ಈ ವ್ಯಕ್ತಿ ಹೇಳುತ್ತಿದ್ದರಂತೆ. "ಏ, ತಮ್ಮಾ ಈ ಹೊಲ ಯಾರದು ಅಂತ ತಿಳಿದಿದ್ದಿ ? ಕೇಳು ಇದು ದೇವರ ಹೊಲಾ, ದೇವರ ಹೊಲದಾಗ ಕರಿಕೆ ಬೆಳೆಯಿತು ಅಂದ್ರ,ಒಳ್ಳೆ ಬೆಳೆ ಬರುವುದಿಲ್ಲ. ಅದಕಪಾ ನಾವು ದೇವರ ಹೊಲದಾಗ ಕರಿಕೆ

ಬೆಳೆಯಲು ಬಿಡಬಾರದಾ ತಪ್ಪಾ. ಅವರು ಯಾರಿಂದಲೂ ತಾವು ಮಾಡಿದ ಕಾರ್ಯಕ್ಕೆ ಪ್ರತಿಫಲ ಅಪೇಕ್ಷಿಸಿದವರಲ್ಲ. ತಾವು ಮಾಡುವುದು ದೇವರ ಕಾರ್ಯ ಎಂದೇ ಹೇಳುತ್ತಿದ್ದರಂತೆ.

ಆದ್ದರಿಂದಲೇ ಈ ಊರಿನ ಸುತ್ತಲಿನ ಯಾವ ಹೊಲದಲ್ಲಿಯೂ ಕರಿಕೆ ಇರಲಿಲ್ಲವಂತೆ. ಯಾವಾಗಲೂ ಅಲ್ಲಿ ಒಳ್ಳೆ ಪೈರು ಬರುತ್ತಿತ್ತಂತೆ.

ಕಾರಣವೇ ಸುತ್ತಲಿನ ಜನರೆಲ್ಲ ಅವರನ್ನು 'ಶರಣ' ಎಂದೇ ಸಂಬೋಧಿಸುತ್ತಿದ್ದರಂತೆ. ಹೆಗಲ ಮೇಲೆ ಯಾವಾಗಲೂ ಇದ್ದ ಗುದ್ದಲಿ ಅವರ ದುಡಿಮೆಗೆ ಸಾಕ್ಷಿ ಆಗಿತ್ತು. ಸುತ್ತಲಿನ ಜನರಿಗೆ ಇವರು "ಗುದ್ದಲಿ ಶರಣ" ಎಂದೇ ಪರಿಚಿತರಾಗಿದ್ದರು.

ಶರಣರ ಮಕ್ಕಳು ಬುದ್ಧಿವಂತರು. ಕಲಿತು ದೊಡ್ಡ ಇಂಜನಿಯರ್ ಆದರು. ಸಾಕಷ್ಟು ಸಂಬಳ ಬರುತ್ತಿತ್ತು. ಹಣವನ್ನು ತಂದು ತಂದೆಯ ಮುಂದೆ ಇಟ್ಟು ಕೈಮುಗಿದು, "ಅಪ್ಪಾ ಅವರ, ನೀವು ಇನ್ನು ದುಡಿಯುವುದು ಸಾಕು. ನಾವು ದುಡಿಯುತ್ತಿರುವೆವು. ತಾವು ಉಂಡು ಆನಂದದಿಂದ ಕಾಲಕಳೆಯಬೇಕೆಂದು ಪ್ರಾರ್ಥಿಸಿದರೆ,

ಶರಣರು ಹೇಳುತ್ತಿದ್ದರಂತೆ "ಏನ್ರಪಾ, ನೀವು ನನ್ನ ತಪ್ಪು ತಿಳಿದಂಗ ಕಾಣತೈತಿ. ನಾನು ಎಂದೂ ಹಣಕ್ಕಾ ದುಡಿದಿಲ್ಲ. ಹಣ ನಾನು ಮುಟ್ಟದೆ ೫೦ ವರ್ಷ ಆದು. ನನಗ್ಯಾಕ ಹಣ ಬೇಕು?" ಶಿವ, ನನಗೆ ಈ ಕಾಯಕ ಕಲಿಸಿರುವನು ಜೀವ ಇರುತನಕಾ ಕಾಯಕ ಮಾಡತ್ತೇನೆ" ನೀವು ಸಂತೋಷದಿಂದ ಇರ್ರಿ." ಎಂದು ಹೇಳಿದರಂತೆ.

"ದೇವರ ಹೊಲದಾಗ ಕರಿಕೆ ಬೆಳೆಯಬಾರದು." "ಹೊಲ ನಂದು ನಿಂದು ಅಂತ ಇಲ್ಲಾ, ಎಲ್ಲ ಹೊಲ ದೇವರ ಹೊಲಾ" ಎನ್ನುವ ಮಾತು ಇನ್ನೂ ಕಿವಿಯಲ್ಲಿ ಗುಯ್‌ಗುಡುತ್ತಲಿವೆ. ಗುದ್ಲಿ ಶರಣರ ಜೀವನ ನನ್ನ ಜೀವನಕ್ಕಿಂತ ಎಷ್ಟು ಎತ್ತರದ್ದು ಎಷ್ಟು ಶ್ರೇಷ್ಠವಾದದ್ದು ಎನಿಸುತ್ತದೆ. ನಾನು ಅವರ ಮುಂದೆ ಒಂದು ಕೂಸಾಗಿ ಕಾಣುತ್ತೇನೆ. ನಿಜ—

ಕೆಲಸವಿಲ್ಲದ ಮಂದಿ ಹರಟೆಯಲಿ ಕಾಲವನು
ಕಳೆಯುವರು, ಕರ್ತವ್ಯನಿರತನು ಸದಾ ಕುತೂ
ಹಲದಿಂದ ಜ್ಞಾನವನವಲೋಕಿಸುತ ಅವಕಾಶ
ಗಳ ಸೃಷ್ಟಿಸುತ ತಾನು ಸುಖಿಸುವನು ಅರ್ತಿಸೂಸು

———

ನಿನ್ನ ಸ್ವಾರ್ಥ ನಿನ್ನನ್ನು ಎಲ್ಲಿಗೇ ಎಳೆದುಕೊಂಡು ಹೋಗಲಿ, ನಿನ್ನ ಜೊತೆ ಇತರರೂ ಬದುಕಿಕೊಂಡಿದ್ದಾರೆಂಬುದನ್ನು, ಅವರು ಬದುಕುವ ಆಸೆಯನ್ನು ಹೊಂದಿರುವುದನ್ನು ಸ್ವಲ್ಪ ಗಮನಿಸುತ್ತಿರು.

—ಅರವಿಂದರು

ತಾರಕ್ಕ ಬಿಂದಿಗೆ !

ಟಿ. ಎಸ್. ಸಂಜೀವರಾವ್
ಇ: ಡಬ್ಲ್ಯೂ. ಎಸ್. ೪೩೪
ಕೆ. ಎಚ್. ಬಿ. ಕಾಲನಿ, ೨ ನೇ ಹಂತ
೪ ನೇ ಮುಖ್ಯರಸ್ತೆ, ಬಸವೇಶ್ವರ ನಗರ
ಬೆಂಗಳೂರು–೭೯

ತಾರಕ್ಕ ಬಿಂದಿಗೆ ನಾ ನೀರಿಗ್ಹೋಗುವೆ ತಾರೇ ಬಿಂದಿಗೆಯ !

ಚಾರ್ಲ್ಸ್ ಈಮ್ಸ್ ಅವರು ಅಮೆರಿಕದ ಸುಪ್ರಸಿದ್ಧ ರಚನಾಶಿಲ್ಪಿ. ೧೯೫೮ರಲ್ಲಿ ಅವರು ತಮ್ಮ ಪತ್ನಿ ರೇ ಈಮ್ಸ್ ಅವರ ಜೊತೆ ಭಾರತದಲ್ಲೆಲ್ಲಾ ಸಂಚರಿಸಿ ಸರಕಾರದ ಕೋರಿಕೆಯ ಮೇಲೆ ರಚನಶಿಲ್ಪಾಭಿವೃದ್ಧಿಯ ವಿಷಯ ಕುರಿತು ತಮ್ಮ ವರದಿಯನ್ನು ಸಲ್ಲಿಸಿದರು. ಪರಿಣಾಮವಾಗಿ ೧೯೬೧ರಲ್ಲಿ ಅಹಮ್ಮದಾಬಾದಿನಲ್ಲಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್ ಸ್ಥಾಪಿತವಾಗಿ ಗಮನಾರ್ಹವಾದ ಕೆಲಸ ಮಾಡುತ್ತಿದೆ. ಚಾರ್ಲ್ಸ್ ಅವರು ೧೯೭೮ ರಲ್ಲಿ ತಮ್ಮ ೭೧ ನೇ ವಯಸ್ಸಿನಲ್ಲಿ ತೀರಿಕೊಂಡರು.

ದಿನೋಪಯೋಗಿ ಬಿಂದಿಗೆಯ ಮಾಟದ ಮೇಲೆ ಅವರ ಮನೋಜ್ಞ ಅನಿಸಿಕೆಗಳನ್ನು ಈ ಕೆಳಗೆ ಕೊಡಲಾಗಿದೆ.

ನಾವು ಭಾರತದಲ್ಲೆಲ್ಲ ಸಂಚಾರ ಮಾಡಿದಾಗ ಅನೇಕಾನೇಕ ವಸ್ತುಗಳನ್ನು ಕಂಡೆವು, ಮೆಚ್ಚಿಕೊಂಡೆವು. ಇವುಗಳಲ್ಲೆಲ್ಲಾ ನಮ್ಮ ಮನಸ್ಸನ್ನು ಸೆಳೆದದ್ದು ಒಂದು ಸಾಧಾರಣ ಪಾತ್ರೆ—ಬಿಂದಿಗೆ! ದಿನವೂ ಇಲ್ಲಿನ ಹೆಂಗಳೆಯರು ಉಪಯೋಗಿಸುವ ಈ ಪಾತ್ರೆ ಈ ದೇಶದ ಒಂದು ಅನರ್ಘ್ಯ ಹಾಗೂ ಸುಂದರ ವಸ್ತು ಎಂದು ನಮಗನಿಸಿತು.

ಇಲ್ಲಿನ ಹಳ್ಳಿ ಗೃಹಿಣಿಯರು ಹುಣಸೆ ಹಣ್ಣು ಬೂದಿಗಳಿಂದ ತಿಕ್ಕಿ ತಿಕ್ಕಿ ಹಿತ್ತಾಳೆಯನ್ನು ಪ್ರತಿದಿನ ಬಂಗಾರವನ್ನಾಗಿ ಮಾಡುವ ಚಮತ್ಕಾರವನ್ನು ಕರಗತ ಮಾಡಿಕೊಂಡಿದ್ದಾರೆ.

ಈ ಬಿಂದಿಗೆಯ ಮಾಟವೋ-ಎಷ್ಟೊಂದು ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಅದನ್ನು ರಚಿಸಿರಬೇಕು !

ಪೂರ್ವ ಸಿದ್ಧಾಂತಗಳನ್ನೆಲ್ಲ ಬದಿಗಿಟ್ಟು ಯೋಚನೆ ಮಾಡೋಣ.

ಎಷ್ಟು ನೀರು ಹಿಡಿಸಬೇಕು, ಒಯ್ಯುವುದಕ್ಕೆ, ಸುರಿಯುವುದಕ್ಕೆ, ತುಂಬಿಟ್ಟುಕೊಳ್ಳುವುದಕ್ಕೆ?

ಅದನ್ನು ಒಯ್ಯುವ ಕೈಗಳು (ಕೈಗಳಲ್ಲೇ ಒಯ್ಯುವುದಾಗಿದ್ದರೆ) ಉದ್ದನೆಯವೋ, ಶಕ್ತಿಯುತವಾದುವುಗಳೋ, ಹೆಂಗೆಳೆಯರ ಕೈಗಳೋ?

ಒಯ್ಯುವ ವಿಧಾನ? ತಲೆ ಮೇಲೋ, ಸೊಂಟದ ಮೇಲೋ, ಕೈಗಳಲ್ಲೋ, ಬುಟ್ಟಿಯಲ್ಲೋ, ಎತ್ತಿನಗಾಡಿಯಲ್ಲೋ?

ನೀರಿದ್ದಾಗ, ನೀರಿಲ್ಲದಿದ್ದಾಗ ಅದರ ಸಮತೋಲನ ಹೇಗೆ? ಸುರಿಯುವಾಗ ಹೇಗೆ?

ನೀರು ತುಂಬುವಾಗ, ಸುರಿಯುವಾಗ, ಬಿಂದಿಗೆಯನ್ನು ಸ್ವಚ್ಛಮಾಡುವಾಗ, ಬೇಗ ಬೇಗ ಹೋಗುತ್ತಾ ಅಥವಾ ನಿಧಾನವಾಗಿ ಹೋಗುತ್ತಾ ತಲೆಯಮೇಲೆ ಒಯ್ಯುವಾಗ ಆಗುವ ಚಿತ್ರ ವಿಚಿತ್ರ ಭಂಗಿಗಳಲ್ಲಿ ಬಿಂದಿಗೆಯ, ಅದರಲ್ಲಿನ ನೀರಿನ ಚಲನ-ವಲನಗಳು ಹೇಗೆ?

ಸೊಂಟದ ವಕ್ರತೆಗೆ ಹೊಂದಿಕೊಳ್ಳುವ, ಕೈಯ ಹಿಡಿತಕ್ಕೆ ಬಗ್ಗುವ ಅದರ ರಚನಾಕ್ರಮ ಹೇಗಿರಬೇಕು?

ನೀರು ತುಂಬಿಕೊಂಡು ಒಯ್ಯುತ್ತಿರುವಾಗ ಚಲನೆಯ ಲಯಕ್ಕನುಗುಣವಾಗಿ ಅಥವಾ ಬಾವಿಯ ಹತ್ತಿರ ನಿಂತು ಹೊತ್ತಿರುವ ಭಂಗಿಗೆ ತಕ್ಕ ರಚನಾಕ್ರಮ ಹೇಗಿರಬೇಕು?

ನೀರಲ್ಲದೆ ಬೇರೆ ಯಾವುದಾದರೂ ಪದಾರ್ಥವನ್ನು ತುಂಬಿಟ್ಟಾಗ, ಅದು ಎಷ್ಟು ಹಿಡಿಯಬಹುದು ಎಂಬ ಎಣಿಕೆ.

ಸ್ವಚ್ಛಮಾಡುವಾಗ ಕೈತೂರಿಸಲು ಅದರ ಬಾಯಿಯ ಅಳತೆ, ಒಳಗಿನ ಆಕಾರ ಹೇಗಿರಬೇಕು?

ತಿಕ್ಕುವಾಗ, ಕೈಯಲ್ಲಿ ಹಿಡಿದುಕೊಂಡಾಗ ಸ್ಪರ್ಶಕ್ಕೆ ನಯವೋ, ಉರುಟೋ?

ಬಿಸಿ ನೀರು

ತುಂಬಿದಾಗ ಬಿಂದಿಗೆ ಕೈ ಸುಡುವಷ್ಟು ಬಿಸಿಯಾಗುವ ಸಾಧ್ಯತೆ.

ನೋಡಿಯೋ, ನೋಡದೆಯೋ ಅದನ್ನು ಮುಟ್ಟಿದಾಗ ಆಗುವ ಸ್ಪರ್ಶಾನುಭವ.

ಇನ್ನೊಂದು ಪಾತ್ರೆಗೆ ತಗುಲಿದಾಗ, ಖಾಲಿ ಇದ್ದಾಗಲೋ, ತುಂಬಿದ್ದಾಗಲೋ ನೆಲದಮೇಲೆ ಕುಕ್ಕರಿಸಿದಾಗ ಆಗುವ ಸದ್ದು ಎಂಥಾದ್ದು?

ಯಾವ ಯಾವ ಲೋಹಗಳ ಸಂಯೋಜನೆಯಿಂದ ಇದನ್ನು ಮಾಡಬಹುದು?

ತಯಾರಿಸುವ ಬೆಲೆ ಎಷ್ಟಾಗಬಹುದು? ಅದರ ಜೀವಿತಾವಧಿ ಎಷ್ಟು ಇರಬಹುದು?

ಬಳಕೆಮಾಡುತ್ತಿರುವಾಗ ಅದರ ಬಂಡವಾಳ ಎಷ್ಟಿರಬಹುದು? ನಿರುಪಯುಕ್ತವಾದ ಮೇಲೆ?

ಬಿಂದಿಗೆಯ ಲೋಹ ಅದರಲ್ಲಿಡಬಹುದಾದ ದ್ರವ ಅಥವಾ ಪದಾರ್ಥಗಳ ಮೇಲೆ ಏನೇನು ಪರಿಣಾಮ ಬೀರಬಹುದು?

ಬಿಸಿಲು ಅದರ ಮೇಲೆ ಬಿದ್ದಾಗ, ಅದು ಹೇಗೆ ಕಾಣಬಹುದು?

ಸ್ವಂತದ್ದಾಗಿ ಅದನ್ನು ಹೊಂದಿರಲು, ಮಾರಲು, ಇನ್ನೊಬ್ಬರಿಗೆ ದಾನವಾಗಿ ಕೊಟ್ಟುಬಿಡಲು ಏನನಿಸುತ್ತದೆ?

ನಿಜ, ಇಷ್ಟೆಲ್ಲ ವಿಚಾರಗಳನ್ನು ಯಾವನೋ ಒಬ್ಬ ಶಿಲ್ಪಿ ಮನಸ್ಸಿನಲ್ಲಿಟ್ಟುಕೊಂಡು ಬಿಂದಿಗೆಯನ್ನು ರಚಿಸಿರಲಾರ. ಆದರ ರಚನೆಯಲ್ಲಿ ಲಕ್ಷೋಪಲಕ್ಷ ಅಂಶಗಳು ಅಡಕವಾಗಿವೆ. ಅನೇಕ ಪೀಳಿಗೆಗಳಲ್ಲಿ ಅಸಂಖ್ಯಾತ ಜನ ಅದಕ್ಕೆ ಇಂದಿನ ರೂಪ ಕೊಡಲು ಸಹಾಯಮಾಡಿದ್ದಾರೆ. ನೂರಾರು ಜನ ಶಿಲ್ಪಿಗಳು ತಮಗೆ ಅವಶ್ಯ ಎಂದು ತೋರಿದ್ದ ಒಂದೊಂದು ಅಂಶವನ್ನು ಬಿಂದಿಗೆಯ ತಯಾರಿಕೆಯಲ್ಲಿ ಕೂಡಿಸಿದ್ದಾರೆ; ಅನವಶ್ಯಕ ಎಂದು ಕಂಡದ್ದನ್ನು ತೆಗೆದು ಹಾಕಿದ್ದಾರೆ ಅಥವಾ ಬದಲಾಯಿಸಿದ್ದಾರೆ.

ಬಿಂದಿಗೆಯ ನಿರ್ಮಾಣದಲ್ಲಿ ಇಲ್ಲಿನ ಜನ ತೋರಿಸಿರುವ ಅದ್ಭುತ ಸೇವಾಭಾವ, ಘನತೆ, ಪ್ರೀತಿ ಇಲ್ಲೊಂದು ರಚನಾಶಿಲ್ಪ ಸಂಸ್ಥೆಯನ್ನು ಸ್ಥಾಪಿಸುವಾಗ ಬರಬಹುದಾದ ಸಮಸ್ಯೆಗಳನ್ನು ಎದುರಿಸಲು ಸಾಮರ್ಥ್ಯವನ್ನು ಕೊಡುತ್ತವೆ ಎಂದು ಭಾವಿಸುತ್ತೇವೆ.



ಪ್ರತಿಯೊಂದು ಅಸ್ವಾಸ್ಥ್ಯಕ್ಕಾಗಿ ವೈದ್ಯರೆಡೆಗೆ ಓಡಬೇಡ. ಪ್ರತಿಯೊಂದು ನ್ಯಾಯಕ್ಕಾಗಿ ವಕೀಲರೆಡೆಗೆ ಹೋಗಬೇಡ. ಪ್ರತಿಯೊಂದು ತೃಷೆಗಾಗಿ ನೀರಿನ ಕೊಡದೆಡೆಗೆ ಹೋಗಬೇಡ.

—ಜಾರ್ಜ್ ಹರ್ಬರ್ಟ್

ಮಾನಭಂಗ

ಎಚ್. ಆರ್. ಚಂದ್ರವದನರಾವ್
೨೮೬೬/೧೦, ೬ ನೇ ಕ್ರಾಸ್
ಚಾಮುಂಡಿಪುರಂ, ಮೈಸೂರು–೪

'ಸುಚಿತ್ರ ನರ್ಸಿಂಗ್ ಹೋಂ'ನ ಟೆಲಿಫೋನ್ ಗಂಟೆ ಬಾರಿಸಿದೊಡನೆ ಸ್ವಾಗತಕಾರಿಣಿ ಸಾರಾ ಸ್ಯಾಂಡರ್ಸ್ ಫೋನನ್ನು ತೆಗೆದುಕೊಂಡಳು. ಫೋನ್ ಮಾಡಿದವರು ಆರ್ಥಿಕ ಸಚಿವ ಅಮರ್ ಸಿಂಗ್‌ರವರ ಪಿ. ಎ. ಮೆಹ್ತಾ. ಅವರು ಹೇಳಿದರು– "ಮಂತ್ರಿಗಳು ಡಾ॥ ಮಹದೇವ್ ಅವರನ್ನು ಕನ್‌ಸಲ್ಟ್ ಮಾಡಬೇಕಾಗಿದೆ. ದಯವಿಟ್ಟು ಅವರನ್ನು ಮಂತ್ರಿಗಳ ನಿವಾಸಕ್ಕೆ ಸಂಜೆ ೭ ರಿಂದ ೮ ಗಂಟೆಯೊಳಗೆ ಬರಲು ಹೇಳುತ್ತೀರಾ?"

"ಡಾಕ್ಟರ್ ಇಲ್ಲೇ ಇದ್ದಾರೆ, ಅವರಿಗೇ ಫೋನ್ ಕೊಡುತ್ತೇನೆ. ನೀವೇ ಮಾತನಾಡಿ."
"ಆಯಿತು."

ಮೆಹ್ತಾ ಹೇಳಿದ್ದನ್ನು ಕೇಳಿದ ಮೇಲೆ ಮಹದೇವ್, "ಕನ್‌ಸಲ್ಟೇಶನ್ ಅಂದರೆ ಇಲ್ಲಿಗೇ ಅವರು ಬರಬೇಕಾಗುತ್ತದೆ. ರೋಗಿಗಳನ್ನು ನಾನು ಇನ್ನೆಲ್ಲೂ ನೋಡುವುದಿಲ್ಲ. ಅವರು ಇಲ್ಲಿಗೆ ಬರುವುದಾದರೆ ಭೇಟಿಯ ಕಾಲವನ್ನು ನಿಷ್ಕರ್ಷೆಮಾಡಿ ಬರಬೇಕು. ಹಾಗೆಂದು ಮಂತ್ರಿವರ್ಯರಿಗೆ ತಿಳಿಸಿ."

ಡಾ॥ ಮಹದೇವ್ ಹೀಗೆ ಹೇಳುತ್ತಾರೆಂದು ಅಮರ್ ಸಿಂಗ್ ಕನಸುಮನಸ್ಸಿನಲ್ಲೂ ಎಣಿಸಿರಲಿಲ್ಲ. ಸರ್ಕಾರಿ ಡಾಕ್ಟರ್ ಆಗಿದ್ದರೆ ಓಡೋಡಿ ಬರುತ್ತಿದ್ದರೇನೋ! ಆದರೆ ಖಾಸಗಿ ವೈದ್ಯರ ಮೇಲೆ ಮಂತ್ರಿಗಳ ಅಧಿಕಾರವೇನಿರುತ್ತದೆ? ಅಮರ್ ಸಿಂಗ್ ಅವರಿಗೆ ಬೇರೆ ಯಾವ ವೈದ್ಯರನ್ನು ನೋಡಲು ಇಷ್ಟವಿಲ್ಲ. ಇದಕ್ಕೆ ಕಾರಣ ಮಹದೇವ್‌ರವರು ತಮ್ಮ ವೃತ್ತಿಯಲ್ಲಿ ಗಳಿಸಿರುವ ಯಶಸ್ಸು, ಅವರ ವರ್ಚಸ್ಸು ಮತ್ತೆ ಹಸ್ತಗುಣ.

ವೈದ್ಯಕೀಯ ಪರೀಕ್ಷೆ ಮುಗಿಸಿದೊಡನೆ ಮಿಲಿಟರಿಗೆ ಸೇರಿ ಅಲ್ಲಿ ಐದು ವರ್ಷ ಸೇವೆ ಸಲ್ಲಿಸಿ ನಂತರ ಲಂಡನ್ನಿನಲ್ಲಿ ಎರಡು ವರ್ಷ, ಷಿಕಾಗೋವಿನಲ್ಲಿ ಮೂರು ವರ್ಷ ವ್ಯಾಸಂಗ ಮಾಡಿಬಂದ ಮಹದೇವ್ ರಾಜಧಾನಿಯಲ್ಲಿ ತಮ್ಮ ನರ್ಸಿಂಗ್ ಹೋಂ ತೆಗೆದು ಹದಿನೈದು ವರ್ಷವಾಗಿತ್ತು. ಸೈಕೋ–ಅನಾಲಿಸ್ಟ್ ಹಾಗೂ ಸೈಕಿಯಾಟ್ರಿಸ್ಟ್ ಆಗಿ ಅವರು ಸ್ವಲ್ಪ ಕಾಲದಲ್ಲೇ ಯಶಸ್ಸುಗಳಿಸಿದ್ದರು. ಆರು ಅಡಿ ಎತ್ತರ, ಸುಂದರ ಮುಖ, ಬಿಳಿ ತ್ವಚೆ, ಬೂದು ಬಣ್ಣದ ಕಣ್ಣುಗ

ಅಗಲವಾದ ಹಸ್ತ, ನೀಳ ಬೆರಳುಗಳು, ಮೃದುವಾದ ಮಾತು ಇವೆಲ್ಲಾ ಪ್ರಭಾವ ಬೀರುವ ಅವರ ವ್ಯಕ್ತಿತ್ವಕ್ಕೆ ಕಾರಣ. ರೋಗಿಯನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುವ ರೋಗಿಯನ್ನು ಮುಟ್ಟಿದೊಡನೆ ಅವನಲ್ಲಿ ಎಂತಹುದೋ ವಿದ್ಯುತ್ ಸಂಚಾರವಾಗಿ ಅವನು ಪೂರ್ಣವಾಗಿ ಅವರ ವಶವಾಗುತ್ತಿದ್ದ. ಯಾರಿಗೂ ಹೇಳದ ಗುಟ್ಟನ್ನು ಅವರಿಗೆ ಹೇಳಿಬಿಡುತ್ತಿದ್ದ. ಅದನ್ನು ಕಂಡುಕೊಂಡು ಮಹದೇವ್ ಸೂಕ್ತ ಸಲಹೆ ಕೊಡುತ್ತಿದ್ದರು; ಅವರಲ್ಲಿ ಧೈರ್ಯ ತುಂಬುತ್ತಿದ್ದರು, ಕೊಡುತ್ತಿದ್ದ ಔಷಧಿ ಕಡಿಮೆ. ಅವರ ಚಿಕಿತ್ಸೆಗೆ ಒಳಗಾಗುವುದೆಂದರೆ ಹೆಚ್ಚು ಕಡಿಮೆ ಮನೋರೋಗ ವಾಸಿಯಾದಂತೆಯೇ.

ಅಮರ್‌ಸಿಂಗ್‌ರವರಿಗೆ ಗೊತ್ತಿದ್ದ ಮಾನಸಿಕ ರೋಗದಿಂದ ಬಳಲುತ್ತಿದ್ದ ನಾಲ್ಕಾರು ರೋಗಿಗಳನ್ನು ಡಾ|| ಮಹದೇವ್ ವಾಸಿಮಾಡಿದ್ದರು. ಆದುದರಿಂದಲೇ ಅಮರ್‌ಸಿಂಗ್ ಅವರನ್ನು ಕಾಣಲು ನಿಶ್ಚಯಿಸಿದ್ದು.

ಮಂತ್ರಿಗಳಿಗೆ ವೈದ್ಯರನ್ನು ನೋಡುವ ವೇಳೆ ಗೊತ್ತಾಯಿತು.

ಅಂದು ಮಂತ್ರಿವರ್ಯರ ಕಾರು ಬಂದೊಡನೆ ಪೋರ್ಟಿಕೋದಲ್ಲಿ ಡಾ|| ಮಹದೇವ್ ಮತ್ತು ಅವರ ಸಹಾಯಕರು ಅವರನ್ನು ಸ್ವಾಗತಿಸಿದರು. ಅವರನ್ನು ಮಹದೇವ್ ಅವರ ಕೊಠಡಿಗೆ ಕರೆದುಕೊಂಡು ಬಂದರು. ಅವರು ಆಸೀನರಾದ ಮೇಲೆ ಮಹದೇವ್ ತಮ್ಮ ಕುರ್ಚಿಯಲ್ಲಿ ಕುಳಿತರು. ನಂತರ ೩-೪ ನಿಮಿಷ ಯಾರೂ ಮಾತನಾಡಲಿಲ್ಲ.

ಕಡೆಗೆ ಸಿಂಗ್, 'ನಿಮ್ಮ ಸಲಹೆ ಕೇಳಲು ಬಂದೆ,' ಎಂದರು.

"ಹೇಳಿ, ನಿಮಗೇನು ತೊಂದರೆ? ನಾನು ನಿಮಗೆ ಹೇಗೆ ಸಹಾಯಮಾಡಬಲ್ಲೆ? ನಿಮ್ಮ ವಯಸ್ಸು ಎಷ್ಟು"

"ನನಗೆ ೪೮ ವರ್ಷ. ನೋಡಿದವರು ನಲವತ್ತಕ್ಕೆ ಜಾಸ್ತಿ ಇಲ್ಲ ಅನ್ನುತ್ತಾರೆ. ಇದಕ್ಕೆ ಕಾರಣ ಬೆಳಗ್ಗೆ ಒಂದು ಗಂಟೆ ಯೋಗ ಮಾಡುತ್ತೇನೆ, ಸಂಜೆ ಟೆನ್ನೀಸ್ ಆಡುತ್ತೇನೆ. ನನ್ನ ಪರ್ಸನಲ್ ಫಿಜೀಯಷನ್ ನನ್ನನ್ನು ಸಂಪೂರ್ಣವಾಗಿ ಚೆಕ್-ಅಪ್ ಮಾಡಿ ನನ್ನ ಆರೋಗ್ಯ ಪರ್‌ಫೆಕ್ಟ್ ಆಗಿದೆ ಎಂದರು."

"ಸಂತೋಷ. ಹಾಗಾದರೆ ನೀವು ಇಲ್ಲಿಗೆ ಬಂದದ್ದು?"

"ನನಗೇನೂ ಸೀರಿಯಸ್ ಕಾಯಿಲೆ ಇಲ್ಲ. ಆದರೆ ಮೂರು ತಿಂಗಳಿಂದ ಸರಿಯಾಗಿ ನಿದ್ದೆ ಬರುತ್ತಿಲ್ಲ.' ಕೆಟ್ಟ ಕನಸು. ಏನೋ ವಿವರಿಸಲಾಗದ ಭಯ."

"ಏನಾದರೂ ಯೋಚನೆ?"
"ಅಂತಹುದು ಏನೂ ಇಲ್ಲ."
"ಹಾಗಾದರೆ?"
ಅಮರ್‌ಸಿಂಗ್ ಸುಮ್ಮನಿದ್ದರು.

ಡಾ|| ಮಹದೇವ್, "ನೀವು ನನಗೆ ಪೂರ್ತಿಯಾಗಿ ವಿಷಯ ಹೇಳಬೇಕು. ಇಲ್ಲದೇ ಹೋದರೆ ಸಮಸ್ಯೆಯನ್ನು ವಿಶ್ಲೇಷಿಸುವುದು ಕಷ್ಟಸಾಧ್ಯ. ನಿಮ್ಮ ಬಗ್ಗೆ ಸ್ವಲ್ಪ ಹೇಳುತ್ತೀರಾ?"

"ಸ್ವಾತಂತ್ರ್ಯಕ್ಕೆ ಮುಂಚೆ ನಾರಾಯಣ್‌ಘಡ ಒಂದು ಸಂಸ್ಥಾನ. ಅದೇನೂ ಹೈದರಾಬಾದು, ಕಾಶ್ಮೀರ, ಮೈಸೂರು, ಪಾಟಿಯಾಲದಷ್ಟು ದೊಡ್ಡ ಸಂಸ್ಥಾನವಲ್ಲ; ಆದರೂ ಚಿಕ್ಕದೇನಲ್ಲ. ಅದರ ರಾಜ ನಮ್ಮ ತಂದೆ. ಅವರಿಗೆ ೧೪ ಗನ್ ಸಲ್ಯೂಟ್ ಗೌರವವಿತ್ತು. ಅವರಿಗೆ ನಾನೊಬ್ಬನೇ ಮಗ. ನನ್ನ ವಿದ್ಯಾಭ್ಯಾಸ ಹ್ಯಾರೋ, ಆಕ್ಸ್‌ಫರ್ಡ್ ಮತ್ತು ಹಾರ್ವರ್ಡ್‌ನಲ್ಲಾಯಿತು. ಅರ್ಥಶಾಸ್ತ್ರ ನಾನು ವ್ಯಾಸಂಗ ಮಾಡಿದ ವಿಷಯ. ದೇಶೀಸಂಸ್ಥಾನಗಳೆಲ್ಲಾ ವಿಲೀನಗೊಂಡು ಭಾಷಾವಾರು ರಾಜ್ಯಗಳಾದ ಮೇಲೆ ನಮ್ಮ ತಂದೆ ನಾರಾಯಣಸಿಂಗ್ ರಾಯಭಾರಿಯಾಗಿದ್ದರು. ಆಳುವ ಪಕ್ಷದ ಅಭ್ಯರ್ಥಿಯಾಗಿ ನಾನು ರಾಜ್ಯಸಭೆಗೆ ಆಯ್ಕೆಗೊಂಡು ಮಂತ್ರಿಯಾಗಿದ್ದೇನೆ. ನೀವು ಏನಾದರೂ ಹೇಳಿ ನನಗೆ ಈ ಡೆಮೊಕ್ರಸಿ (ಪ್ರಜಾರಾಜ್ಯ)ಯಲ್ಲಿ ನಂಬಿಕೆ ಇಲ್ಲ. ಧರ್ಮಬುದ್ಧಿಯುಳ್ಳ ನಿರಂಕುಶಾಧಿಕಾರಿ ಅಥವಾ ರಾಜ ಜನರಿಗೆ ನಿಜವಾಗಿಯೂ ಉಪಕಾರ ಮಾಡಬಲ್ಲ. ಮಾನವರೆಲ್ಲಾ ಒಂದೇ ಎಂದು ಹೇಳಿ ಗಟರ್‌ನಲ್ಲಿರುವವರು ಶಾಸಕರಾಗುವುದು, ಮಂತ್ರಿಗಳಾಗುವುದು ನನ್ನ ಮನಸ್ಸಿಗೆ ಒಪ್ಪುವುದಿಲ್ಲ."

"ನಿಮ್ಮ ತಂದೆ ಕಾಲಕ್ಕೆ ತಕ್ಕ ಹಾಗೆ ಬದಲಾಯಿಸಿದ ಹಾಗೆ ನೀವೂ ನಿಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳಬೇಕು."

"ಸ್ವಲ್ಪ ಕಷ್ಟ. ಪ್ರಯತ್ನ ಮಾಡುತ್ತಿದ್ದೇನೆ."

ನಂತರ ಎರಡು ಮೂರು ನಿಮಿಷ ಸುಮ್ಮನಿದ್ದು ಅಮರ್‌ಸಿಂಗ್ ಪುನಃ ಮಾತನಾಡಲು ಪ್ರಾರಂಭಿಸಿದರು.

"ಡಾ|| ಮಹದೇವ್, ಈಗ ಮೂರು ತಿಂಗಳ ಹಿಂದೆ ಲೋಕಸಭೆಯಲ್ಲಿ ನನಗೂ ಕೇಶವದಾಸ್‌ಗೂ ಮಾತಿನ ಚಕಮಕಿಯಾಯಿತು. ಪತ್ರಿಕೆಗಳಲ್ಲೂ ಬಂದಿತ್ತು. ನಿಮಗೆ ಗೊತ್ತಿರಬೇಕು."

"ಇಲ್ಲ. ಪತ್ರಿಕೆಗಳನ್ನು ನಾನು ಅಷ್ಟು ಕೂಲಂಕಷವಾಗಿ ಓದುವುದಿಲ್ಲ."

"ಸರಿ. ನಾನೇ ಹೇಳುತ್ತೇನೆ. ಕೇಶವದಾಸ್ ಸ್ಕೂಲ್ ಡ್ರಾಪ್–ಔಟ್. ಇಂಗ್ಲಿಷ್ ಇರಲಿ, ಮಾತೃಭಾಷೆಯೇ ಅವನಿಗೆ ಸರಿಯಾಗಿ ಬರುವುದಿಲ್ಲ. ಹೊಲಸು ಉಚ್ಚಾರಣೆ. ಅವನಿಗೆ 'ಬಜೆಟ್'ಬಗ್ಗೆ ಇರುವ ಜ್ಞಾನ ದೊಡ್ಡಸೊನ್ನೆ. ಹಾಗಾದರೂ ನಾನು ಆಯ–ವ್ಯಯ ಪಟ್ಟಿಯನ್ನು ಮಂಡಿಸಿದ ಮೇಲೆ ಆದ ಚರ್ಚೆಯಲ್ಲಿ ಅರ್ಥವಿಲ್ಲದ ಮಾತನಾಡಿದ. 'ಖೋತಾ ಬಜೆಟ್ ದೇಶಕ್ಕೆ ಹಾನಿ, ಮಂತ್ರಿಗಳು ದುಡ್ಡು ತಿನ್ನುವುದಕ್ಕೆ ಇಂತಹ ಬಜೆಟ್' ಅಂದ. ನಾನು 'ಖೋತಾ ಬಜೆಟ್‌ನಿಂದ ದೇಶಕ್ಕೆ ಯಾವ ಹಾನಿಯೂ ಇಲ್ಲ' ಎಂದು ಹೇಳಿದರೆ ಅವನಿಗೆ ಅರ್ಥವಾಗಲಿಲ್ಲ. ನನಗೆ ಕೋಪ ಬಂದು, 'ನಿಮಗೆ ಅರ್ಥಶಾಸ್ತ್ರದ ಎಬಿಸಿ ಗೊತ್ತಿಲ್ಲ. ಗೊತ್ತಿಲ್ಲದವರು ಬಾಯಿ ಮುಚ್ಚಿಕೊಂಡಿರಬೇಕು. ನಿಮ್ಮಂತಹವರು ಇಂತಹ ಸಂಕೀರ್ಣ ವಿಷಯ ತಿಳಿದುಕೊಳ್ಳುವುದಕ್ಕೆ ಎರಡು ಮೂರು ದಶಕಗಳು ಬೇಕು ಎಂದು ಮುಖ ಮುರಿದು ಕೂರಿಸಿದೆ.' ಈಗ ಹಾಗೆ ಮಾಡಬಾರದಾಗಿತ್ತು ಎಂದುಕೊಳ್ಳುತ್ತೇನೆ.'

“ಕ್ಷಮೆ ಯಾಚಿಸಿ. ‘ಮರೆತು ಬಿಡಿ’ ಎಂದು ಹೇಳಿ. ನಿಮ್ಮ ಮನಸ್ಸಿಗೂ ಹಗುರ. ನಿದ್ದೆ ಬರುತ್ತದೆ. ಕೆಟ್ಟ ಕನಸು ಬೀಳುವುದಿಲ್ಲ.”

“ಎಲ್ಲಾ ಬಿಟ್ಟು ಅವನನ್ನು ಕ್ಷಮಿಸು ಎಂದು ಕೇಳುವುದಕ್ಕೆ ನನಗೆ ಆಗುವುದಿಲ್ಲ. ಆತ ಆ ರಾತ್ರಿ ಫೋನಿನಲ್ಲಿ ಹೇಳಿದ್ದನ್ನು ಕೇಳಿದ ಮೇಲೆ ನನಗೆ ಕ್ಷಮೆ ಕೇಳಲು ಸಾಧ್ಯವೇ ಇಲ್ಲ.”

“ಆತ ಫೋನಿನಲ್ಲಿ ಹೇಳಿದ್ದೇನು?”

‘ನೀವು, ನಾನು ದಡ್ಡಶಿಖಾಮಣಿ ಎನ್ನುವ ಹಾಗೆ ಮಾತನಾಡಿದಿರಿ. ನನ್ನ ಯೋಗ್ಯತೆ ಬಗ್ಗೆ ನೀವು ಅವಮಾನ ಮಾಡಿದಿರಿ. ನಿಮ್ಮಮ್ಮ ರಾಣಿಯಾಗಿದ್ದು ಮುಸಲ್ಮಾನ ಎಡಿಸಿಯೊಡನೆ ಓಡಿ ಹೋದ ವಿಷಯ ಈಗಿನ ತಲೆಮಾರಿನವರಿಗೆ ಗೊತ್ತಿಲ್ಲ. ಆ ವಿಷಯವನ್ನು ಅಚ್ಚು ಹಾಕಿಸಿ ಎಲ್ಲರಿಗೂ ಹಂಚುತ್ತೇನೆ. ನಿಮ್ಮ ಮಗ ‘ಡ್ರಗ್ ಅಡಿಕ್ಟ್’ ಹಾಗೂ ಡ್ರಗ್ ಟ್ರಾಫಿಕರ್ ಅನ್ನುವ ವಿಷಯ ನನಗೆ ಗೊತ್ತಿದೆ. ಅದನ್ನು ಎಲ್ಲರಿಗೂ ಹೇಳಿ ನಿಮ್ಮ ಮಾನ ತೆಗೆಯುತ್ತೇನೆ’ ಎಂದ. ನಾನು “ನನ್ನ ಮನೆ ವಿಷಯ ಬಾಯಿಬಿಟ್ಟರೆ, ನನ್ನ ಮನೆತನದ ಗೌರವ ಹಾಳುಮಾಡಲು ಯತ್ನಿಸಿದರೆ ನಿನ್ನನ್ನು ‘ಇಲ್ಲ’ ಅನ್ನುವ ಹಾಗೆ ಮಾಡುತ್ತೇನೆ” ಎಂದು ಹೇಳಿ ಫೋನನ್ನ ಕುಕ್ಕಿದೆ. “ಈ ವಿಷಯ ನಡೆದು ಮೂರು ತಿಂಗಳಾಯಿತು. ಅಂದಿನಿಂದ ನನಗೆ ಸರಿಯಾಗಿ ನಿದ್ದೆ ಬರುತ್ತಿಲ್ಲ. ನನ್ನ ಮಾನ ಹೋಯಿತು ಅನ್ನುವ ಕನಸು. ಕೇಶವದಾಸ್ ನನ್ನ ಬಗ್ಗೆಯಾಗಲೀ ನನ್ನ ಸಂಸಾರದ ಬಗ್ಗೆಯಾಗಲಿ ಅನಂತರ ಮಾತನಾಡಲಿಲ್ಲ.’

“ಆತನು ಮರೆತಿದ್ದಾನೆ, ನೀವೂ ವಿಷಯ ಮರೆತುಬಿಡಿ.”

“ಹಾಗಲ್ಲ ಡಾಕ್ಟ್ರೇ, ಒಂದು ವಾರದ ಕೆಳಗೆ ಅವನು ಸತ್ತುಹೋದ. ‘ಆತ್ಮಹತ್ಯೆ’ ಎಂದು ಮೆಡಿಕಲ್ ರಿಪೋರ್ಟ್‌ನಿಂದ ಗೊತ್ತಾಗಿದೆ. ಹಾಗಾದರೂ ಕೆಲವರು ಮುಖ್ಯವಾಗಿ ಎದುರು ಪಕ್ಷದವರು—ಕೇಶವದಾಸ್ ಮರಣ ಆತ್ಮಹತ್ಯೆಯಲ್ಲ, ಕೊಲೆ. ಕೊಲೆಗೆ ಕಾರಣ ನಾನು ಎಂದು ಮಾತನಾಡಿಕೊಳ್ಳುತ್ತಿದ್ದಾರೆ ಎಂದು ಗೊತ್ತಾಯಿತು. ಅದಕ್ಕೆ ನನಗೆ ಒಂದು ಬಗೆಯ ‘ಭಯ’ ಹತ್ತಿದೆ.

“ಮಿ. ಅಮರ್‌ಸಿಂಗ್, ಕೊಲೆ ನೀವು ಮಾಡಿಸಿಲ್ಲವಲ್ಲ, ಏಕೆ ಹೆದರಿಕೆ?”

“ಆತ್ಮಹತ್ಯೆಯಾದರೂ ಅದಕ್ಕೆ ಕಾರಣ ನಾನಿರಬಹುದೇ ಎಂಬ ಹೆದರಿಕೆ.”

“ಹೆದರಬೇಡಿ, ನರ್ಸಿಂಗ್ ಹೋಂಗೆ ಅಡ್ಮಿಟ್ ಆಗಿ. ಹದಿನೈದು ದಿನದಲ್ಲಿ ಹುಷಾರಾಗುತ್ತೀರಿ” ಎಂದರು ಡಾ|| ಮಹದೇವ.

ಆದರೆ ಹೇಳಿದಂತೆ ಅಮರ್‌ಸಿಂಗ್ ನರ್ಸಿಂಗ್ ಹೋಂಗೆ ಬರಲಿಲ್ಲ. ರಾತ್ರಿ ಮಲಗಿದವರು ಬೆಳಗ್ಗೆ ಏಳಲಿಲ್ಲ ಎಂಬ ವರ್ತಮಾನ ಎಲ್ಲೆಡೆ ಹರಡಿತು. ಕೆಲವರು ಹೃದಯಾಘಾತ ಎಂದರು, ಕೆಲವರು ಆತ್ಮಹತ್ಯೆ ಎಂದರು. ನಿಜ ಯಾವುದು ಡಾ|| ಮಹದೇವ್ ಅವರಿಗೂ ತಿಳಿಯದು. ಅಮರ್‌ಸಿಂಗ್ ಅವರನ್ನು ಉಳಿಸಲಿಲ್ಲ ಎಂಬ ಕೊರಗು ಅವರಿಗೆ.

———

ಸಂಪಾತಿ ಕೌರಳ ದಾರುಣ ಸತೀ ಸಹಗಮನ

ಎ. ಪಿ. ಗೌರೀಶಂಕರ
ವಕೀಲರು "ಶ್ರೀಶೈಲ"
ಓಂಟೋಲೇನ್ ಕ್ರಾಸ್ ರಸ್ತೆ ಕರಂಗಲ್ಪಾಡಿ
ಮಂಗಳೂರು ೫೭೫೦೦೧

ಕುರುಡು ನಂಬಿಕೆ, ಬಡತನ, ಅಮಲೇರಿಸುವ ಜನಜಂಗುಳಿ ಸೇರಿದರೆ ಮುಗ್ಧ ಬಾಲಿಕೆಯ ಸ್ಥಿತಿ ಏನಾಗಬೇಕು? ಗಂಡನ ಚಿತೆಯಿಂದ ಗಂಗೆಯ ಮಡಿಲು ಮತ್ತೆ ಬೋಳು ಬಯಲು ಕೊನೆಗೆ ಧಾರ್ಮಿಕ ಮಂದಿರಕ್ಕೆ ವಸ್ತು–ಓದಿ ಈ ದಾರುಣ ಸತ್ಯ ಘಟನೆ.

ಸಂಪಾತಿ ಕೌರಳ ದಾರುಣ ನಿಜ ಕಥೆಯಿಂದ ಬಡತನ ಹಾಗೂ ಕುರುಡು ನಂಬಿಕೆ ಮೇಳೈಸಿದರೆ ಸಾಂಪ್ರದಾಯಿಕ ಸಮಾಜದಲ್ಲಾಗುವ ಶೋಚನೀಯ ಪರಿಸ್ಥಿತಿಯ ಪೂರ್ಣಾನುಭವವಾಗುತ್ತದೆ. ಈ ಘಟನೆ ಇಂದಿಗೆ ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಪಾಟ್ನಾ ಸಮೀಪದ ಬೆರ್ಹ್ನಾ ಎಂಬ ಹಳ್ಳಿಯಲ್ಲಿ ನಡೆಯಿತು. ಸಂಪಾತಿಕೌರ್ ಸಾಂಪ್ರದಾಯಿಕ ಬ್ರಾಹ್ಮಣ ಸಮಾಜದ ಸುಮಾರು ೨೧ ವರ್ಷ ವಯಸ್ಸಿನ ವಿವಾಹಿತೆ ಹಾಗಿದ್ದರೂ ಕನ್ಯೆ. ಅವಳ ತಂದೆ-ತಾಯಿಯರು ಬಹಳ ವರ್ಷಗಳ ಮೊದಲೇ ಮೃತಪಟ್ಟಿದ್ದರು. ಒಡಹುಟ್ಟಿದ ೧೨ರ ಮುರಲೀಧರನೊಬ್ಬನೇ ಹತ್ತಿರದ ಬಂಧು. ಸ್ವಜಾತಿಯ ಜಗದೇವ ಪಾಂಡೆ ದೂರದ ಸಂಬಂಧಿ. ಕಡುಬಡತನ, ಮತ್ತು ಮತೀಯ ಕುರುಡು ನಂಬಿಕೆ—ಇವೆರಡರ ನಡುವೆ ಹೊಯ್ದಾಡುವ ಬದುಕು. ಅವಳಿಗೆ ೧೦-೧೧ ವಯಸ್ಸಿನಲ್ಲೇ ಸಮೀಪದ ಹಳ್ಳಿಯ ಸಿದ್ಧೇಶ್ವರ ಪಾಂಡೆಯೊಡನೆ ವಿವಾಹವಾಗಿದ್ದರೂ ಪತಿಗೃಹಕ್ಕೆ ಹೋಗಿರಲಿಲ್ಲ. ಆತನಕ ಪ್ರಸ್ತವಾಗದ ದಾಂಪತ್ಯದ ಅರಿವಿಲ್ಲದ ಮುಗ್ಧ ಬಾಲಿಕೆ. ಈ ಘಟನೆಗೆ ಸುಮಾರು ಮೂರು ತಿಂಗಳ ಮೊದಲು ಸಿದ್ಧೇಶ್ವರ ಪಾಂಡೆ ತೀವ್ರ ಖಾಯಿಲೆ ಬಿದ್ದ. ಪತಿಯ ಶುಶ್ರೂಷೆಗಾಗಿ ಆಗಸ್ಟ್ ತಿಂಗಳಲ್ಲಿ ಅವಳು ಪತಿಗೃಹಕ್ಕೆ ಹೋಗಿ ಪೂರ್ಣ ಶ್ರದ್ಧೆಯಿಂದ ಶುಶ್ರೂಷೆ ನಡೆಯಿಸಿದರೂ ಅವನನ್ನು ಉಳಿಸಿಕೊಳ್ಳಲಾಗಲಿಲ್ಲ. ನವೆಂಬರ್ ೨೧ ರಂದು ಅವನು ಕೊನೆಯುಸಿರೆಳೆದನು. ಅಂದೇ ಅವಳ ದಾರುಣ ಕಡೆಯ ಅಂತಿಮ ಅಂಕ ಪ್ರಾರಂಭ.

ಏಕಮಾತ್ರ ಸೋದರ ಮಾವ ಬಹಳ ಹಿಂದೆಯೇ ಇವರ ಸಂಬಂಧ ಕಡಿದುಕೊಂಡಿದ್ದ. ಹದಿನೇಳರ ಹರೆಯದ ಕುರುಡು ನಂಬಿಕೆಯ ಶ್ರದ್ಧಾಳು ತಮ್ಮ. ಅವನು ಹುಡುಗನಾಗಿದ್ದ ಕಾರಣಕ್ಕಾಗಿ ಮಾತ್ರ ಕುಟುಂಬದ ಯಜಮಾನ. ದೂರದ ಸಂಬಂಧಿ ಜಗದೇವ ಪಾಂಡೆ ಮತ್ತು ಪತಿಯ ತಮ್ಮ ವಿದ್ಯಾಧರ ಪಾಂಡೆ ಸೂಚಿಸುವಂತೆ ವರ್ತಿಸುವವನು ತಮ್ಮ. ಪಾಂಡೆ ಕುಟುಂಬದ ಧಾರ್ಮಿಕ ಸಂಸತ್ತು ನಿರ್ಧರಿಸಿದಂತೆ ಸಂಪಾತಿ ಪತಿಯೊಡನೆ ಚಿತೆಯೇರಿ ಸಹಗಮನ ಮಾಡಲು "ಸ್ವಇಚ್ಛೆ" ಯಿಂದ ಒಪ್ಪಿಕೊಂಡಳು. ಸಂಪಾತಿ ಬದುಕಿ ಉಳಿದರೆ ಮೃತ ಸಿದ್ಧೇಶ್ವರನ ಆಸ್ತಿಯಿಂದ ಜೀವನಾಂಶ ಪಡೆಯುವ ಹಕ್ಕು ಅವಳಿಗಿರುವ ಕಾರಣವೂ ಧಾರ್ಮಿಕ ಸಂಸತ್ತಿನ ಒಮ್ಮತದ ನಿರ್ಧಾರಕ್ಕೆ ಕಾರಣವಿರಬಹುದೆಂಬುದು ಕೇವಲ ನಮ್ಮ ಊಹೆ. ದಿನಾಂಕ ೨೧ ರಂದು ರಾತ್ರಿಯೇ ಶವ ಎತ್ತುವ ಸಂಸ್ಕಾರ ತೀರಿಸಿ, ಚಟ್ಟದಲ್ಲಿ ಶವವಿಟ್ಟು, ಪಕ್ಕದಲ್ಲಿ ಸಂಪಾತಿ ಕುಳಿತು ಎತ್ತಿನ ಗಾಡಿಯಲ್ಲಿ ಸುಮಾರು ೨-೩ ಮೈಲಿ ದೂರದ ಗಂಗಾ ನದೀ ತೀರದ ರುದ್ರಭೂಮಿಗೆ ಸಾಧಾರಣ ೧೫–೧೬ ಮಂದಿಯ ಮೆರವಣಿಗೆ ಹೊರಟಿತು. ಸೂರ್ಯೋದಯಕ್ಕೆ ಮುಂಚೆ ದಾರಿಯಲ್ಲಿರುತ್ತಿದ್ದ ಆ ವಿಭಾಗದ ಸರಕಾರದ ದಂಡಾಧಿಕಾರಿಗಳ ಕೋರ್ಟಿನ ಪಠಾರದಲ್ಲಿ ಆ ಜನರು ಸ್ವಲ್ಪ ಕಾಲ ವಿಶ್ರಮಿಸಿ ಮುಂದುವರಿಯುವುದಿತ್ತು. ಅಷ್ಟರಲ್ಲಿ ವಿಧವೆಯೋರ್ವಳು–ಚಿತೆಯೇರುವ ಸಿದ್ಧತೆಯಲ್ಲಿರುವ ಸುದ್ದಿ ಹತ್ತಿರದ ಪೊಲೀಸು ಠಾಣೆಗೆ ತಲುಪಿ, ಮುಖ್ಯ ಅಧಿಕಾರಿ ಇತರ ಜವಾನರೊಡನೆ ಶವ ಮೆರವಣಿಗೆಯ ಮುಖ್ಯಸ್ಥರನ್ನು ಸಂಧಿಸಿ ಸತೀ-ಸಹಗಮನ ಭಾರತದ ದಂಡ ಸಂಹಿತೆ ಪ್ರಕಾರ ಶಿಕ್ಷಾರ್ಹ ಅಪರಾಧ. ಅದನ್ನು ಪ್ರೇರೇಪಿಸುವ ಮತ್ತು ಅದಕ್ಕೆ ಸಹಕರಿಸುವ ಸಂಗಡಿಗರೆಲ್ಲರೂ ಕಠಿಣ ಶಿಕ್ಷೆಗೆ ಗುರಿಯಾಗುತ್ತಾರೆ. ಆದುದರಿಂದ ವಿಧವೆಯನ್ನು ಅವಳ ತಂದೆ ಮನೆಗೆ ಕಳುಹಿಸಿ, ಶವವನ್ನು ಮಾತ್ರ ರುದ್ರಭೂಮಿಗೆ ಮುಂದುವರಿಸುವಂತೆ ಬುದ್ಧಿ ಹೇಳಿದರು. ಪ್ರಾರಂಭದಲ್ಲಿ ಪೊಲೀಸರ ವಿನಂತಿಯನ್ನು ಪಾಂಡೇ ಕುಟುಂಬದ ಹಿರಿಯರು ತಿರಸ್ಕರಿಸಿದರು. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸು ಪಡೆ ಮತ್ತು ಉನ್ನತ ಅಧಿಕಾರಿಗಳು ಅಲ್ಲಿಗೆ ಬಂದು, ಶವವನ್ನು ಅವರ ವಶಕ್ಕೆ ತೆಗೆದುಕೊಂಡು ಕೊಳೆಯಿಸುವುದಾಗಿಯೂ, ವಿಧವೆ ಮತ್ತು ಮೆರವಣಿಗೆಯ ಮುಖ್ಯಸ್ಥರನ್ನೆಲ್ಲಾ ಬಂಧಿಸಿ ಕ್ರಿಮಿನಲ್ ದಾವೆ ಹಾಕುವುದಾಗಿ ಗದರಿಸಿದರು. ಪರಿಸ್ಥಿತಿಯ ವಿಷಮತೆಯನ್ನರಿತು ಸಂಪಾತಿ ಚಟ್ಟದಿಂದ ಇಳಿದಳು. ಶವವನ್ನು ಶ್ಮಶಾನಕ್ಕೆ ಜನರ ಹೆಗಲಿನ ಮೇಲೆ ಹೊರಿಸಿ ಕಳುಹಿಸಿದರು. ಪೊಲೀಸರು ಸಂಪಾತಿಯನ್ನು ಗಾಡಿಯಲ್ಲಿ ಕುಳ್ಳಿರಿಸಿ ಅವಳ ತಂದೆ ಮನೆಗೆ ಕಳುಹಿಸುವ ಏರ್ಪಾಡು ಮಾಡಿದರು. ತನ್ನ ತಂದೆ ಮನೆಗೆ ಹೋಗುತ್ತಿದ್ದೇನೆಂದೆ ಸಂಪಾತಿಯೂ ನಂಬಿದ್ದಳು. ಅವಳ ಜತೆಗೆ ತಮ್ಮ ಮುರಳೀಧರ, ಜಗದೇವ ಪಾಂಡೆ, ಸಂಗಾತಿ ಲಿಖಿಯಾ ಎಂಬ ಹೆಸರಿನ ಹೆಂಗಸು ಮತ್ತು ಪೊಲೀಸರೂ ಇದ್ದರು. ಇಷ್ಟರಲ್ಲಿ ಬೆಳಗಾಗಿತ್ತು. ಊರ ಜನರೂ ಹೆಚ್ಚಿನ ಸಂಖ್ಯೆಯಲ್ಲಿ ಮೆರವಣಿಗೆ ಸೇರಿ

ಕೊಂಡು "ಸತೀ ಮಾತಾಕೀ ಜೈ" ಎಂದು ಘೋಷಿಸತೊಡಗಿದರು. ವಿಷಮ ಪರಿಸ್ಥಿತಿಯಿಂದ ಸಂಪಾತಿಯನ್ನು ಪಾರುಗೊಳಿಸಿದೆವೆಂದು ತೃಪ್ತಿಪಟ್ಟ ಪೋಲೀಸರು, ಕ್ರೂರ ಕುತಂತ್ರಿಗಳಾದ ಪಾಂಡೇ ಕುಟುಂಬದ ಹಿರಿಯರ ಒಳಸಂಚನ್ನು ಆತನಕ ಮನಗಂಡಿರಲಿಲ್ಲ. ಪಾಂಡೇ ಕುಟುಂಬದ 'ಧರ್ಮಭೀರು' ಹಿರಿಯರು ಶವವನ್ನು ಶ್ಮಶಾನದತ್ತ ಸಾಗಿಸುವಂತೆ ನಿರ್ದೇಶಿಸಿ ಒಳದಾರಿಯಲ್ಲಿ ಅವಸರಿಸಿ ಸಂಪಾತಿಯು ಗಾಡಿಯುವರೊಡನೆ ಸೇರಿಕೊಂಡು ಬಲಿಪಶುವಾಗಿ ಅವಳನ್ನು ವಶಪಡಿಸಿಕೊಂಡರು. ಅಷ್ಟರಲ್ಲಿ ಜನಸಮುದಾಯ ನಾಲ್ಕು-ಐದು ಸಾವಿರ ಮೀರಿತ್ತು. "ಧರ್ಮಭೀರು" ಪಾಂಡೆ ಹಿರಿಯರು ಗಾಡಿಯ ಸುತ್ತುವರಿದಿದ್ದು ಅವಳಿಗೆ ಪತಿವ್ರತಾ ಧರ್ಮದ ಬೋಧನೆ ಸಾಕಷ್ಟು ಮಾಡಿದ್ದರು. ಮುಂದಿನ ವಿಪತ್ತನ್ನು ಮನಗಂಡ ಪೋಲೀಸರು ಸಂಪಾತಿ ಅವಳ ಮನೆಗೆ ಹಿಂದಿರುಗುವಂತೆ ಮನವೊಲಿಸಲು ಅರ್ಧ ತಾಸು ಕಾಲ ಪ್ರಯತ್ನಿಸಿ ವಿಫಲರಾದರು. ಸಂಪಾತಿ ಸತಿಯಾಗಿ ಚಿತೆಯೇರಲು ದೃಢ ನಿರ್ಧಾರ ತಳೆದಂತೆ ಕಂಡು ಬಂತು. ನಿಷ್ಠೆಯಿಂದ ಚಿತೆ ಏರಿದೊಡನೆ ದೈವಿಕ ಶಕ್ತಿಯಿಂದ ಅಗ್ನಿ ತನ್ನಿಂದ ತಾನೇ ಉದ್ಭವಿಸಿ ಸತಿ–ಪತಿಯನ್ನು ಯಾತನಾ-ರಹಿತ ಆಹುತಿ ತೆಗೆದುಕೊಳ್ಳುವುದಾಗಿ ದುಷ್ಟ ಪಾಂಡೇ ಹಿರಿಯರು ಮೋಸದಲ್ಲಿ ಅವಳನ್ನು ನಂಬಿಸಿದ್ದರು. ಹಾಗಿದ್ದರೂ ಪೋಲೀಸರ ಒತ್ತಡ ಕಡಿಮೆ ಮಾಡುವ ಉದ್ದೇಶದಿಂದ ಅವಳನ್ನು ತಂದೆ ಮನೆಗೆ ಕಳುಹಿಸಿಕೊಡುವುದಾಗಿ ಪಾಂಡೇ ಹಿರಿಯರು ಅವರಲ್ಲಿ ಸುಳ್ಳು ಹೇಳಿ ನಂಬಿಸಿದ್ದರು. ಸಂಪಾತಿ, ಹೆಣ್ಣು ಸಂಗಾತಿ ಲಿಖಿಯಾ ಮತ್ತು ತಮ್ಮ ಗಾಡಿಯಲ್ಲೂ ವಿದ್ಯಾಸಾಗರ ಮತ್ತು ಆರು ಮಂದಿ ಪಾಂಡೆ ಕುಟುಂಬದವರು ಗಾಡಿ ಜತೆ ನಡೆದರು. ಅಷ್ಟರಲ್ಲಿ ಪಾಂಡೆ ಕುಟುಂಬದವರು-ತಂದೆ ಮನೆಗೆ ಸಾಗಿದ್ದ ಗಾಡಿಯನ್ನು ಹಿಂದೆ ತರಿಸಿ, ಶ್ಮಶಾನದ ಕಡೆಗೆ ಬಲಾತ್ಕಾರದಲ್ಲಿ ತೆಗೆದುಕೊಂಡು ಹೋದರು. ನಾಲ್ಕೈದು ಸಾವಿರ ಧರ್ಮ ಭ್ರಾಂತ, ಘೋಷಣೆ ಕಿರುಚುತ್ತಿರುವ ಉದ್ರಿಕ್ತ ಜನರ ಮಧ್ಯೆ ಪೋಲೀಸರು ನಿಸ್ಸಾಹಯಕರಾದರು.

ಸಂಪಾತಿಯು ಗಾಡಿ ಶ್ಮಶಾನಕ್ಕೆ ತಲುಪಿದೊಡನೆಯೇ ವಿಧಿಯಂತೆ ಗಂಗಾ ಸ್ನಾನಕ್ಕೆ ಸಿದ್ಧತೆ ನಡೆಯಿತು. ತಮ್ಮ ಮತ್ತು ಜಗದೇವ ಪಾಂಡೆ ಬಟ್ಟೆಯ ತೆರೆ ಹಿಡಿದರು. ಲಿಖಿಯ ಸ್ನಾನ ಮಾಡಲು ಸಹಕರಿಸಿದಳು. ಇನ್ನೊಬ್ಬ ಅವಳ ಆಭರಣಗಳನ್ನೆಲ್ಲಾ ಕಳಚಿಕೊಂಡ. ಮತ್ತೊಬ್ಬ ಸತೀಸಂಸ್ಕಾರದಂತೆ ಅವಳ ಉಗುರುಗಳನ್ನು ಕತ್ತರಿಸಲು ಸಹಕರಿಸಿದ. ಅರಸಿನ ಕುಂಕುಮವಿಟ್ಟು ಮಡಿ ಬಟ್ಟೆ ಧರಿಸಿ, ದೇವರನ್ನು ಪ್ರಾರ್ಥಿಸಿ ಚಿತೆ ಏರಿ ಶವದ ಪಕ್ಕದಲ್ಲಿ ಸಂಪಾತಿ ಕುಳಿತಳು. ಬ್ರಾಹ್ಮಣರ ಏರುಕಂಠದ ಮಂತ್ರೋಚ್ಚಾರಣೆ, ಗಂಟೆ, ಜಾಗಟೆ ಬಜಾವಣೆ, ಉನ್ಮತ್ತ ಜನ ಜಂಗುಳಿಯ "ಸತೀ ಮಾತಾ ಕೀ ಜೈ" ಎಂಬ ಘೋಷಣೆ, ಕೊಳೆಯತೊಡಗಿದ ಶವದ ದುರ್ನಾಥ ಮಿಶ್ರಿತ ಕರ್ಪೂರ ಧೂಪ ಸುಗಂಧ ಪುಷ್ಪಗಳ ವಾಸನೆ–ಇವುಗಳ ಅಮಲೇರಿಸುವ ಪ್ರಭಾವದಲ್ಲಿ ಸತೀ ದೇವಿ ಎಲ್ಲಿಂದ ಚಿತೆ ಏರಿದಳು, ಹೇಗೆ ಕುಳಿತಳು–ಎಂಬ ವಿವರಗಳನ್ನು ಕಾಣದಿದ್ದ ಪೋಲೀಸರಿಗೆ ಗೋಚರ

ಸಿದಂತಿರಲಿಲ್ಲ–ಗೋಚರಿಸಿದ್ದರೂ ಕೇವಲ ೧೫–೧೬ ಬರಿಯ ಲಾಠಿ ಹಿಡಿದ ಬಡಕಲು ಜವಾನರು, ನಾಲ್ಕೈದು ಸಾವಿರ ಉದ್ರಿಕ್ತ ಮಂದಿಯ ಮಧ್ಯೆ ತಮ್ಮ ಜೀವ ಉಳಿಸಿಕೊಳ್ಳಲು ತೆಪ್ಪಗಿರಬೇಕಾಗಿತ್ತು. ಈಗ ಒಂದು ಸಂದಿಗ್ಧ ಪರಿಸ್ಥಿತಿ; ಪಾಂಡೆ ವಂಶಸ್ಥರು ಪೊಲೀಸರಿಗೆ ಈ ಮೊದಲು ತಿಳಿದಂತೆ ಮತ್ತು ನೆರೆದಿದ್ದ ಬಹು ಮಂದಿಯಲ್ಲಿ ಸಾರಿ ಹೇಳಿದಂತೆ ಯಾರೂ ಚಿತೆಗೆ ಅಗ್ನಿ ಸ್ಪರ್ಶ ಮಾಡಬೇಕಿಲ್ಲ. ದೈವಿಕ ಶಕ್ತಿ ಸತೀ ಮಾತೆಯ ಧರ್ಮ ನಿಷ್ಠೆಗೆ ಒಲಿದು ಅಗ್ನಿ ಸ್ವರೂಪದಲ್ಲಿ ಯಾವ ಯಾತನೆ ಇಲ್ಲದೆ ಆಹುತಿ ತೆಗೆದುಕೊಳ್ಳುವುದು; ದೈವಿಕ ಶಕ್ತಿ ಪತಿ–ಪತ್ನಿಯರನ್ನು ಅನಲ ನಾಲಗೆಯಲ್ಲಿ ಸ್ವರ್ಗಕ್ಕೇರಿಸುತ್ತದೆ. ಈಗ ಬಹಿರಂಗವಾಗಿ ಚಿತೆಗೆ ಕಿಚ್ಚು ಸೊಂಕಿಸಿದರೆ, ತಮ್ಮ ಮಾತು ಸುಳ್ಳಾಗುತ್ತದೆ. ಪೊಲೀಸರ ಮತ್ತು ನೆರೆದಿದ್ದ ಮುಗ್ಧ ಜನರೆದುರು ತಪ್ಪಿತಸ್ಥರಾಗುತ್ತಾರೆ. ಮುಂದೆ ಕ್ರಿಮಿನಲ್ ದಾವೆಯೂ ನಡೆವರೆ ತಮ್ಮ ಕೊರಳಿಗೆ ನೇಣು ಖಂಡಿತ. ಮೋಸ ಹೊಂದಿದ ಭಕ್ತರ ಕೋಪಕ್ಕೆ ಅಲ್ಲಿಯೇ ಬಲಿಯಾಗಲಿಕ್ಕೂ ಸಾಧ್ಯತೆ ಇದೆ. ಕಿಚ್ಚಿಟ್ಟು ಮುಗ್ಧ ಬಾಲಿಕೆಯನ್ನು ಕೊಂದರೆಂಬ ಶಾಶ್ವತ ಅಪಕೀರ್ತಿ ಬರಬಹುದು. ಆದರೆ ಅವರೊಂದು ಕುತಂತ್ರ ಮಾಡಿದ್ದರು. ಸ್ನಾನ ಮಾಡಿ, ಮಡಿಯುಟ್ಟು ಚಿತೆಯೇರಿದ ಸಂಪಾತಿಯ ಎಡಗೈ ಬಟ್ಟೆಯ ಸುರುಳಿಯಲ್ಲಿ ಅವಿತಿತ್ತು. ಕೈಯಲ್ಲಿ ಏನಿತ್ತು ಎಂಬುದು ಪಾಂಡೇ ಹಿರಿಯರಿಗಲ್ಲದೆ ಇತರರಿಗೆ ತಿಳಿಯದು. ಸಂಪಾತಿ ಚಿತೆಯ ಮೇಲೆ ಪದ್ಮಾಸನ ಹಾಕಿ ಕುಳಿತು ಶವದ ತಲೆಯನ್ನು ತನ್ನ ಎಡತೊಡೆಯ ಮೇಲಿಟ್ಟು ಮುಂದಿನ ದೈವಿಕ ಶಕ್ತಿಯ ಸ್ಫುರಣವನ್ನು ನಿರೀಕ್ಷಿಸುತ್ತಾ ಕುಳಿತಿದ್ದಾಗಲೂ ಎಡಗೈ ಬಟ್ಟೆ ಸುರುಳಿಯೊಳಗಿತ್ತು. ಆ ಕ್ಷಣದಲ್ಲಿ ಜನರ ಉದ್ರಿಕ್ತ ಕಿರುಚಾಟ, ಗಂಟೆ ಜಾಗಟೆಗಳ ಕಠೋರರವದಲ್ಲಿ ಯಾರಿಗೂ ಗೋಚರಿಸದೆ, ದೈತ್ಯಾಕಾರದ ಬೆಂಕಿ ಇಬ್ಬರನ್ನೂ ಸುತ್ತುವರಿದು ಹತ್ತಿಕೊಂಡಿತು. ದೈವಿಕ ಶಕ್ತಿ ರುಜುವಾತಾಯ್ತು. ಜನರು ಉದ್ರೇಕಕ್ಕೆ ಮಿತಿಯಿಲ್ಲದೆ ಕುಣಿದಾಡಿದರು. ಆದರೆ ಬಡಕಲು ಹುಡುಗಿ ಬೆಂಕಿಯ ತಾಪ ತಾಳಲಾರದೆ ಅರೆಸುಟ್ಟ ಮಡಿ ಪೀತಾಂಬರದೊಡನೆ ಚಿತೆಯಿಂದ ನೆಗೆದು ನದೀ ತಟಕ್ಕೆ ಧಾವಿಸಿ ಗಂಗಾ ಮಾತೆಗೆ ತನ್ನನ್ನು ಸಮರ್ಪಿಸಿಕೊಂಡಳು. ಜನರ ಕೋಲಾಹಲ, ತಮ್ಮ ನಿರೀಕ್ಷಿತ ಉದ್ದೇಶ ಸಂಪೂರ್ಣ ನೆರವೇರದಿದ್ದುದರಿಂದ ಪಾಂಡೇ ವಂಶಸ್ಥರ ಕ್ರೋಧ, ನದಿಗೆ ಹಾರಿದ ಹುಡುಗಿಯನ್ನು ಪಾರು ಮಾಡಲು ಪೊಲೀಸರ ಪ್ರಯತ್ನ. ಇಷ್ಟರಲ್ಲಿ ಪಾಂಡೇ ಧರ್ಮನಿಷ್ಠರು ಶವವನ್ನು ಎತ್ತಿ ಮುಳುಗುತ್ತಿರುವ ಹುಡುಗಿಯ ಮೇಲೆ ಎಸೆದು–ಅದನ್ನು ತಬ್ಬಿಕೊಂಡು ನದಿಯಲ್ಲಿ ಮುಳುಗುವಂತೆ ಗದರಿಸಿದರು. ಶವ ಅವಳ ಹಿಡಿತಕ್ಕೆ ಸಿಗದೆ ಮುಳುಗಿ ಹಸಿದ ಮೊಸಳೆಗಳ ಪಾಲಾಯ್ತು. ದುರದೃಷ್ಟ ಸಂಪಾತಿ ಸಮೀಪ ಮೊಸಳೆಗಳೂ ಸುಳಿಯಲಿಲ್ಲ. ಅವಳು ಮುಳುಗುವ ಸ್ಥಿತಿಯಲ್ಲಿರುವುದನ್ನು ಕಂಡು ಪೊಲೀಸರು ದೋಣಿ ನಡೆಯಿಸುತ್ತಾ ಸಮೀಪ ಹೋದರು. ಆದರೆ ನೆರೆದ ಜನರು ಪೊಲೀಸರನ್ನು ಗದರಿಸಿ ತಡೆಯಲು

ಮುಂದಾದರು. ಪರಿಸ್ಥಿತಿ ಅಷ್ಟು ವಿಷಮವಾಗಿದ್ದರೂ ಹೃದಯವಂತ ಪೋಲೀಸರು ಜನರು ಗದರಿಸುತ್ತಿದ್ದುದನ್ನು ಅವಗಣಿಸಿ ಅವಳನ್ನೆತ್ತಿ, ದಡಕ್ಕೆ ತಂದರು. ಸಮೀಪದ ಗುಡಿಯೊಂದರ ಎದುರಿದ್ದ ಮರದಡಿಯಲ್ಲಿ ಮಲಗಿಸಿದರು. ಮರಣಾಂತಿಕ ಸುಟ್ಟ ಗಾಯಗಳು, ನೀರ್ಯ್ಕುಡಿದು ಉಸಿರಾಡಲು ಸಾಧ್ಯವಾಗದ ಸ್ಥಿತಿ. ಅಷ್ಟು ಮಂದಿ ಪ್ರೇಕ್ಷಕರೆದುರು ಅರೆನಗ್ನತೆ. ಸುಟ್ಟಗಾಯಗಳ ಉರಿ ತಾಳಲಾರದೆ ಅಳುತ್ತಾ ನರಕುತ್ತಾ ಬರಿ ಮಣ್ಣಿನ ಮೇಲೆ ಮಲಗಿದಳು. ಇವಳ ಸ್ಥಿತಿಗೆ ಮರುಗಿ ಡಾಕ್ಟರ್ ಒಬ್ಬರನ್ನು ಕರೆದು ತಂದು ಉರಿ ಶಮನಗೊಳಿಸಲು ಇಂಜಕ್ಷನ್ ಕೊಡುವ ಪ್ರಯತ್ನವಾಯಿತು. ಆದರೆ ಮತಭ್ರಾಂತರು ಮತ್ತು ಮತಿ ಶೂನ್ಯರು ಡಾಕ್ಟರನ್ನು ಗದರಿಸಿ ತಳ್ಳಿ ಓಡಿಸಿದರು. ಇಷ್ಟರಲ್ಲಿ 'ಸತಿ' ಯ ನಿಷ್ಠೆಗೆ ಮನಸೋತ ಧಾರ್ಮಿಕ ಮನೋಭಾವದ ಜನರು ದಕ್ಷಿಣೆ ಹಣವನ್ನು ಅವಳ ಸುತ್ತಲೂ ಎಸೆದರು. ಪಾಂಡೆ ವಂಶಸ್ಥರು ಒಡನೆಯೇ ಚುರುಕಾಗಿ ಜತನದಿಂದ ಹೆಕ್ಕಿ ಸಂಗ್ರಹಿಸಿದರು. ಅವಳನ್ನು ಆಸ್ಪತ್ರೆಗೆ ಸೇರಿಸಲು ಪೋಲೀಸರು ಪ್ರಯತ್ನಿಸಿದಾಗ ಜನರಿಂದ ತೀವ್ರ ಅಡ್ಡಿ. ಈ ಸ್ಥಿತಿಯಲ್ಲಿ ಎರಡು ಹಗಲು, ಎರಡು ರಾತ್ರಿ ವಿಲಿವಿಲಿ ಒದ್ದಾಡುತ್ತಾ ಸಂಪಾತಿಯು ಮರದಡಿಯಲ್ಲಿ ಕಳೆದಳು. ನವೆಂಬರ್ ೨೪ ರಂದು ತನ್ನ ಹುದ್ದೆಯ ಕರ್ತವ್ಯ ನಿಮಿತ್ತ ದೂರದೂರಿಗೆ ಹೋಗಿದ್ದ ವಿಭಾಗಾಧಿಕಾರಿ ವಿಶೇಷ ಪೋಲೀಸ್ ಪಡೆಯೊಂದಿಗೆ ಅಲ್ಲಿಗೆ ಬಂದು ಅವಳನ್ನು ಜೈಲಿನ ಕೊಠಡಿಗೆ ಸಾಗಿಸಿದರು. ಮರುದಿನ ಅವಳು ಕೊನೆಯುಸಿರೆಳೆದಳು. ಅನಂತರ ಸತೀ ದೇವಿಯ ಪುಣ್ಯಸ್ಮರಣೆಯಲ್ಲಿ ಊರ ಜನರು ನದೀ ತೀರದಲ್ಲಿ ಒಂದು ಸಣ್ಣ ಗುಡಿ ನಿರ್ಮಿಸಿ, ನಂದಾದೀಪ ಉರಿಸಿ, ಪ್ರತಿದಿನವೂ ಪುಷ್ಪಾಲಂಕೃತಗೊಳಿಸಿ ಪೂಜೆ ಸಲ್ಲಿಸಿದರು. ಬಡತನದಲ್ಲೇ ಬೆಳೆದು, ತಂದೆತಾಯಂದಿರ ರಕ್ಷಣೆ ಇಲ್ಲದೆ, ಒಡಹುಟ್ಟಿದ ತಮ್ಮನಿದ್ದರೂ, ಭ್ರಾಂತನಾಗಿ, ವಿವಾಹವಾಗಿದ್ದರೂ ದಾಂಪತ್ಯ ಜೀವನ ನಡೆಸದೇ ಕೊನೆಗೆ ಮೈಯೆಲ್ಲಾ ಸುಟ್ಟ ಗಾಯಗಳಿಂದ ಮರದಡಿಯಲ್ಲಿ ಮತ್ತು ಜೈಲಿನಲ್ಲಿ ಶುಶ್ರೂಷೆ ಇಲ್ಲದೆ ಯಾತನೆ ಅನುಭವಿಸಿ ಮೃತಪಟ್ಟ ಮೇಲೆ– ಸತೀಪಟ್ಟವೇರಿ ಜನರ ಭಕ್ತಿ ಆರಾಧನೆಗೆ ಸತ್ಪಾತ್ರಳಾದಳು. ಜನರ ದೃಷ್ಟಿಯಲ್ಲಿ ಇತರ ಹೆಣ್ಣು ಮಕ್ಕಳಿಗೆ ಆದರ್ಶ ಸತಿಯಾದಳು.

ಈ ದಾವೆಯಲ್ಲಿ ಒಟ್ಟು ಹದಿನಾರು ಮಂದಿಯ ಮೇಲೆ ಪೋಲೀಸರು ಆರೋಪ ಪಟ್ಟಿ ಸಲ್ಲಿಸಿದ್ದರೂ. ಅಂದಿನ ದಿನಗಳಲ್ಲಿರುತ್ತಿದ್ದ ಜ್ಯೂರಿ ನ್ಯಾಯಾಲಯದಲ್ಲಿ ಎಲ್ಲರನ್ನೂ ನಿರ್ದೋಷಿಗಳೆಂಬ ತೀರ್ಪು ಬಂತು. ನ್ಯಾಯಾಧೀಶರು ಜ್ಯೂರಿಯವರ ತೀರ್ಪನ್ನು ಒಪ್ಪದೆ, ಸಂಪಾತಿ ಕೌರ್ ಕೊಲೆಗೆ ಅಥವಾ ಅವಳ ಆತ್ಮಹತ್ಯೆಗೆ ಪ್ರೇರೇಪಿಸಿದ್ದಾರೆ. ಒತ್ತಾಯಿಸಿದ್ದಾರೆ ಮತ್ತು ಸಹಕರಿಸಿದ್ದಾರೆಂಬ ಆರೋಪದ ಮೇಲೆ ಹತ್ತು ಮಂದಿಗೆ ತಕ್ಕ ಶಿಕ್ಷೆ ವಿಧಿಸಲು ಶಿಫಾರಸು ಮಾಡಿ ಕಡತವನ್ನು ಪಾಟ್ನಾದ ಉಚ್ಚ ನ್ಯಾಯಾಲಯಕ್ಕೆ ಕಳುಹಿಸಿದರು. ಅಲ್ಲಿ ಮುಖ್ಯ ನ್ಯಾಯಮೂರ್ತಿ ಕೋರ್ಟ್ನಿಟೆರ್ರೆಲ್ ಮತ್ತು ನ್ಯಾಯಮೂರ್ತಿ ಅದಾಮಿ ಎಂಬ ಇಬ್ಬರು ನ್ಯಾಯಾಧೀಶರೆದುರು

ಇತ್ಯರ್ಥಗೊಳ್ಳಲು ಬಂತು. ವಿದೇಶಿಯರಾದರೂ, ಭಾರತದ ಸಾಮಾಜಿಕ ಹಿನ್ನಲೆ ಅರಿತು, ಬಹಳ ಅನುಕಂಪದಿಂದ, ಸಾಕ್ಷ್ಯಗಳ ಹೇಳಿಕೆಗಳನ್ನು ಸೂಕ್ಷ್ಮವಾಗಿ ತುಲನೆ ಮಾಡಿ, ಪ್ರತಿ ಆರೋಪಿಯ ವಯಸ್ಸು, ವಿದ್ಯಾರ್ಹತೆ, ಪರಿಸ್ಥಿತಿಯ ಒತ್ತಡಗಳನ್ನು ಗ್ರಹಿಸಿ, ನ್ಯಾಯ ನಿಷ್ಠುರತೆಯ ತೀರ್ಪು ನೀಡಿದರು. ಸಂಪಾತಿಯ ಗಾಡಿ ಹೊಡೆದ ರಾಮಾವತರ್ ದುಷ್ಟರೊಡನೆ ಸಹಕರಿಸಿದ್ದರಿಂದ ಆವನಿಗೆ ಒಂದು ವರ್ಷದ ಸಶ್ರಮ ಸಜೆ, ಅವಳ ಸಂಗಾತಿ ಅವಿದ್ಯಾವಂತೆ, ಸುತ್ತಲಿನ ಮತಭ್ರಾಂತರ ಮಧ್ಯೆ ನಿರುಪಾಯಳಾಗಿ ಸಿಲುಕಿದ ಕುರುಡು ನಂಬಿಕೆಯ ಲಖಿಯೊಳಿಗೆ ಒಂದು ವರ್ಷದ ಸಶ್ರಮ ಸಜೆ; ಹದಿನೇಳರ ಹರೆಯದ ತಮ್ಮ ಮತ್ತು ಅವಳ ಗಂಡನ ತಮ್ಮ ವಿದ್ಯಾಧರ ಪಾಂಡೆ-ಇಬ್ಬರೂ ಅವಳ ಸಾವಿಗೆ ನೇರ ಕಾರಣರು; ಹಾಗಿದ್ದರೂ ಸತೀ-ಸಹಗಮನ ಅತ್ಯಪೂರ್ವವಾಗಿ ಲಭಿಸುವ ಧಾರ್ಮಿಕ ಪುಣ್ಯಕಾರ್ಯ, ಎಂದು ಪ್ರಾಮಾಣಿಕವಾಗಿ ನಂಬಿದ್ದ, ಸ್ವತಂತ್ರವಾಗಿ ವಿವೇಚಿಸಲು ಅಶಕ್ತರಾಗಿದ್ದು ಮತ್ತು ಪಾಂಡೆ ವಂಶಸ್ಥರ ಒತ್ತಡಕ್ಕೊಳಗಾದ ಭ್ರಾಂತರೆಂಬ ಕಾರಣಕ್ಕಾಗಿ ಅವರಿಗೆ ಐದು ವರ್ಷಗಳ ಸಜೆ; ಇತರ ಹಿರಿಯ "ಧರ್ಮಭೀರು" ಪಾಂಡೆ ಕುಟುಂಬದವರಿಗೆ ಹತ್ತು ವರ್ಷಗಳ ಸಶ್ರಮ ಸಜೆ ವಿಧಿಸಿದರು. ಮುರಲೀಧರ ಮತ್ತು ವಿದ್ಯಾಧರರನ್ನು ಸುತ್ತಲಿನ ಮಾತಿಗೆಟ್ಟ ಸಮಾಜದಿಂದ ಹೊರಗಿಟ್ಟು, ಸ್ವತಂತ್ರ ಚಿಂತನೆಗೆ ಮುಕ್ತಾವಕಾಶ ಕೊಟ್ಟು ತಾಮಸಿಕ ಪ್ರಕೃತಿಯನ್ನು ಕಳೆಯಲು ಅನುಕೂಲಿಸುವ ವಿದ್ಯೆ ನೀಡುವ ಉದ್ದೇಶದಿಂದ ಅವರಿಗೆ ಐದು ವರ್ಷಗಳ ಸಜೆ ನೀಡಲಾಗಿತ್ತು. ಇದೊಂದು ಚಾರಿತ್ರಿಕ ಹಾಗೂ ಎಪ್ಪತ್ತೊಂದು ವರ್ಷಗಳು ಸಂದರೂ ಇಂದಿಗೂ ಮಾರ್ಗದರ್ಶಿ ತೀರ್ಪು. ತೀರ್ಪಿನ ಕೊನೆಯ ಪಂಕ್ತಿಗಳು ಹೃದ್ಯ ಹಾಗೂ ಉದ್ವೇಗಪೂರ್ವವಾಗಿವೆ: "ಈ ತರದ ದುಷ್ಟರನ್ನು ಶಿಕ್ಷಿಸುವ ಸಲುವಾಗಿ; ಮುಗ್ಧ ಬಾಲಿಕೆಗೆ ನಮ್ಮಿಂದಾಗುವ ಪರಿಹಾರ ಸಲ್ಲಿಸುವ ಸಲುವಾಗಿ; ಮತ್ತು ವಿವೇಕಯುತವಾದ ಬುದ್ಧಿ ಹೇಳಿದರೂ ತಿದ್ದಿ ತಡೆಯಲು ಸಾಧ್ಯವಾಗದ ಭ್ರಾಂತರಿಗೆ, ಭಯದಿಂದಾದರೂ ಮುಂದೆ ತಿಳಿಯುವಂತೆ ಎಚ್ಚರಿಸುವ ಸಲುವಾಗಿ—ಈ ತೀರ್ಪು ನೀಡುತ್ತೇವೆ. ತಪ್ಪಿದವರಿಗೆ ದೈಹಿಕ ಶಿಕ್ಷೆ ವಿಧಿಸಲು ಮಾತ್ರ ನಾವು ಸಮರ್ಥರು. ಮರಣಾನಂತರ ಆತ್ಮವೆಂಬ ಸ್ಥಿತಿಯಲ್ಲಿ ನಾವಿರುವೆವೇ—ಇಲ್ಲವೇ—ಎಂಬುದರ ಅರಿವು ನಮಗಿಲ್ಲ. ಒಂದು ವೇಳೆ ಅಂಥ ಮರಣಾನಂತರ ಆತ್ಮಾವಸ್ಥೆ ಇರುವುದಾದರೆ-ನ್ಯಾಯ ನಿಷ್ಠೆ ಹಾಗೂ ದಯೆಯನ್ನು ನಮ್ಮ ಅಲ್ಪ ತಿಳುವಳಿಕೆಯಲ್ಲಿ ನಾವು ಅರಿತಿರುವಂತೆ, ದೇವರು ನ್ಯಾಯನಿಷ್ಠನೂ, ದಯಾಳುವೂ

ಆಗಿರುವುದಾದರೆ, ನಾವು ಈಗ ವಿಧಿಸಿರುವ ಶಿಕ್ಷಾವಧಿಯನ್ನು ಅನುಭವಿಸಿ ಉಳಿಯುವ ಈ ಮಂದಿ, ಮುಗ್ಧ ಬಾಲಿಕೆಯ ಆತ್ಮವಿರುವ ಗಂಗಾ ನದೀ ತಟದ ಪುಷ್ಪಾಲಂಕೃತ ಮಂದಿರದೆಡೆಗೆ ಪಶ್ಚಾತ್ತಾಪ ಪಡುತ್ತಾ, ನಮ್ರತೆಯಲ್ಲಿ ತೀರ್ಥಯಾತ್ರೆ ಮಾಡಲಿ; ಮಂದಿರದಲ್ಲಿ ಭಸ್ಮ ಧರಿಸಿ ಅವಳ ಆತ್ಮಕ್ಕೆ ಶಿರಬಾಗಿ ವಿನೀತತೆಯಲ್ಲಿ-ತಮ್ಮ ಆತ್ಮವನ್ನು ಚಿರಂತನ ನರಕ ಶಿಕ್ಷೆಗೆ ತಳ್ಳದಂತೆ ದೇವರು ಅನುಗ್ರಹಿಸುವಂತೆ-ಅವಳು ದೇವರಲ್ಲಿ ದಯಾಭಿಕ್ಷೆ ಕೇಳಬೇಕೆಂದು ಪ್ರಾರ್ಥಿಸಲಿ. ಇದು ನಮ್ಮ ಹಾರೈಕೆ.”

ಧರ್ಮವೇ ಜಯವೆಂಬುದಿದು ದಿವ್ಯ ಮಂತ್ರ
ಮರ್ಮವನು ಅರಿತು ಆಚರಿಸುವುದು ಯೋಗ್ಯ ತಂತ್ರ
ಕರ್ಮದಲಿ ಹೃದಯಕ್ಕೆ ಸಲ್ಲಲಿ ಪ್ರಾಧಾನ್ಯ
ಧರ್ಮ-ಕರ್ಮ ಸಂಯೋಗದಲಿ ನೀನಾಗುವೆ ಧನ್ಯ



ಕುರಿಯು ತೋಳವನ್ನು ನಂಬುವುದಕ್ಕಿಂತ, ತೋಳದ ಹತ್ತಿರ ಹೋಗದಂತೆ ಎಚ್ಚರವಾಗಿರುವುದೇ ಲೇಸು.

—ಗಾಂಧೀಜಿ

ನಿಮ್ಮ ಬದುಕನ್ನು ಸರಳವಾಗಿಸಿಕೊಳ್ಳಿ

ಡಿ. ವಿ. ಶಾಮಣ್ಣ
ನಂ. ೧೦೯, 'ಅರಭಿ' ೧ ನೇ ಮೇನ್
೪ ನೇ ಕ್ರಾಸ್, ಶ್ರೀರಾಂಪುರ, ೨ ನೇ ಹಂತ
ಮೈಸೂರು–೫೭೦೦೨೪

"ಕಾಲ ಕಳೆಯಲು ಏನೋ ಹವ್ಯಾಸ" ಎನ್ನುವವರು ಅರಿತಿರಬೇಕಾದ ಒಂದು ಜೀವನ ಸತ್ಯವಿದೆ. "ಕಾಲವನ್ನು ಕಳೆವವನು ತಾನೇ ಕಳೆದುಹೋಗುವನು, ಅದನ್ನು ಸದ್ವಿನಿಯೋಗಿಸುವವನು ಸದಾ ವರ್ತಮಾನದಲ್ಲಿ ಸುಖಿ ಆಗಿರುತ್ತಾನೆ."

ಎರಡು ವರ್ಷಗಳ ಹಿಂದೆ, ಕೇವಲ ದಿನ ನಿತ್ಯದ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಶಿರ್ಲಿ ಮಿಚೆಲ್ಸ್, ರಾತ್ರಿ ತಡವಾಗಿ ಮಲಗಿ ಬೆಳಿಗ್ಗೆ ಬೇಗ ಬೇಗ ಏಳಬೇಕಾಗುತ್ತಿತ್ತು. ಗಂಡ ಮತ್ತು ಇಬ್ಬರು ಮಕ್ಕಳ ಜೊತೆ ಇರುವ ನೇತ್ರ ತಂತ್ರಜ್ಞೆ ಮಿಚೆಲ್ಸ್‌ಗೆ ಅತ್ಯಂತ ಮುಖ್ಯ ಕೆಲಸಗಳನ್ನು ಮಾಡುವುದಕ್ಕೆ ಸಮಯವೇ ಸಿಕ್ಕುತ್ತಿರಲಿಲ್ಲ.

ಆಕೆ ಮತ್ತು ವಕೀಲನಾಗಿರುವ ಆಕೆಯ ಪತಿ ವಿಕ್ ತಮ್ಮ ಬದುಕನ್ನು ಸರಳವಾಗಿಸಿಕೊಳ್ಳಲು ಉಪಾಯಗಳನ್ನು ಹುಡುಕಲಾರಂಭಿಸಿದರು. "ಯಾವುದು ನಿಜವಾಗಿಯೂ ಮುಖ್ಯವೆಂಬುದನ್ನು ನಾವು ನಿರ್ಧರಿಸಬೇಕಾಯಿತು" ಎಂದು ಶಿರ್ಲಿ ಹೇಳುತ್ತಾಳೆ. ತಮ್ಮ ಮೂರು ವರ್ಷದ ರಯಾನ್ ಜೊತೆ ಆಟವಾಡುವುದಕ್ಕೆ, ಸರಿಯಾದ ಆಹಾರ ಸೇವಿಸುವುದಕ್ಕೆ, ವ್ಯಾಯಾಮಕ್ಕೆ, ಗೆಳೆಯರೊಡನೆ ಕಾಲ ಕಳೆಯುವುದಕ್ಕೆ-ಇವೆಲ್ಲಕ್ಕೂ ಹೆಚ್ಚು ಸಮಯ ಬೇಕೆಂದು ಅವರಿಗೆ ಗೊತ್ತಿತ್ತು.

ಆದ್ದರಿಂದ ಶಿರ್ಲಿ ಮತ್ತು ವಿಕ್ ದಂಪತಿಗಳು, ಕೊಳ್ಳುವಾಗ ಜಾಗರೂಕತೆಯಿಂದ ಅಗತ್ಯವೆನಿಸಿದ ವಸ್ತುಗಳನ್ನು ಮಾತ್ರ ಖರೀದಿಸುವುದು : ಓದುವುದು, ಅಡುಗೆ ಮಾಡುವುದು, ಪಾರ್ಕಿಗೆ ಹೋಗುವುದು ಮುಂತಾದ ದುಬಾರಿಯಲ್ಲದ ಹವ್ಯಾಸಗಳಲ್ಲಿ ತೊಡಗಿ

೧೯೯೮ರ ಡಿಸೆಂಬರ್ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾಗಿರುವ ಕ್ಯಾಥರೀನ್ ಇರ್ಕ್‌ರ "ಸಿಂಪ್ಲಿಫೈ ಯುವರ್-ಲೈಫ್" ಎಂಬ ಲೇಖನದ ಅನುವಾದ.

ಕೊಳ್ಳುವುದರೊಂದಿಗೆ ಆಡಂಬರವಿಲ್ಲದ ಸರಳ ಜೀವನವನ್ನು ಆರಿಸಿಕೊಂಡರು. ಶಿರ್ಲಿ ನೇತ್ರ ತಂತ್ರಜ್ಞೆಯ ಕೆಲಸವನ್ನು ಬಿಟ್ಟು ಬಿಡುವು ಸಿಕ್ಕಾಗ ಮನೆಯಿಂದಲೇ ಕೆಲಸಗಳನ್ನು ಮಾಡಲಾರಂಭಿಸಿದಳು. ತನ್ನ ವಿಸಿಟಿಂಗ್ ಕಾರ್ಡ್‌ನಲ್ಲಿ–'ನನ್ನಲ್ಲಿ ಸಮಯವನ್ನು ಖರೀದಿಸಬಹುದು–ನಿಮ್ಮ ಸೇವೆಗೆ ಸಿದ್ಧ' ಎಂದು ಮುದ್ರಿಸಿ, ಬಿಲ್‌ಗಳನ್ನು ಪಾವತಿ ಮಾಡುವುದು, ಸಮಾರಂಭಗಳ ವ್ಯವಸ್ಥೆ ಮಾಡಿಕೊಡುವುದು, ಪದಾರ್ಥಗಳನ್ನು ಖರೀದಿಸಿಕೊಡುವುದು, 'ಇಂಟರ್‌ನೆಟ್'ನಲ್ಲಿಸಂಶೋಧನೆಮಾಡುವುದು–ಹೀಗೆ ಗ್ರಾಹಕರು ಬಯಸಿದ ಹಲವಾರು ಕೆಲಸಗಳನ್ನು ಮಾಡಿಕೊಡತೊಡಗಿದಳು.

"ಈಗಲೂ ನಾನು ಕಷ್ಟಪಟ್ಟು ದುಡಿಯಬೇಕಾಗುತ್ತದೆ. ಆದರೆ ಒಂದು ಮುಖ್ಯ ವ್ಯತ್ಯಾಸ — ನನ್ನ ಸಮಯದ ಮೇಲೆ ನನಗೆ ಹತೋಟಿಯಿದೆ" ಎನ್ನುವ ಶಿರ್ಲಿ ಮುಂದುವರೆದು, "ನನ್ನ ಮಗನನ್ನು ಮೃಗಾಲಯಕ್ಕೆ ಕರೆದುಕೊಂಡು ಹೋಗಲು, ಅವನ ಜೊತೆ ಬ್ಯಾಸ್ಕೆಟ್ ಬಾಲ್ ಆಡಲು–ಇವೆಲ್ಲಕ್ಕೂ ಈಗ ನಾನು ಸಮಯವನ್ನು ಮೀಸಲಿಡಬಹುದು. ನೆರೆಹೊರೆಯವರನ್ನು ಪರಿಚಯಿಸಿಕೊಳ್ಳಲು ಸಿಗುವ ಅವಕಾಶ ಸಂತೋಷ ಕೊಡುವುದಲ್ಲದೆ, ಬದುಕನ್ನು ಮತ್ತೂ ಸರಳವಾಗಿಸುವಲ್ಲಿ ಸಹಾಯ ಮಾಡುತ್ತದೆ. ಈಗ ನಾವು ಅಗತ್ಯ ಬಿದ್ದಾಗ ಒಬ್ಬರಿನ್ನೊಬ್ಬರ ಮಕ್ಕಳನ್ನು ನೋಡಿಕೊಳ್ಳುತ್ತೇವೆ ಎನ್ನುತ್ತಾಳೆ.

ಮಿಚೆಲ್ಸ್ ದಂಪತಿಗಳಂತೆಯೇ, ಬದುಕಿನ ವೇಗವನ್ನು ಕಡಿಮೆ ಮಾಡಿಕೊಂಡು ಹೆಚ್ಚು ತೃಪ್ತಿಕರ ಜೀವನವನ್ನು ನಡೆಸಲು ಇಚ್ಛಿಸುವವರು ಹಲವಾರು ಮಂದಿ ಇದ್ದಾರೆ. ತಮಗೆ ಪ್ರಿಯವಾದದ್ದನ್ನು ಮಾಡಲು ಸಾಕಷ್ಟು ಸಮಯ ದೊರೆಯುತ್ತಿಲ್ಲವೆಂದು ನಮ್ಮಲ್ಲನೇಕರಿಗನ್ನಿಸುತ್ತದೆ. ಮನೆಯವರು ಮತ್ತು ಮಕ್ಕಳ ಜೊತೆ ನಾವು ಬಲು ಕಡಿಮೆ ಸಮಯ ಕಳೆಯುತ್ತೇವೆ.

ಹಾಗಾದರೆ ಎಲ್ಲ ಸಮಯವೂ ಎಲ್ಲಿಗೆ ಹೋಗುತ್ತದೆ? ನಮ್ಮಲ್ಲಿ ಹೆಚ್ಚಿನ ಮಂದಿಗೆ ಕೆಲಸ ಮತ್ತು ಕೆಲಸಕ್ಕೆ ಹೋಗಿ ಬರುವುದು ದಿನದಲ್ಲಿಯ ಪ್ರಧಾನ ಚಟುವಟಿಕೆಯಾಗಿರುತ್ತದೆ. ಜೊತೆಗೆ ಆಧುನಿಕ ಜೀವನದ ಆಕರ್ಷಣೀಯ ಭಕ್ಷ್ಯಗಳ ರಸದೌತಣ–ಕೈಬೀಸಿ ಕರೆಯುತ್ತಿರುವ ನೂರಾರು ಸಲಕರಣೆಗಳು, ಪರಿಶೀಲಿಸಲು ಅದೆಷ್ಟು ಸುದ್ದಿ ಸಮಾಚಾರ! 'ಲಿವಿಂಗ್ ದಿ ಸಿಂಪಲ್ ಲೈಫ್'ನ ಕರ್ತೃ ಇಲೇನ್ ಸೇಂಟ್ ಜೇಮ್ಸ್ ಹೇಳುವಂತೆ, "ಇವೆಲ್ಲವನ್ನೂ ಅನುಭವಿಸುವ ಯತ್ನದಲ್ಲಿ ನಾವು ನಮ್ಮ ಜೀವನವನ್ನೇ ಸವೆಸುತ್ತೇವೆ."

ಬದುಕನ್ನು ಸರಳವಾಗಿಸಿಕೊಳ್ಳುವುದೆಂದರೇನು? ಹಣ, ಸಮಯ ಮತ್ತು ಚೈತನ್ಯವನ್ನು ವ್ಯಯ ಮಾಡುವ ರೀತಿಗಳನ್ನು ಅರಿತುಕೊಂಡು, ಅವುಗಳ ವ್ಯರ್ಥವನ್ನು ತಡೆಗಟ್ಟಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವುದು. ಬದುಕಿನ ಹಣಗಾಟದ ಮೇಲೆ ಹತೋಟಿಯನ್ನು ಸಾಧಿಸಿ, ಸುಖ ಸಂತೋಷಕ್ಕೆ ಸಮಯವನ್ನು ಒದಗಿಸಿಕೊಳ್ಳಲು ತಜ್ಞರಿಂದ ಇಲ್ಲಿ ಹಲವಾರು ಸಲಹೆಗಳಿವೆ.

೧) ದಿನವನ್ನು ಸರಿಯಾಗಿ ಆರಂಭಿಸಿ

'ಆ ಸೂತ್ರ'ವನ್ನು ಪ್ರಯೋಗಿಸುವುದಕ್ಕೆ ಮುಂಚೆ, ಶಿಕ್ಷಕಿಯಾಗಿ ಕೆಲಸ ಮಾಡುತ್ತಿರುವ ಕ್ಲಾಡಿಯಾ ಬೋವ್‌ಗೆ ಪ್ರತಿ ಬೆಳಿಗ್ಗೆಯೂ ಒಂದು ಪರೀಕ್ಷೆಯೇ ಆಗಿತ್ತು. "ಮಕ್ಕಳು, ಗಂಡ ಮತ್ತು ನಾನು ಪ್ರತಿದಿನ ಬೆಳಿಗ್ಗೆ ೭.೪೫ ಗಂಟೆಗೆ ಸರಿಯಾಗಿ ಮನೆ ಬಿಡಬೇಕಾಗಿತ್ತು. ಮಕ್ಕಳ ಪುಸ್ತಕಗಳು ಸಿಕ್ಕುತ್ತಿರಲಿಲ್ಲ, ಹೋಮ್‌ವರ್ಕ್ ಆಗ ನೆನಪಿಗೆ ಬರುತ್ತಿತ್ತು. ನನ್ನ ಮಗ ಬೆಳಿಗ್ಗೆ ಏಳುವ ಸ್ವಭಾವದವನಲ್ಲ. ಅವನು ಮಂಪರಿನಲ್ಲಿದ್ದು, ಅವನ ಸಾಮರ್ಥ್ಯ ಅತ್ಯಂತ ಕಡಿಮೆ ಇರುತ್ತಿತ್ತು. ಹೀಗಾಗಿ ಮನೆ ಬಿಡುವ ವೇಳೆಗೆ ನಾವೆಲ್ಲರೂ ಕೆಟ್ಟ ಮನಃಸ್ಥಿತಿಯಲ್ಲಿರುತ್ತಿದ್ದೆವು. ಈ ನಮ್ಮ ಅಭ್ಯಾಸಗಳನ್ನು ನಾವು ಬದಲಿಸಲೇ ಬೇಕಿತ್ತು."

ಕ್ಲಾಡಿಯಾಳ 'ಆ ಸೂತ್ರ' ಯಾವುದು? ಮಾರನೆಯ ದಿನಕ್ಕೆ ಬೇಕಾಗುವ ತಯಾರಿಯನ್ನು ಆದಷ್ಟೂ ಹಿಂದಿನ ದಿನವೇ ಮಾಡಿಕೊಳ್ಳಿ. ಉದಾಹರಣೆಗೆ, ಮಾರನೆಯ ದಿನ ಯಾವ ಬಟ್ಟೆಯನ್ನು ತೊಡಬೇಕೆಂಬುದನ್ನು ನಿರ್ಧರಿಸಿ ಇಂದೇ ತೆಗೆದಿಡಿ. ಬಟ್ಟೆ ಇಸ್ತ್ರಿ ಆಗಿದೆಯೆ, ಗುಂಡಿಗಳು ಇವೆಯೆ—ಇವೆಲ್ಲವನ್ನೂ ನೋಡಿಕೊಳ್ಳಿ. ತಿಂಡಿಗೆ ತಟ್ಟೆ ಲೋಟಗಳನ್ನು ಮಕ್ಕಳು ಅಣಿಮಾಡಬಹುದು.

"ಸ್ಕೂಲಿಗೆ ತೆಗೆದುಕೊಂಡು ಹೋಗಬೇಕಾದ ಸಾಮಾನುಗಳ ಪಟ್ಟಿಮಾಡಿ ಮಕ್ಕಳಿಗೆ ಕೊಡಿ. ಹೋಮ್‌ವರ್ಕ್, ಪುಸ್ತಕಗಳು, ಪೆನ್ಸಿಲ್‌ಗಳು, ಕಾಂಪಾಸ್ ಪೆಟ್ಟಿಗೆ ಇವೆಲ್ಲವನ್ನೂ ಮಲಗುವುದಕ್ಕೆ ಮುಂಚೆ ಒಮ್ಮೆ ನೋಡಿಕೊಳ್ಳುವುದಕ್ಕೆ ಮಕ್ಕಳಿಗೆ ಹೇಳಿಕೊಡಿ" ಎಂದು ಸಂಘಟನಾ ಚತುರೆ ಲ್ಯಾನ್ ಗ್ರಾವ್‌ಬೆಲ್ ಸಲಹೆ ಮಾಡುತ್ತಾರೆ.

ಒಗೆಯುವುದಕ್ಕೆ ಕೊಡಬೇಕಾದ ಬಟ್ಟೆಗಳು, ಎಸೆಯಬೇಕಾದ ವಸ್ತುಗಳು ಮತ್ತು ಹೊರಗೆ ತೆಗೆದುಕೊಂಡು ಹೋಗಬೇಕಾದ ಇತರ ಪದಾರ್ಥಗಳನ್ನು ಬಾಗಿಲ ಹತ್ತಿರ ಇಡಿ. ಬೀಗದ ಕೈಗಳನ್ನು ಯಾವಾಗಲೂ ಒಂದೇ ಜಾಗದಲ್ಲಿ ಇಡಿ. ಒಬ್ಬ ಸಾಮಾನ್ಯ ವ್ಯಕ್ತಿಗೆ ಕಳೆದುಹೋದ ಬೀಗದಕೈಗಳನ್ನು ಹುಡುಕುವುದರಲ್ಲಿ ವರ್ಷಕ್ಕೆ ೧೬ ಗಂಟೆಗಳಷ್ಟು ಸಮಯ ವ್ಯರ್ಥವಾಗುತ್ತದೆಂದು ಅಧ್ಯಯನಗಳು ಪತ್ತೆಮಾಡಿವೆ.

೨) ಮನೆಯಲ್ಲಿಯ ವಸ್ತುಗಳ ರಾಶಿಯನ್ನು ಕರಗಿಸಿ

"ನೀವು ಕೊಳ್ಳುವ ಪ್ರತಿಯೊಂದು ವಸ್ತುವಿಗೂ ಪಾಲನೆ ಬೇಕು. ಮನೆಗೆ ತರುವ ಪ್ರತಿಯೊಂದು ಕುರ್ಚಿ, ಪುಸ್ತಕ, ಬಟ್ಟೆ, ಸೈಕಲ್, ದೀಪವನ್ನು ಒರೆಸಬೇಕು, ಸರಿಯಾಗಿ ಶೇಖರಿಸಿಡಬೇಕು, ರಕ್ಷಿಸಬೇಕು, ರಿಪೇರಿ ಮಾಡಬೇಕು....ಅನಾವಶ್ಯಕ ವಸ್ತುಗಳಿಂದ ಬಿಡುಗಡೆ ಹೊಂದುವುದರಿಂದ, ಅವುಗಳ ಪಾಲನೆಗೆ ವ್ಯರ್ಥವಾಗುತ್ತಿದ್ದ ಅಮೂಲ್ಯ ಸಮಯ ನಮಗೆ ಸಿಕ್ಕುತ್ತದೆ" ಎಂದು 'ಕ್ಲಟರ್ಸ್ ಲಾಸ್ಟ್ ಸ್ಟ್ಯಾಂಡ್'ನ ಕರ್ತೃ ಡಾನ್ ಆಸ್‌ಲೆಟ್ ಹೇಳುತ್ತಾರೆ.

ಹರಿದ ಮುರಿದ ಎಲ್ಲ ವಸ್ತುಗಳನ್ನೂ ಸಂಗ್ರಹಿಸಿಟ್ಟುಕೊಳ್ಳಲಿಚ್ಛಿಸುವ ನಿಮ್ಮ ಮನಸ್ಸು, 'ಇದು ಮುಂದೆ ಬೇಕಾದೀತು, ಎಸೆಯಬೇಡ' ಎಂದು ಕೂಗಿ ಹೇಳಿದಾಗ,

ನಿಮಗೆ ನೀವೇ ಹೀಗೆ ಹೇಳಿಕೊಳ್ಳಿ: "ಈ ಮುರಿದ ಕೊಡೆ ನನಗೆ ಖಂಡಿತಾ ಬೇಡ. ಬೇಕಾದರೆ ಹೊಸದನ್ನೆ ಕೊಂಡರಾಯಿತು. ಹೊಸದು ಅಷ್ಟೇನೂ ದುಬಾರಿಯಲ್ಲ" ಅಥವಾ "ಈ ತುಂಡು ಬಟ್ಟೆ ಎಂದಾದರೂ ಉಪಯೋಗಕ್ಕೆ ಬರಬಹುದು. ಆದರೆ ಎಂದಾದರೂ ಉಪಯೋಗಕ್ಕೆ ಬರಬಹುದಾದ ಎಲ್ಲ ಪದಾರ್ಥಗಳನ್ನೂ ಉಳಿಸಿಕೊಳ್ಳುತ್ತ ಹೋದರೆ, ನಾನು ಒಂದು ಉಗ್ರಾಣವನ್ನೇ ಬಾಡಿಗೆಗೆ ತೆಗೆದುಕೊಳ್ಳಬೇಕಾದೀತು" ಎಂದು ಮನಃಶಾಸ್ತ್ರಜ್ಞ ರ್‍ಯಾಂಡಿ ಫ್ರಾಸ್ಟ್ ಹೇಳುತ್ತಾರೆ.

ಒಂದೇ ಒಂದು ಸಣ್ಣ ಪದಾರ್ಥವನ್ನೂ ಎಸೆಯಲಾಗದೆ, ಅನುಪಯುಕ್ತ ವಸ್ತುಗಳ ಮುರುಕಲುಗುಪ್ಪೆಯಲ್ಲಿ ಮುಳುಗಿರುವವರಿಗೆ, ಅವುಗಳ ವಿಸರ್ಜನೆಯನ್ನು ಚಿಕ್ಕದಾಗಿ ಆರಂಭಿಸಿ–ಎಂದು 'ಕ್ಲಟರ್ ಕಂಟ್ರೋಲ್' ಪುಸ್ತಕದ ಕರ್ತೃ ಜೆಫ್ ಕ್ಯಾಂಪ್‌ಬೆಲ್ ಸಲಹೆ ಮಾಡುತ್ತಾರೆ. ಒಂದು ಕಪಾಟು, ಒಂದು ಒಡು–ಹೀಗೆ ಒಂದೊಂದನ್ನೇ ಚೊಕ್ಕಟ ಮಾಡಲು ಅನುವಾಗಿ. ಏನಾದರೂ ಮುರಿದಿದ್ದರೆ, ಸರಿಮಾಡುವುದಕ್ಕಾದರೆ ಸರಿಮಾಡಿ, ಇಲ್ಲ ಎಸೆದುಬಿಡಿ. ಯಾವುದಾದರೂ ವಸ್ತು ಹೊಂದಿಕೊಳ್ಳದಿದ್ದರೆ, ಬದಲಾಯಿಸಿ ಅಥವಾ ಯಾರಿಗಾದರೂ ಕೊಟ್ಟುಬಿಡಿ.

ಪದಾರ್ಥಗಳ ಗುಡ್ಡೆ ಬೆಳೆಯುವುದನ್ನು ಒಂದೇ ಒಂದು ಸಣ್ಣ ಅಭ್ಯಾಸದಿಂದ ತಡೆಯಬಹುದು—'ಸದ್ಯಕ್ಕೆ ಇದು ಇಲ್ಲೇ ಇರಲಿ, ಆಮೇಲೆ ತೆಗೆದಿಟ್ಟರಾಯಿತು' ಎಂದು ಯಾವ ವಸ್ತುವನ್ನೂ ಬಿಡಬೇಡಿ. ಕುರ್ಚಿಗಳ ಮೇಲೆ ಬಟ್ಟೆಗಳನ್ನಾಗಲೀ, ಬಚ್ಚಲಿನಲ್ಲಿ ಲೋಟಗಳನ್ನಾಗಲೀ ಆಮೇಲೆ ತೆಗೆದಿಟ್ಟರಾಯಿತು ಎಂದು ಬಿಟ್ಟಲ್ಲಿ, ಪ್ರತಿಯೊಂದು ವಸ್ತುವನ್ನೂ ಎರಡೆರಡು ಬಾರಿ ತೆಗೆದಿಡಬೇಕಾದೀತು.

೩) 'ಇಲ್ಲ'–ಎಂದು ನಯವಾಗಿ ಹೇಳಿ

ಹತ್ತು ವರ್ಷದ ಸಾರಾ ಮತ್ತು ಹನ್ನೆರಡು ವರ್ಷದ ಎಲಿಜಬೆತ್‌ರ ತಾಯಿ ಲಿನ್ ಪೆಟಿಟ್ ಕೆಲಸಕ್ಕೆ ಹೋಗದೆ ಮನೆಯಲ್ಲಿಯೇ ಇರುತ್ತಿದ್ದಾಗ, ಭಾನುವಾರದ ಶಾಲೆಯಲ್ಲಿ ಪಾಠ ಹೇಳಿಕೊಡುತ್ತಿದ್ದಳು. ಸಹಕಾರ ಸಂಘಗಳ ಅಂಗಡಿಗಳನ್ನು ನಡೆಸುವುದಕ್ಕೆ ಸಹಾಯ ಮಾಡುತ್ತಿದ್ದಳು. ಯಾವ ಸ್ಥಳೀಯ ಸಮಿತಿಯ ನಾಯಕತ್ವವನ್ನು ಬೇಕಾದರೂ ವಹಿಸುತ್ತಿದ್ದಳು ಪುಷ್ಪವಿನ್ಯಾಸಗಾರ್ತಿಯಾದ ಪೆಟಿಟ್, ಕೆಲಸಕ್ಕೆ ಹಿಂದಿರುಗಿದ ನಂತರವೂ ಇವೆಲ್ಲವನ್ನೂ ಮಾಡಲು ಪ್ರಯತ್ನಪಡುತ್ತಿದ್ದಳು.

ಎಲ್ಲವನ್ನೂ ಮಾಡುವುದು ಅಸಾಧ್ಯವೆನಿಸಿದಾಗ, ಅತ್ಯಂತ ಆತಂಕದಿಂದ ನರಳಿದಳು. ಆದ್ಯತೆಗೆ ಅನುಸಾರವಾಗಿ ಸ್ವಯಂಸೇವೆಯನ್ನು ಬಲವಂತವಾಗಿ ಕಡಿಮೆ ಮಾಡಿಕೊಂಡಳು. ಈಗ ಲಿನ್, ಕೇವಲ ಸ್ಥಳೀಯ ಸ್ಕೌಟ್ ಸಂಸ್ಥೆ ಮತ್ತು ಪೇರೆಂಟ್–ಟೀಚರ್ಸ್ ಅಸೋಸಿಯೇಷನ್‌ಗಳಲ್ಲಿ ಸಕ್ರಿಯ ಪಾತ್ರವಹಿಸುತ್ತಾಳೆ. ಕುಟುಂಬದವರೊಡನೆ ಕಲೆತು ಊಟ ಮಾಡಲು, ಮಕ್ಕಳ ಹೋಂವರ್ಕ್‌ನಲ್ಲಿ ಸಹಾಯ ಮಾಡಲು ಇವೆಲ್ಲಕ್ಕೂ 'ಈಗ ಲಿನ್‌ಗೇ ಸಮಯವಿದೆ. "ಇದರಿಂದ ನನ್ನ ಪತಿಯನ್ನು ಮತ್ತೊಮ್ಮೆ ಅರಿಯಲು ಅವ

ಕಾಶವಾಗಿ, ಅತ್ಯಂತ ಖುಷಿ ಸಿಕ್ಕಿದೆ"ಎಂದು ಲಿನ್ ಹೇಳುತ್ತಾಳೆ.

" 'ಇಲ್ಲ' ಎಂಬುದು ವಾರದಲ್ಲಿ ಹಲವಾರು ಗಂಟೆಗಳಷ್ಟು ಸಮಯವನ್ನು ಬಿಡುಗಡೆ ಮಾಡಬಲ್ಲ ಎರಡಕ್ಷರದ ಪದ" ಎಂದು ಇಲೇನ್ ಸೇಂಟ್ ಜೇಮ್ಸ್ ಹೇಳುತ್ತಾರೆ. 'ಇಲ್ಲ' ಎಂಬುದನ್ನು ನಯವಾಗಿ ಹೇಳಿ. ಆದರೆ ಖಚಿತವಾಗಿ ಹೇಳಿ. 'ನನ್ನಲ್ಲಿ ಅಷ್ಟು ಸಮಯವಿಲ್ಲ' ಎಂಬ ಸಂಕ್ಷಿಪ್ತ ವಿವರಣೆಯನ್ನು ಮಾತ್ರ ನೀಡಿ. ಇಲ್ಲದ ಸಬೂಬುಗಳನ್ನು ಕೊಡಲು ಪ್ರಯತ್ನಿಸಬೇಡಿ. ಸಬೂಬಿಗೆ ಪರಿಹಾರವನ್ನು ನೀಡಿ, ನಿಮ್ಮನ್ನು ಬಲವಂತವಾಗಿ ಕೆಲಸದಲ್ಲಿ ಸಿಕ್ಕಿಹಾಕಿಸಿಕೊಂಡಾರು !

೪) ಪುಡಿಗಾಸನ್ನು ಉಳಿಸಲು ಗಂಟೆಗಟ್ಟಲೆ ಸಮಯವನ್ನು ವ್ಯರ್ಥ ಮಾಡಬೇಡಿ

"ಹಣಕಾಸು ವೆಚ್ಚದ ಮೇಲೆ ನಿಗಾ ಇಡಲು ನಾವೆಲ್ಲರೂ ಕಲಿತಿರುತ್ತೇವೆ. ಆದರೆ ಸಮಯಕ್ಕೆ ಬೆಲೆ ಕೊಡುವುದನ್ನು ಕಲಿತಿರುವುದಿಲ್ಲ" ಎಂದು 'ಎ ವುಮನ್ಸ್ ಗೈಡ್ ಟು ಎ ಸಿಂಪ್ಲರ್ ಲೈಫ್'ನ ಕರ್ತೃ ಆ್ಯಂಡ್ರಿಯ ವಾನ್ ಸ್ಟೀನ್‌ಹಾಸ್ ಹೇಳುತ್ತಾರೆ. ಮುಂದುವರೆದು, "ಇದರಿಂದಾಗಿ, ಸ್ವಲ್ಪ ಹಣ ಉಳಿಸುವುದಕ್ಕೋಸ್ಕರ ಪುನಃ ದೊರೆಯದ, ಅಮೂಲ್ಯವಾದ ಸಮಯವನ್ನು ಎಷ್ಟು ವ್ಯರ್ಥ ಮಾಡುತ್ತೇವೆಂದು ನಾವು ಯೋಚಿಸಿಯೂ ಇರುವುದಿಲ್ಲ" ಎನ್ನುತ್ತಾರೆ. ಅಂಗಡಿಯಿಂದಂಗಡಿಗೆ ಅಲೆಯುವುದು ಎಷ್ಟು ಉಚಿತ? ಕೇವಲ ಸ್ವಲ್ಪ ಹಣ ಹೆಚ್ಚಿಗೆ ಕೊಟ್ಟರೆ ಮನೆಯ ಬಾಗಿಲಿಗೇ ಬೇಕಾದ ಸಾಮಾನುಗಳು ಬರುವಾಗ, ಅಂಗಡಿಗಳನ್ನು ಸುತ್ತಲು ಸಮಯ ವ್ಯರ್ಥ ಮಾಡಬೇಕೆ ?

'ಇದು ದುಬಾರಿ, ನಮಗೆಟಕುವುದಿಲ್ಲ' ಎನ್ನುವ ಮೊದಲು ಮತ್ತೊಮ್ಮೆ ಯೋಚಿಸುವುದು ಉಚಿತ.

೫) ನಿಮ್ಮ ಮಕ್ಕಳಿಗೆ ಮನೆಗೆಲಸದಲ್ಲಿ ಸಹಾಯ ಮಾಡುವಂತೆ ಉತ್ತೇಜನ ನೀಡಿ

'ಯು ಕ್ಯಾನ್ ಫೈಂಡ್ ಮೋರ್ ಟೈಂ ಫಾರ್ ಯುವರ್‌ಸೆಲ್ಫ್ ಎವ್ರಿ ಡೇ'ನ ಕರ್ತೃ ಸ್ಟೀಫನ್ ಕಲ್ಪ್ ಒಬ್ಬ ಉತ್ಪಾದನಾ ಸಲಹೆಗಾರ. ಆಕೆಯ ಘನವಾದ ನಿಯಮ: ಹಸುಳೆಗಳನ್ನು ಬಿಟ್ಟು ಇನ್ನಾರಿಗೂ ಮನೆಗೆಲಸದಲ್ಲಿ ವಿನಾಯಿತಿ ಇಲ್ಲ.

ಮೂರು–ನಾಲ್ಕು ವರ್ಷದ ಮಕ್ಕಳು ನಾಯಿಗೆ ಆಹಾರ ಇಡಬಹುದು. ಮಗುವಿನ ಬಟ್ಟೆಗಳನ್ನು ತಂದುಕೊಡಬಹುದು, ಐದು–ಆರು ವರ್ಷದ ಮಕ್ಕಳು ತಿಂಡಿಗೆ ಅಣಿ ಮಾಡಬಹುದು. ಹಾಸಿಗೆ ಹಾಸಬಹುದು. ಎಂಟರಿಂದ ಹನ್ನೆರಡು ವರ್ಷದ ಮಕ್ಕಳು ಗುಡಿಸಿ – ಸಾರಿಸಿ – ಕಸವನ್ನು ಎಸೆಯಬಹುದು.

ಮಕ್ಕಳು ಏನು ಮಾಡಬೇಕೆಂಬುದನ್ನು ಅವರಿಗೆ ಮೊದಲೇ ತಿಳಿಸಿ. ಕೆಲಸವನ್ನು ಸಾಧ್ಯವಾದಷ್ಟೂ ಹಂಚಿ. ಇದರಿಂದ ಮಕ್ಕಳು 'ಈ ಕೆಲಸ ನನ್ನದಲ್ಲ' ಎಂದು ಹೇಳುವುದನ್ನು ತಪ್ಪಿಸಬಹುದು.

ಮಕ್ಕಳಿಂದ ಮೊದಮೊದಲು ತುಂಬಾ ನಿರೀಕ್ಷಿಸಬೇಡಿ–ಸರಿಯಾಗಿ ಸುತ್ತಿರದ ಹಾಸಿಗೆ ಸುತ್ತದೇ ಇರುವ ಹಾಸಿಗೆಗಿಂತ

ವಾಸಿ. ಆದರೆ ಹಾಸಿಗೆಯನ್ನು ತೀರಾ ಕೆಟ್ಟದಾಗಿ ಸುತ್ತಿದ್ದರೆ ಅದು ಕೆಲಸದಿಂದ ತಪ್ಪಿಸಿಕೊಳ್ಳುವ ತಂತ್ರವಿರಬಹುದು. ಅಂತಹ ಸಮಯದಲ್ಲಿ ನೀವೇ ನಿಂತು ಕೆಲಸ ಮಾಡಿಸಿ. ಇಲ್ಲದಿದ್ದರೆ ಇದೇ ತಂತ್ರವನ್ನು ಉಪಯೋಗಿಸಿ ಮಕ್ಕಳು ಬೇರೆ ಕೆಲಸಗಳಿಂದಲೂ ತಪ್ಪಿಸಿಕೊಳ್ಳಬಹುದು–ಎಂದು ಕಲ್ಪ್ ಹೇಳುತ್ತಾರೆ.

೬) ಟಿ. ವಿ. ಯನ್ನು ಬಂದು ಮಾಡಿ

ನಮ್ಮಲ್ಲಿ ಹಲವಾರು ಮಂದಿಗೆ ಟೆಲಿವಿಷನ್ ವೀಕ್ಷಿಸುವುದು ಹೊತ್ತು ಕಳೆಯುವ ವ್ಯಾಪಕವಾದ ಚಟುವಟಿಕೆಯಾಗಿರುತ್ತದೆ. "ಆದರೂ ದೂರದರ್ಶನದ ವೀಕ್ಷಣೆ ಸಂತೋಷ ತರುವ ಅಥವಾ ಪ್ರಮುಖವಾದ ಹವ್ಯಾಸವೆಂದು ಹೆಚ್ಚಿನ ಮಂದಿ ಪರಿಗಣಿಸುವುದಿಲ್ಲ" ಎಂದು ಮೇರಿಲ್ಯಾಂಡ್ ವಿಶ್ವವಿದ್ಯಾಲಯದ ಜಾನ್ ಪಿ. ರಾಬಿನ್‌ಸನ್ ಹೇಳುತ್ತಾರೆ. "ಮೂರ್ಖರ ಪೆಟ್ಟಿಗೆ ಮುಂದೆ ಅರೆ ಸಮ್ಮೋಹಿತರಾಗಿ ಕಳೆಯುವ ಸಮಯದಲ್ಲಿ ಮೂರನೆಯ ಒಂದು ಭಾಗದಷ್ಟನ್ನು ಕಡಿಮೆ ಮಾಡಿದರೂ ಹಲವಾರು ಜನರ ಬದುಕು ಸರಳವಾಗುತ್ತದೆ."

ಕುಟುಂಬಗಳು ತಮ್ಮ ಎಲ್ಲ ಕಾರ್ಯಕಲಾಪಗಳ ಒಂದು ಪಟ್ಟಿಯನ್ನು ಮೊದಲು ಮಾಡಿಕೊಳ್ಳಲಿ. ಅನಂತರ ದೂರದರ್ಶನದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ನೋಡಬೇಕೆಂಬುದನ್ನು ತೀರ್ಮಾನಿಸಿ, ಸಾಧ್ಯವಾದರೆ ಅವನ್ನು ಮುದ್ರಿಸಿಕೊಂಡು ಸಮಯವಿದ್ದಾಗ ವೀಕ್ಷಿಸಲಿ–ಎಂದು ರಾಬಿನ್‌ಸನ್ ಮತ್ತು ಇತರ ತಜ್ಞರು ಸಲಹೆ ಮಾಡುತ್ತಾರೆ. ಹಲವು ನಿಶ್ಚಿತ ಸಮಯಗಳಲ್ಲಿ–ಊಟ ಮಾಡುವಾಗ, ಭಾನುವಾರದ ಮಧ್ಯಾಹ್ನಗಳಲ್ಲಿ – ಟಿ. ವಿ. ಯನ್ನು ಸಂಪೂರ್ಣವಾಗಿ ಬಂದು ಮಾಡಿ.

ಹೀಗೆಲ್ಲ ಸರಳೀಕರಣದಿಂದ ಏನು ಲಾಭ? ನಿಮಗತ್ಯಂತ ಪ್ರಿಯವಾದದ್ದನ್ನು ಮಾಡುವುದಕ್ಕೆ–ಮಕ್ಕಳ ಜೊತೆ ಆಟ ಆಡುವುದೇ ಆಗಲಿ, ತೋಟಗಾರಿಕೆ ಮಾಡುವುದೇ ಆಗಲಿ, ಪ್ರವಾಸ ಮಾಡುವುದೇ ಆಗಲಿ–ಬಿಡು ಸಮಯ ಸಿಕ್ಕುತ್ತದೆ. ಇದಕ್ಕಿಂತ ಸರಳವಾದದ್ದು ಮತ್ತಾವುದೂ ಇರಲಾರದು.

ಕಳಬೇಡ, ಕೊಲಬೇಡ, ಹುಸಿಯನುಡಿಯಲು ಬೇಡ
ಮುನಿಯ ಬೇಡ. ಅನ್ಯರಿಗೆ ಅಸಹ್ಯ ಪಡಬೇಡ.
ತನ್ನ ಬಣ್ಣಿಸಬೇಡ. ಇದಿರು ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ ; ಇದೇ ಬಹಿರಂಗ ಶುದ್ಧಿ

—ಬಸವಣ್ಣ

ಬೆಲ್ಲ ಕಪ್ಪೆಂದು ಬೇಸರಗೊಳ್ಳಬೇಡಿ

ಎ. ಪಿ. ಚಂದ್ರಶೇಖರ
ಕಳಲವಾಡಿ ಗ್ರಾಮ, ಅಂಚೆ ಉದ್ಬೂರು
ಮೈಸೂರು–೫೭೦ ೦೦೮

ನಾವು ವೈವಿಧ್ಯಮಯ ಬಣ್ಣಗಳ ವೇಷಭೂಷಣಗಳನ್ನು ತೊಡುತ್ತೇವೆ. ಕೆಲವೊಮ್ಮೆ ಯಾಕೆ ತೊಡುತ್ತೇವೆಂದು ತಿಳಿಯದೆಯೂ ತೊಡುತ್ತೇವೆ. ಕೊರೆವ ಚಳಿಯಲ್ಲೂ ಮೈಕಾಣುವಂತೆ ಬಟ್ಟೆ ಇಕ್ಕುವ ದುರ್ಬಲೆಯರಿದ್ದಾರೆ. ಉರಿವ ಸೆಖೆಯಲ್ಲೂ ಕಂಠಶಾಪೀನ ಧರಿಸುವ ಅಂಧಾನುಕರಣಿಗಳೂ ಇದ್ದಾರೆ.

ನಾವು ಕಾಡಾಡಿಗಳಲ್ಲ. ನಮ್ಮ ಜೀವನಕ್ಕೊಂದು ಉದ್ದೇಶವಿದೆ. ನಮ್ಮ ಜೀವನಕ್ಕೆ ಒಂದು ಮನೆಯ ಆವಶ್ಯಕತೆ ಇದೆ ಅಥವಾ ನಮ್ಮ ಜೀವನದ ಉದ್ದೇಶವೇ ಸ್ವಂತ ಮನೆ ಹೊಂದುವುದಾಗಿದೆ. ಮನ ದೊಡ್ಡದು ಮಾಡುವ ವಿವೇಕ ಸಶಿಸುತ್ತಿರುವಂತೆ, ದೊಡ್ಡ ದೊಡ್ಡ ಮನೆಗಳನ್ನು ಎತ್ತರೆತ್ತರಕ್ಕೆ ಕಟ್ಟುವ ಸಾಮರ್ಥ್ಯ ಸಂಚಯವಾಗುತ್ತಿದೆ. ವಿವಿಧ ರೂಪ, ಬಣ್ಣ, ಗಾತ್ರಗಳ ಮನೆಗಳನ್ನು ನಾವಿಂದು ಕಟ್ಟುತ್ತಿದ್ದೇವೆ.

ಸಂಸಾರ–ಜೀವನ,ಎಂದರೆ ಮನೆಯೊಳಗೆ ಸಾಕಷ್ಟು ವಸ್ತುಗಳು, ಸಲಕರಣೆಗಳು, ಸವಲತ್ತುಗಳು ಬೇಕಾಗುತ್ತವೆ, ನಿಜ, ಬೇಕಾಗುತ್ತವೆ, ಹಲ್ಲುಜ್ಜಲು ಬ್ರಷ್, ಸ್ನಾನದ ಮನೆಗೆ ಕಡಾಯಿ, ಅಡುಗೆಗೆ ಪಾತ್ರೆಗಳು, ಕೂರಲು ಕುರ್ಚಿ, ಗುಡಿಸಲು ಕಸಬರಿಕೆ, ನೀರಿಗಾಗಿ ನಲ್ಲಿ, ಬೆಳಕಿಗಾಗಿ ಬಲ್ಬು ಹೀಗೆ. ಇವುಗಳಿಗೆಲ್ಲಾ ಒಂದೊಂದು ಉದ್ದೇಶವಿರುತ್ತದೆ.

ಆದರೆ ಯಾವುದೇ ಉದ್ದೇಶವಿಲ್ಲದ ಒಂದು ವ್ಯವಸ್ಥೆ ಇಂದಿನ ಮನೆಗಳಲ್ಲಿ ಇರುತ್ತದೆ. ಅಲ್ಲಿ ಯಾವುದೇ ಉಪಯೋಗಕ್ಕಿಲ್ಲದ ವಸ್ತುಗಳನ್ನು ತುಂಬಿರುತ್ತಾರೆ. ತಪ್ಪಾಯಿತು—ಅತ್ಯಂತ ಆಸಕ್ತಿಯಿಂದ ಜೋಡಿಸಿರುತ್ತಾರೆ. ಅದೇ ಪ್ರದರ್ಶನದ ಗೂಡು ಇಲ್ಲಿ ಬಹಳ ಸುಂದರವಾದ, ಆಕರ್ಷಕವಾದ, ವಿವಿಧ ರೂಪ, ಬಣ್ಣ, ಗಾತ್ರಗಳ ವಸ್ತುಗಳನ್ನು ಪ್ರದರ್ಶನಕ್ಕೆ ಇಟ್ಟಿರುತ್ತಾರೆ. ಇದು ಕೇವಲ ನೋಡುವುದಕ್ಕೆ, ಭಾರೀ ಭಾರೀ ಬೆಲೆ ತೆತ್ತ ದುಬಾರಿ ವಸ್ತುಗಳು ನೋಡುವುದಕ್ಕಲ್ಲದೆ ಮುಟ್ಟಿದರೆ ಹಾಳಾಗಿ ಬಿಡುವ ಅಪಾಯವಿದೆ. ಈ ವಸ್ತುಗಳ್ಯಾವುವೂ ನಮ್ಮ ದಿನಚರಿಗೆ ಅಗತ್ಯವಿಲ್ಲ. ಆದರೂ ಇವು ಆಧುನಿಕತೆಗಿಂದು ಬೇಕಿದೆ. ಇಂದು ಜೀವನವೆಂಬುದೊಂದು ದರ್ಶನವಾಗಿರದೆ ಪ್ರದರ್ಶನವಾಗಿದೆ. ನಮ್ಮ ಒಂದೊಂದು ನಡೆನುಡಿಗಳು ಸರಳತೆಯನ್ನು

ಕಳೆದುಕೊಳ್ಳುತ್ತಾ ಕೃತಕತೆಯಡೆಗೆ ನಡೆದಿದೆ.

ನಮ್ಮ ಸ್ವಂತ ಮನೆ, ಪ್ರದರ್ಶನಕ್ಕೆ ಬೇಕಾದ ಎಲ್ಲವೂ ಇವೆ. ಪ್ರತಿಷ್ಠೆ ಹೆಚ್ಚಿಸುವ ಬಟ್ಟೆಗಳೂ ಇವೆ. ಇಷ್ಟಾದರೆ ಸಾಕೇ? ಎಷ್ಟೇ ಪ್ರದರ್ಶನಮಾಡಿದರೂ ಹಸಿವನ್ನು ನಿಯಂತ್ರಿಸಲು ಸಾಧ್ಯವಿಲ್ಲದ ದೆಸೆಯಿಂದ ನಾವು ಏನಾದರೂ ತಿನ್ನಲೇಬೇಕಾಗುತ್ತದೆ.

ನಮ್ಮ ಆಹಾರದ ಗುಣಮಟ್ಟ: ಛೀ ಛೀ ಹಾಗೇನೂ ಇಲ್ಲ. ಏನಾದರೂ ತಿನ್ನಲು ನಾವಿಂದು ಸಿದ್ಧರಿಲ್ಲ. ರೂಪ, ಬಣ್ಣ, ಗಾತ್ರ ಗಳ ಬಗ್ಗೆ ನಮಗೆ ಸ್ಪಷ್ಟ ಕಲ್ಪನೆ ಇದೆ. ನಮ್ಮ ಬಟ್ಟೆ, ನಮ್ಮ ಮನೆ, ನಮ್ಮ ಪ್ರದರ್ಶನದ ಗೂಡುಗಳು ನಮಗೆ ಈ ಕುರಿತು ಮಾರ್ಗ ನಿರ್ದೇಶನ ಮಾಡಿವೆ. ಈ ಜಾಡು ಬಿಟ್ಟರೆ, ನಮ್ಮ ಪ್ರದರ್ಶನ ಜೀವನದ ನೆಲೆ ತಪ್ಪಿ ಹೋಗುತ್ತದೆ, ಸಮಾಜದಲ್ಲಿ ನಾವು ಬೆಲೆ ಕಳೆದು ಕೊಳ್ಳುತ್ತೇವೆ.

ಹಾಗಾಗಿ ನಾವು ತಿನ್ನುವ ಒಂದೊಂದು ಆಹಾರಕ್ಕೂ ನಮ್ಮದೇ ಆದ ಗುಣಮಟ್ಟ ವನ್ನು ಆರೋಪಿಸಿದ್ದೇವೆ. ಅಕ್ಕಿ ಇಷ್ಟೇ ಉದ್ದವಿರಬೇಕು, ಟೊಮೆಟೋ ಇಂತಿಷ್ಟೇ ದೊಡ್ಡದಿರಬೇಕು. ಏಲಕ್ಕಿಗೆ ಹೀಗೇ ಬಣ್ಣ ವಿರಬೇಕು. ಬದನೆಗೆ ಹೀಗೇ ರೂಪವಿರ ಬೇಕು.

ಪ್ರಕೃತಿಯ ಯಾವತ್ತು ನಿಯಮ ಗಳನ್ನು ಮೀರಿ, ತೂರಿ, ಬಟ್ಟೆ, ಮನೆ, ಆಲಂಕಾರಿಕ ವಸ್ತುಗಳಲ್ಲಿ ನಾವು ಸಾಧಿಸಿದ ವಿಕ್ರಮವನ್ನು ನಮ್ಮ ಆಹಾರ ವಸ್ತುಗಳ ಮೇಲೆ ಹೇರಿಬಿಟ್ಟಿದ್ದೇವೆ. ಈ ಪ್ರಕ್ರಿಯೆ ಯಲ್ಲಿ ನಮ್ಮ ಒಂದೊಂದು ಆಹಾರವೂ ಇಂದು ವಿಷವಾಗಿ ಬದಲಾಗುತ್ತಿದೆ. ಪರಿಣಾಮ, ಪರಿಸ್ಥಿತಿ ಗಂಭೀರವಿದೆ.

ಆತ್ಮೀಯ ಪಾಯಸದೂಟ: ಪ್ರದರ್ಶನದ, ಕೃತಕ ಜೀವನದ ಮಧ್ಯೆಯೂ ನಾವು ಒಮ್ಮೊಮ್ಮೆ ಸ್ವಾಭಾವಿಕರಾಗುವು ದುಂಟು, ಹಳೆನಂಟನ ವ್ಯಕ್ತಿ ಮನೆಗೆ ಬಂದಾಗ ಅತ್ಯಂತ ಆತ್ಮೀಯವಾಗಿ ಮಾತ ನಾಡುತ್ತಾ ಮನೆಯಲ್ಲೇ ಪಾಯಸದೂಟ ಮಾಡುವ ಸಂದರ್ಭ ಇನ್ನೂ ನಮ್ಮಲ್ಲಿ ಬಾಕಿ ಉಳಿದಿದೆ. ಇಂಥ ಪಾಯಸದ ಸಿಹಿಗೆ ಕಾರಣವಾಗಿರುವ ಬೆಲ್ಲದ ಕಥೆಯನ್ನು ದಯವಿಟ್ಟು ಕೇಳಬೇಕು.

ರಾಸಾಯನಿಕ ಕೃಷಿ ಹಾಗೂ ಸಾವಯವ ಕೃಷಿ: ಈ ಎರಡು ಹೆಸರು ಗಳನ್ನು ನೀವು ಕೇಳಿರಬಹುದು ಹಾಗೂ ಈ ಕುರಿತು ನಿಮಗೆ ಒಂದಷ್ಟು ಮಾಹಿತಿ ಇದೆ ಎಂದು ಭಾವಿಸುತ್ತೇನೆ. ಅಧಿಕ ಇಳುವರಿ, ಅಧಿಕ ಲಾಭ ಎಂಬ ಹುಚ್ಚು ಕುದುರೆಯ ಹಿಂದಿನ ಓಟದಲ್ಲಿ ಕಬ್ಬಿಗೆ ಸುರಿಯುದ ವಿಷ ಗಳಲ್ಲಿ. ವೈವಿಧ್ಯಮಯ ಬಟ್ಟೆ ಇದ್ದಂತೆ, ವೈವಿಧ್ಯಮಯ ವಿಷಗಳ ವೈಜ್ಞಾನಿಕ ನಿರ್ವಹಣೆಯ ಅನಂತರ ಕಬ್ಬು ಕಟಾವಿಗೆ ಸಿದ್ಧವಾಗಿದೆ.

ನಿಜವಾದ ಬೆಲ್ಲದ ಬಣ್ಣ ಕಪ್ಪು: ಕಬ್ಬಿನಿಂದ ಬೆಲ್ಲ ಮಾಡುವುದು ಇಂದು ನಿನ್ನೆಯ ವಿಷಯವಲ್ಲ. ಕಬ್ಬಿನ ರಸವನ್ನು ಕಾಸಿ, ಪಾಕ ಬರಿಸಿ ಅಚ್ಚುಗಳಲ್ಲಿ ಹೊಯ್ದು ಬೆಲ್ಲ ಮಾಡುತ್ತಾರೆ. ಅಚ್ಚು ಕಟ್ಟುವ ಪಾಕ ತಯಾರಾಗಲು ಸ್ವಲ್ಪ ಸುಣ್ಣ ಬೇಕಾಗು ತ್ತದೆ. ಇದು ಎಷ್ಟೆಂದರೆ ಒಂದು ಟನ್

ಕಬ್ಬಿಗೆ (೪೦೦ ಲೀಟರ್ ಕಬ್ಬಿನ ಹಾಲು ಹಿಡಿಸುವ ಒಂದು ಕೊಪ್ಪರಿಗೆ ರಸಕ್ಕೆ) ಕೇವಲ ೧೦ ಗ್ರಾಮ್‌ನಷ್ಟು. ಇಷ್ಟು ಹಾಕಿದರೆ ಸುಂದರವಾದ, ಆರೋಗ್ಯ ಕರವಾದ, ಆತ್ಮೀಯವಾದ ಸಿಹಿ ಬೆಲ್ಲ ತಯಾರಾಗುತ್ತದೆ. ಗಮನಿಸಿ : ಈ ಸುಂದರ ವಾದ ಬೆಲ್ಲದ ಬಣ್ಣ ಕಪ್ಪು, ಕಬ್ಬು ಸಿಹಿ, ಬೆಲ್ಲವೂ ಸಿಹಿ ಆದರೆ ಬಲಿತ ಕಬ್ಬನ್ನು ಹಾಗೇ ಇಡಲಾಗುವುದಿಲ್ಲ, ಬಿಡಲಾಗುವು ದಿಲ್ಲ. ಆದರೆ ಬೆಲ್ಲವನ್ನು ಒಂದು ವರ್ಷ ಕಾಲ ಅಡುಗೆಮನೆ ಅಟ್ಟದಲ್ಲಿ ಇಡಬಹುದು. ಹಾಗಾಗಿ ಬೆಲ್ಲ ಮಾಡುವ ತಂತ್ರವಿದ್ಯೆ ನಮಗೆ ಅಗತ್ಯವಿದೆ. ಇದಕ್ಕೆ ವಿಶಿಷ್ಟ ರುಚಿಯೂ ಇದೆ. ಜ್ಞಾನ ಪಕ್ವಗೊಂಡಾಗ ಇಂಥ ರುಚಿ ಉತ್ಪತ್ತಿಯಾಗುತ್ತದೆ.

ಆದರೆ ಬಿಳಿ ಕುರಿತು ನಮಗೆ ಭಾರೀ ವ್ಯಾಮೋಹ : ನಮ್ಮನ್ನು ಬಿಳಿಯರು ಎರಡು ಶತಮಾನಗಳ ಕಾಲ ಆಳಿದ್ದ ರಿಂದಲೋ ಏನೋ ನಮಗೆ ಬಿಳಿ ಬಣ್ಣದ ಬಗ್ಗೆ ಭಾರೀ ವ್ಯಾಮೋಹ, ಬಿಳಿ ಬೆಲ್ಲ ನಮ್ಮ ಬಯಕೆಯಾಯಿತು. ಬೆಲ್ಲವನ್ನು ಬಿಳಿ ಮಾಡುವ ಪ್ರಯತ್ನ ನಡೆಯಿತು, ಜೊತೆ ಯಲ್ಲಿ ಬುದ್ಧಿ ಕಪ್ಪಾಯಿತು !

ಬೆಲ್ಲ ಬಿಳಿಯಾಗಬೇಕಾದರೆ ಹಲ ವಾರು ನಿರ್ಣಾಯಕ ಅಂಶಗಳು ಕೆಲಸ ಮಾಡುತ್ತವೆ : ಆ ಕಬ್ಬಿನ ತಳಿ, ಬೆಳೆದ ಭೂಮಿ, ಕಬ್ಬಿನ ಬಲಿಕೆ, ಋತುಮಾನ, ಹಾಕಿದ ಗೊಬ್ಬರಗಳು ಇತ್ಯಾದಿ. ಈ ಎಲ್ಲ ಅಂಶಗಳಿಗೂ ಉತ್ತರಕೊಡುತ್ತಾ ಬೆಲ್ಲದ ಗುಣಮಟ್ಟವನ್ನು ಬಿಳಿ ಎಡೆಗೆ ಬಯ್ಯಲು ಇಂದು ಸಮರ್ಥ ತಂತ್ರವಿದ್ಯೆ ಚಾಲ್ತಿ ಯಲ್ಲಿದೆ.

ಕಬ್ಬಿನರಸ ಬತ್ತಿ ಬೆಲ್ಲವಾಗುವ ಸರಳ ಕ್ರಿಯೆಯಲ್ಲಿ ಸುಣ್ಣದ ಬಳಕೆ ಈಗಾಗಲೇ ಹೇಳಿದೆ. ಕಬ್ಬಿನ ಜಲ್ಲೆಯ ಸಿಪ್ಪೆ ಮೇಲೆ ಪ್ರಾಕೃತಿಕವಾಗಿ ಬೂದಿ ಮೆತ್ತಿರುತ್ತದೆ. ಇದು ಕೊಪ್ಪರಿಗೆ ತುಂಬಿದ ಕಬ್ಬಿನ ಹಾಲಿ ನಲ್ಲೂ ಇರುತ್ತದೆ. ಇದನ್ನು ಮಡ್ಡಿ ಎನ್ನು ತ್ತಾರೆ. ಇದನ್ನು ತೆಗೆಯದಿದ್ದರೆ ಬೆಲ್ಲದ ರುಚಿ ಕೆಡುತ್ತದೆ. ಅದಕ್ಕಿಂತ ಹೆಚ್ಚಾಗಿ ಬಣ್ಣ ಕೆಡುತ್ತದೆ. ಮಾರುಕಟ್ಟೆಯಲ್ಲಿ ಬೆಲೆ ಬಿದ್ದು ಹೋಗುತ್ತದೆ. ಹಾಗಾಗಿ ಮಡ್ಡಿ ತೆಗೆಯಲು ಸುಲಭವಾಗುವಂತೆ ೪೦೦ ಲೀಟರಿನ ಕೊಪ್ಪರಿಗೆಗೆ ೫೦ ಗ್ರಾಮ್‌ ಗಳಷ್ಟು ಈ ಅಡುಗೆ ಸೋಡ ಹಾಕಿದರೆ ಅನುಕೂಲವಾಗುವುದೆಂದು ಉಪಯೋಗಿಸು ತ್ತಾರೆ. ಆದರೆ ಈ ದಿನಗಳಲ್ಲಿ ಸೋಡವನ್ನು ೫೦೦ ಗ್ರಾಮ್‌ಗಳಿಗೂ ಮಿಕ್ಕಿ ಹಾಕುವ ಪರಿಪಾಠ ಇದೆ. ಇದರಿಂದ ಮಡ್ಡಿ ಎತ್ತಲು ಸುಲಭವಾಗುವುದರ ಜೊತೆಗೆ ಯಜಮಾನ ರಿಗೆ ಬೆಲ್ಲದ ಇಳುವರಿ ಜಾಸ್ತಿ ಬರುತ್ತದೆ. ಪಾಕ ಉಬ್ಬುತ್ತದೆ. ಹಾಗಾಗಿ ಒಂದು ಸಲದ ಪಾಕದಲ್ಲಿ ೧೨೫ ಅಚ್ಚಿನ ಬದಲು ೧೫೦ ಅಚ್ಚುಗಳು ಸಿದ್ಧವಾಗುತ್ತವೆ. ಅಂದರೆ ಅಧಿಕ ಅಂಗಾರಾಮ್ಲ ನಮ್ಮ ಹೊಟ್ಟೆ ಸೇರುತ್ತದೆ. ಅಂಗಾರಾಮ್ಲವನ್ನು ಸದಾ ಹೊರಹಾಕಲು ಶ್ರಮಿಸುವ ಶ್ವಾಸ ಕೋಶ, ಹೃದಯಗಳಿಗಿದು ಹೊರೆ ಯಾಗದೇ ?

ಗಿರಾಕಿಯ ಮನ ಮೆಚ್ಚುವಂತೆ ಬೆಲ್ಲ ಬಿಳಿಮಾಡುವುದು ಪರಾರ್ಥ ಬೆಲ್ಲದ ಇಳುವರಿ ಜಾಸ್ತಿಮಾಡುವುದು ಸ್ವಾರ್ಥ. ಇವಿಷ್ಟು ಕಾರಣಗಳಿಗಾಗಿ ಬೆಲ್ಲಕ್ಕೆ ಉಪ

ಯೋಗಿಸುವ ರಾಸಾಯನಿಕಗಳ ಸರದಿ ಬಹಳ ದೊಡ್ಡದು.

ಇಂದು **ಎಲ್ಲವೂ ಕಾರ್ಖಾನೆ**: ಹೈಡ್ರಸ್ ಎಂಬುದು ಕಬ್ಬಿನ ಕೃಷಿಕರ ಆತ್ಮೀಯ ಬಂಧು. ಇದಿಲ್ಲದಿದ್ದರೆ ಬೆಲ್ಲಕ್ಕೆ ಬಣ್ಣ ಕೊಡಲು ಸಾಧ್ಯವೇ ಇಲ್ಲ. ಇದರ ರಾಸಾಯನಿಕ ನಾವು ಸೋಡಿಯಮ್ ಹೈಡ್ರೊಸಲ್ಫೈಟ್. ಇದನ್ನು ಒಂದು ಪಾಕಕ್ಕೆ ೫೦೦ ಗ್ರಾಮ್‌ಗಳಿಗೂ ಮಿಕ್ಕು ಬಳಸು ತ್ತಾರೆ. ಹೈಡ್ರಸ್ ತಯಾರಿಸಿ ವಿತರಿಸುವ ಕಂಪೆನಿ ಬಹಳ ಬುದ್ಧಿವಂತಿಕೆ ಬಳಸಿದೆ. ಅದರ ಸುಂದರವಾದ ಲಕೋಟೆಯ ಮೇಲೆ ಕಬ್ಬಿನ ಚಿತ್ರವನ್ನು ಮುದ್ರಿಸಿದೆ. ಹಿಂಭಾಗ ದಲ್ಲಿ ಕಾರ್ಖಾನೆ ಬಳಕೆಗೆ ಮಾತ್ರ ಎಂದು ಬರೆದಿದೆ.

ಅಧಿಕ ಪ್ರಮಾಣದಲ್ಲಿ ಕಬ್ಬಿನಿಂದ ಬೆಲ್ಲ ತಯಾರಿಸುತ್ತಾರಾದ್ದರಿಂದ ಆಲೆಮನೆಯೂ ಒಂದು ಕಾರ್ಖಾನೆಯೆ ನಾವು ತಿಂದದ್ದ ನ್ನೆಲ್ಲಾ ಜೀರ್ಣಿಸಿ ಶಕ್ತಿ ಸಂಗ್ರಹಿಸಿ, ಮಲ ವಿಸರ್ಜಿಸಲು ನಿಯುಕ್ತಗೊಂಡಿರುವ ರಾಸಾಯನಿಕ ವ್ಯವಸ್ಥೆ ನಮ್ಮ ನಿಮ್ಮ ಹೊಟ್ಟೆಗಳೂ ಆಗಿರುವುದರಿಂದ ಇವೂ ಒಂದೊಂದು ಕಾರ್ಖಾನೆಗಳೆ. ಹಾಗಾಗಿ ಕಾರ್ಖಾನೆ ಬಳಕೆಗೆಂದು ಸಮೂದಿತವಾಗಿ ರುವ ಹೈಡ್ರಸ್ಸನ್ನು ಬೆಲ್ಲ ಮಾಡಲು ಬಳಕೆ ಮಾಡುವುದರಲ್ಲಿ ತಾಂತ್ರಿಕವಾಗಿ, ನೈತಿಕ ವಾಗಿ ತಪ್ಪೇನೂ ಇಲ್ಲ ಬಿಡಿ!

ಸರದಿಯಲ್ಲಿ ಎರಡನೇ, ಮೂರನೇ ಮುತ್ಸದ್ದಿಗಳು ಚಿಕ್ಕೆ ಮತ್ತು ಗಮ್ ಎಂಬ ಬಿಳಿ ಬಣ್ಣದ ಪುಡಿಗಳು, ಎಷ್ಟೊಂದು ಗಿರಾಕಿಗಳ ಮನ ರಂಜಿಸುವಂತೆ ಬೆಲ್ಲವನ್ನು ಬಿಳಿಮಾಡುವ, ಸಾರ್ವಜನಿಕ ಕೈಂಕರ್ಯ ಮಾಡುವ ರಾಸಾಯನಿಕಗಳಿವು ನಿಜ ವಾಗಿಯೂ ಮುತ್ಸದ್ದಿಗಳೆ ತಿನ್ನುವ ಬಯಕೆ ಹುಟ್ಟಬೇಕಾದರೆ, ತಿಂದದ್ದು ಸರಿಯಾಗಿ ಜೀರ್ಣವಾಗಬೇಕಾದರೆ. ಅದು ಆಕರ್ಷ ಣೀಯವಾಗಿರಬೇಕು. ಅದು ಸುಗಂಧವನ್ನು ಹೊಂದಿರಬೇಕು. ಅದು ಸವಣ್ರೀಯ ವಾಗಿರಬೇಕು. ವೈದ್ಯ ವಿಜ್ಞಾನದ ಹೇಳಿಕೆ ಗಳಿಗೆ ಸಹಕಾರಿಯಾಗುವಂತೆ, ಬೆಲ್ಲವನ್ನು ಮಡಿಗೊಳಿಸುವ ಚಿಕ್ಕೆ ಹಾಗೂ ಗಮ್‌ಗಳ ರಾಸಾಯನಿಕ ಹೆಸರುಗಳು ನನಗೆ ಗೊತ್ತಿಲ್ಲ. ಈ ರಾಸಾಯನಿಕಗಳನ್ನು ಬಹಳ ಮಿತ ವಾಗಿ ಬಳಸುತ್ತಾರಂತೆ (ಇವುಗಳ ಬೆಲೆ ಜಾಸ್ತಿ) ಕೇವಲ ೩ ಗ್ರಾಮ್‌ಗಳಷ್ಟು. ವಿಷವನ್ನು ಮಿತವಾಗಿ ಬಳಸುವ ಸಂಯಮಕ್ಕೆ ಮೆಚ್ಚಲೇಬೇಕು—ಅಲ್ಲವೇ?

ಪಾಕಮಾಡುವಾಗ ಕೊಪ್ಪರಿಗೆ ಸೀದು ಹೋಗದಂತೆಯಾವುದಾದರೂ ಜಿಡ್ಡು ಹಾಕಿ ದರೆ ಅನುಕೂಲವಾಗುವುದು. ಅದಕ್ಕಾಗಿ ಕೊಬ್ಬರಿ ಎಣ್ಣೆ, ಪಾಮೆಣ್ಣೆ, ಸೂರ್ಯಕಾಂತಿ ಎಣ್ಣೆ ಹೀಗೆ ಯಾವುದಾದರೂ ಎಣ್ಣೆ ಒಂದಷ್ಟು (೧೦೦ ಮಿಲೀ. ಲೀ.) ಹಾಕು ವರು. ಯಾವುದಾದರೂ ಎಂಬ ಪದಕ್ಕೆ ಬಹಳ ಮಹತ್ವ ಉಂಟು, ಅದು ಹಳೆ ಎಂಜಿನ್ ಎಣ್ಣೆಯೂ ಆಗಿದ್ದರೆ ಆಶ್ಚರ್ಯ ವೇನೂ ಇಲ್ಲ.

ಟಿ.ವಿ. ನೋಡುವುದು ನೀವು ಮಾತ್ರ ಅಲ್ಲ ಸ್ವಾಮಿ ನಮ್ಮ ರೈತರೂ ನೋಡು ತ್ತಾರೆ. ಆಲೆ ಮನೆಯವರೂ ನೋಡು ತ್ತಾರೆ. ಅವರಿಗೂ ತಿಳಿದಿದೆ—"ಸಾಟಿ ಇಲ್ಲದ ಬಿಳುಪಿಗೆ ನಿರ್ಮಾ ಪೌಡರ್", ಹೋಟೆಲಿನಲ್ಲಿ ಅಲ್ಲಿ ಇಲ್ಲಿ ಏನೇನೋ ತಿಂದು

ಕೊಳಕಾದ ನಿಮ್ಮ ಹೊಟ್ಟೆಯನ್ನು ಸ್ವಚ್ಛಗೊಳಿಸಲು ನಿರ್ಮಾ ಹಾಕಿದ ಬಿಳಿ ಬೆಲ್ಲ ಒಂದು ತುಂಡು ತಿಂದರೆ ಸಾಕು, ಬಿಳಿ ಮಾಡುವ ಕ್ರಿಯೆಯಲ್ಲಿ ನಿರ್ಮಾ ಶ್ರೇಷ್ಠವೋ ಬ್ಲೀಚಿಂಗ್ ಪೌಡರ್ ಉತ್ಕೃಷ್ಟವೋ ಎಂಬ ಬಗ್ಗೆ ರೈತರಲ್ಲಿ ಒಮ್ಮತವಿದ್ದಂತಿಲ್ಲ. ಒಟ್ಟಿನಲ್ಲಿ ಯಾವುದಾದರೂ ಒಂದು. ಬಿಳಿ ಸಾಲದಿದ್ದರೆ ಎರಡೂ ಒಟ್ಟಿಗೆ, ಏನಾಗಬೇಕಾದ್ದೀಗ?

ಅಧಿಕ ಇಳುವರಿಗೆ ಬೇಕು ರಸಗೊಬ್ಬರ: “ದೇಶದ ಉದ್ಧಾರವಾಗಬೇಕಾದರೆ ಕೃಷಿಯಲ್ಲಿ ಅಧಿಕ ಇಳುವರಿ ಬರಬೇಕು. ಆಹಾರದಲ್ಲಿ ಸ್ವಾವಲಂಬನೆ ಸಾಧಿಸಬೇಕು. ಅದಕ್ಕಾಗಿ ಆಧುನಿಕ ಕೃಷಿ ಅನುಸರಿಸಬೇಕು. ಎನ್.ಪಿ.ಕೆ. ರಾಸಾಯನಿಕ ಗೊಬ್ಬರಗಳನ್ನು ಬಳಸಬೇಕು”— ಇದು ಮಹಾಮಹಾ ವಿಜ್ಞಾನಿಗಳ ಆರ್ಥಿಕ ಚಿಂತಕರ ಧ್ಯೇಯ ವಾಕ್ಯ, ಪರಮ ಘೋಷಣೆ. ವಿವಿಧ ಮಾಧ್ಯಮಗಳ ಮೂಲಕ ಬಾಯಿಪಾಠ ಹೊಡೆಸಿದ್ದೇ ಹೊಡೆಸಿದ್ದು. ಇಂದು ರೈತರಿಗೆ ಗಟ್ ಆಗಿದೆ. ಅಧಿಕ ಇಳುವರಿಗಾಗಿ ಕಬ್ಬಿಗೆ ಬಳಸುವ ಯೂರಿಯಾ, ಸೂಪರ್ ಫಾಸ್ಫೇಟ್, ಪೊಟಾಷ್‌ಗಳನ್ನು ಬೆಲ್ಲಕ್ಕೂ ಬಳಸುತ್ತಿದ್ದಾರೆ. ಅಧಿಕ ಇಳುವರಿಗಾಗಿ ಏನು ಮಾಡಿದರೂ ತಪ್ಪಲ್ಲ ಎಂದು ಹಿರಿಯರೇ ಹೇಳಿಕೊಟ್ಟಿರುವುದನ್ನು ರೈತರು ಅನುಸರಿಸುವುದರಲ್ಲಿ ತಪ್ಪೇನೂ ಇಲ್ಲ ಅಲ್ಲವೇ?

ಈ ತಂತ್ರ ವಿದ್ಯೆಯಿಂದ ಒಂದು ಲಾಭವಿದೆ. ದೇಶಕ್ಕೆ ಬಲುದೊಡ್ಡ ತೊಡಕು, ಏರುತ್ತಿರುವ ಜನ ಸಂಖ್ಯೆಯಂತೆ (ಜನ ಸೋಮಾರಿಗಳಾಗುತ್ತಿರುವುದು ಪ್ರಕೃತಿ ನಾಶದಿಂದ ಆಹಾರ ಸಂಪಾದಿಸುವ ತಂತ್ರ ವಿದ್ಯೆ ಸಿದ್ಧಿಸಿರುವುದು ಅಲ್ಲವಂತೆ) ಇಂಥಾ ಜನಸಂಖ್ಯೆಯ ಏರನ್ನು ತಡೆಯಲು ಬೆಲ್ಲ ಬಿಳಿಮಾಡುವಂಥಾ ಇಳುವರಿ ಹೆಚ್ಚಿಸುವಂಥಾ ಒಂದೊಂದು ತಂತ್ರವೂ ಸಹಕಾರಿಯಾಗಲಿದೆ.

ತೂಕ ಹೆಚ್ಚಿಸಲು ಜಿಪ್ಸಮ್: ಕಬ್ಬಿನ ರೈತ ತನ್ನ ಒಣಭೂಮಿಯಲ್ಲಿ ಕಡ್ಲೆಕಾಯಿಯನ್ನು ಬೆಳೆಸುವುದಿದೆ. ಆತನಿಗೆ ಭಿನ್ನ ಭಿನ್ನ ಕೃಷಿ ಅನುಭವವಿದೆ. ಕಡ್ಲೆಕಾಯಿ ತೂಕ ಹೆಚ್ಚಿಸಲು ವಿಜ್ಞಾನಿಗಳು ಮಹತ್ವವಾದ ಕೊಡುಗೆ ಕೊಟ್ಟಿದ್ದಾರೆ. ಅದೇ ಜಿಪ್ಸಮ್, ಜಿಪ್ಸಮ್ ಹಾಕದಿದ್ದರೆ ಕಡ್ಲೆಕಾಯಿ ತೂಕ ಕಡಿಮೆ, ಎಣ್ಣೆ ಇಳುವರಿ ಕಡಿಮೆ. ತೂಕ ಹೆಚ್ಚಿಸುವ ಒಳ್ಳೆ ಕೆಲಸವನ್ನು ಬೆಲ್ಲಕ್ಕೂ ವರ್ಗಾವಣೆಮಾಡುವ ರೈತರ ಅನ್ವೇಷಕ ಪ್ರವೃತ್ತಿ ನಿಜವಾಗಿಯೂ ಶ್ಲಾಘನೀಯವಾದದ್ದು. ಅಲ್ಲವೇ? ವಿಜ್ಞಾನಿಗಳ ಜವಾಬ್ದಾರಿ ಅಷ್ಟರಮಟ್ಟಿಗೆ ಕಡಿಮೆಯಾಯಿತು.

ಬೆಳೆಗಳಿಗೆ ಉಪಯೋಗಿಸುವ ಪೋಷಕಗಳಲ್ಲಿ ಎರಡು ವಿಧಗಳಿವೆ. ಒಂದನೆಯದಾಗಿ ಮುಖ್ಯ ಪೋಷಕಗಳಾದ ಎನ್.ಪಿ.ಕೆ, ಎರಡನೆಯದಾಗಿ ಲಘುಪೋಷಕಗಳು. ಇವು ಒಟ್ಟು ಹದಿಮೂರು ಇವೆ. ಭೂಮಿಗೆ ಹಾಕುವ ಮುಖ್ಯ ಪೋಷಕಗಳು ಈಗಾಗಲೇ ಬೆಲ್ಲಕ್ಕೂ ಬಂದಿವೆ. ಲಘುಪೋಷಕಗಳನ್ನು ಸಮಾಂತರವಾಗಿ ಭೂಮಿಗೆ ಹಾಕಬೇಕೆಂದು ತಿಳಿದಿರುವ ರೈತರು ಬೆಲ್ಲದ ಮೇಲೂ ಪ್ರಯೋಗ ಪ್ರಾರಂಭಿಸಿದ ಬಗ್ಗೆ

ನನಗೆ ದಾಖಲೆ ಏನೂ ಸಿಕ್ಕಿಲ್ಲ. ಆದರೆ ಇಂಥಾ ಗುಮಾನಿ ನನಗೆ ಬಂದಿದ್ದರೆ ಅದು ಅತಾರ್ಕಿಕವಲ್ಲವೆಂದು ಭಾವಿಸುತ್ತೇನೆ.

ಕಟ್ಟಡದ ಗಟ್ಟಿತನ ಸಿಮೆಂಟಿನಲ್ಲಿದೆ: ಎಲ್ಲ ಜೀವಿಗಳೂ ಪ್ರಕೃತಿಯನ್ನು ಗಮನಿಸುವುದರಿಂದ ಪಾಠ ಕಲಿಯುತ್ತವೆ. ಜೀವನದ ದಾರಿ ಕಂಡುಕೊಳ್ಳುತ್ತವೆ. ಅನುಭವದಿಂದ ವಿಜ್ಞಾನಿಗಳಾಗಿ ಬದಲಾಗುತ್ತವೆ. ಈ ಮಾತು ರೈತನಿಗೂ ನಿಜ. ಆತ ಭಾರೀ ಭಾರೀ ಮನೆ ಕಟ್ಟಡ ಕಟ್ಟುವುದನ್ನು ನೋಡಿದ್ದಾನೆ. ಕಟ್ಟಡದ ಅದ್ಭುತವಾದ ಕಟ್ಟುವ ಸಾಮರ್ಥ್ಯವಿರುವುದು ಸಿಮೆಂಟಿನಲ್ಲಿ. ಇದನ್ನು ಆತ ಗಮನಿಸಿದ್ದಾನೆ. ಬೆಲ್ಲದ ಅಚ್ಚು ಮಾಡುವಲ್ಲಿನ ತನ್ನ ಸಮಸ್ಯೆಗೆ ಪರಿಹಾರ ಕಂಡಿದ್ದಾನೆ. ಹಲವಷ್ಟು ಬಾರಿ ಅಚ್ಚು ಗಟ್ಟಿ ಬರುವುದಿಲ್ಲ. ಅಂಚುಗಳು, ಮೂಲೆಗಳು ಬಿಗಿ ನಿಲ್ಲುವುದಿಲ್ಲ. ಮೂಲೆ ಮುರಿದು ರೂಪಕೆಟ್ಟ ಅಚ್ಚುಗಳನ್ನು ನೀವು ಒಪ್ಪುವುದಿಲ್ಲ. ಪಾಪ ಆತನೇನು ಮಾಡಬೇಕು? ಒಂದಷ್ಟು ಸಿಮೆಂಟ್ ಹಾಕಿದರೆ ಕಟ್ಟಡ ಗಟ್ಟಿಯಾಗುತ್ತದೆ. ಮಾರುಕಟ್ಟೆಯಲ್ಲಿ ಏರು ಬೆಲೆ ಪಡೆಯುತ್ತದೆ.

ಬೆಲ್ಲದಲ್ಲಿ ಸಾವಯವ ಸಮನ್ವಯ: ರಾಸಾಯನಿಕ ಕೃಷಿ ಮತ್ತು ಸಾವಯವ ಕೃಷಿ ವಿಚಾರಗಳ ಪರ, ವಿರುದ್ಧ ಇಂದು ಸೌಮ್ಯ ಯುದ್ಧ ಪ್ರಾರಂಭವಾಗಿದೆ. ಈ ಹಂತದಲ್ಲಿ ನಮ್ಮ ಕೃಷಿ ವಿಜ್ಞಾನಿಗಳೆಲ್ಲಾ ಒಂದು ಒಪ್ಪಂದಕ್ಕೆ ಬಂದಿದ್ದಾರೆ. ಸಮನ್ವಯ ನೀತಿ, ಅದೂ ಒಂದಷ್ಟು ಇದೂ ಒಂದಷ್ಟು. ಬೆಲ್ಲದ ಬಗ್ಗೆ ಇಷ್ಟೊಂದು ಸಂಶೋಧನೆ ನಡೆಸಿರುವ ನಮ್ಮ ಆಲೆಮನೆ ಮಂದಿಗಳು ವಿಜ್ಞಾನಿಗಳೂ ಹೌದು. ಹಾಗಾಗಿ ಇವರು ಕೂಡ ಇಂದು ಸಮನ್ವಯ ನೀತಿಗೆ ಬಂದಿದ್ದಾರೆ. ಮೇಲೆ ತಿಳಿಸಿದ ರಾಸಾಯನಿಕಗಳ ಜೊತೆಗೆ ಒಂದಷ್ಟು ಸಾವಯವ ವಸ್ತುಗಳನ್ನೂ ಬಳಸುತ್ತಾರೆ. ಕಾಡುತೊಂಡೆ ಸೊಪ್ಪು, ಕಾಡುಬೆಂಡೆ ಸೊಪ್ಪುಗಳನ್ನು ಕಬ್ಬಿನೊಂದಿಗೆ ಗಾಣಕ್ಕೆ ಕೊಟ್ಟರೆ ಮೂಲ ಉದ್ದೇಶವಾದ ಬೆಲ್ಲದ ಬಿಳಿಗೆ, ಬೆಲ್ಲದ ತೂಕಕ್ಕೆ ಅನುಕೂಲವಾಗುತ್ತದಂತೆ.

ಪೊಟಾಷ್ ಎಂಬ ರಾಸಾಯನಿಕಕ್ಕೆ ಸಾವಯವ ಬದಲಿ ಬೂದಿ ಎಂಬ ವಿಚಾರ ನಿಮಗೂ ತಿಳಿದಿರಬಹುದು. ಹೌದು ಬೂದಿ ಎಂಬ ಸಾವಯವ ವಸ್ತುವು ಆಗಾಗ ಬೆಲ್ಲಕ್ಕೆ ಬಳಕೆಯಾಗುವುದಿದೆ.

ಹಾಲು ಕಾಸುವ ಕ್ರಿಯೆಯನ್ನು ನೀವು ಗಮನಿಸಿರಬಹುದು. (ಮಿಲ್ಕ್ ಕುಕ್ಕರ್‌ನಲ್ಲಿ ಅಲ್ಲ.) ಕೊನೆಯಲ್ಲಿ ಉಕ್ಕಿ ಬರುತ್ತದೆ. ಆಗ ಚುರುಕಾಗಿ ಬೆಂಕಿ ನಂದಿಸಬೇಕು ಇಲ್ಲಾ ಸ್ವಲ್ಪ ನೀರು ಹಾಕಬೇಕು. ಬೆಲ್ಲ ಕಾಯಿಸುವಾಗಲೂ ಪಾಕ ಬರುವ ಹೊತ್ತಿನಲ್ಲಿ ಉಕ್ಕಿ ಬರುತ್ತದೆ. ಆಗ ನೀರು ಹಾಕಿದರೆ ಪಾಕ ಕೆಡುತ್ತದೆ, ಹಾಗೆಂದು ಉಕ್ಕಿ ಹೋದರೆ ಭಾರೀ ನಷ್ಟವಾಗುತ್ತದೆ. ಸುಲಭದ ಸಾವಯವ ಪರಿಹಾರ–ತಳದಲ್ಲೇ ಇರುವ ಬೂದಿಯನ್ನು ಅದೇ ಬೆಲ್ಲ ಮೊಗಚುವ ಸೌಟನಲ್ಲಿ ಗೊರಿ ಹಾಕಿ ಬಿಡುವುದು. ಅಚ್ಚಿನ ಮಣೆಗೆ ಬೆಲ್ಲ ಅಂಟಿ ಹಿಡಿಯದಂತೆಯೂ ಬೂದಿ ಸಹಕರಿಸುವುದಂತೆ.

ಏನೆಲ್ಲಾ ಸರ್ಕಸ್ ಮಾಡಿದನಂತರವೂ ಬೆಲ್ಲ ಕಪ್ಪಾಗಿಯೇ ಉಳಿಯುವುದಿದೆ.

ಅಚ್ಚು ಕಟ್ಟದಿರುವುದಿದೆ. ಅಂಥಾ ಸಂದರ್ಭದಲ್ಲಿ ಅದು ಇನ್ನಷ್ಟು ಕಪ್ಪು ಪುಡಿಯಾಗುವಂತೆ ಬ್ಯಾಟರಿ ಸೆಲ್‌ನ ಪುಡಿಯನ್ನು ಬಳಸುವರು. ಇದು ಉತ್ಕೃಷ್ಟವಾದ ಮದ್ಯ (ಶರಾಬು) ತಯಾರಿಕೆಗೆ ಬಳಕೆಯಾಗುವುದು. ಮಧ್ಯ ಮಾರ್ಗದಲ್ಲಿ ಆನಂದೋತ್ಕಟತೆಗೆ ಮಾಧ್ಯಮವಾಗುವುದು.

ತಪ್ಪು ರೈತನದಲ್ಲ–ಗ್ರಾಹಕರದು : ಈ ಕಥೆ ಕೇಳುತ್ತಾ ಕೇಳುತ್ತಾ ನಿಮಗೆ ಬೆಲ್ಲದ ರೈತರ ಬಗ್ಗೆ ಎಲ್ಲಿಲ್ಲದ ಕೋಪ ಬಂದಿರಬಹುದು. ಇನ್ನು ಮುಂದೆ ಬೆಲ್ಲ ತಿನ್ನುವುದಿಲ್ಲ, ಸಕ್ಕರೆಯೇ ತಿನ್ನುತ್ತೇನೆ ಎಂದು ಪ್ರತಿಜ್ಞೆ ಮಾಡಿರಬಹುದು ಅಲ್ಲವೇ ?

ಆದರೆ ತಪ್ಪು ನಿಮ್ಮದು. ಗ್ರಾಹಕರದು ರೈತನದಲ್ಲ. ನೀವು ನಿಸರ್ಗದ ಗುಣವನ್ನು ಅರಿಯದಿರುವುದದಿಂದ, ಕಟ್ಟಡದ ಗುಣವನ್ನು, ಬಟ್ಟೆಯ ಬಣ್ಣಗಳನ್ನು ಪ್ರದರ್ಶನ ವಸ್ತುಗಳ ಸೌಂದರ್ಯವನ್ನು ಆಹಾರದಲ್ಲೂ ಆದ್ಯತೆಯಾಗಿ ಸ್ವೀಕರಿಸಿದ್ದರಿಂದ ನಿಮ್ಮನ್ನು ತೃಪ್ತಿಪಡಿಸಲು ಆತ ಒದ್ದಾಡುತ್ತಿದ್ದಾನೆಯೇ ಹೊರತು ಅದು ಅವನಿಗೆ ಅನಿವಾರ್ಯವೇನೂ ಅಲ್ಲ. (ಒಂದೊಂದು ರಾಸಾಯನಿಕವೂ ಆತನಿಗೆ ದುಬಾರಿಯೇ ಆಗಿದೆ.)


ಬಿಳಿ ಬೆಲ್ಲದ ಕೇಡು ರೈತ ಅರಿತಿದ್ದಾನೆ : ಬೆಲ್ಲದ ಕಾರ್ಖಾನೆಯಲ್ಲಿ ತಾನು ಉಪಯೋಗಿಸುವ ಬಣ್ಣ ವರ್ಧಕಗಳ ದೋಷಗಳನ್ನು ರೈತ ಅರಿತಿದ್ದಾನೆ. ಆದರೆ ಅರಿಯದಾದ ಗ್ರಾಹಕರಿಗೆ ಕಪ್ಪು ಬೆಲ್ಲ ಮಾರಲಾಗದೆ ಅಸಹಾಯಕನಾಗಿದ್ದಾನೆ. ಆತ ತನ್ನ ಸ್ವಂತಕ್ಕೆ ನೆಂಟರಿಷ್ಟರಿಗೆ ಕಪ್ಪು ಬೆಲ್ಲವನ್ನೇ ಇಂದಿಗೂ ತಯಾರಿಸುತ್ತಾನೆ. ಗಾಣ ಪ್ರಾರಂಭವಾದ ಮೊದಲಿಗೊಂದು ಪಾಕದ ಕೊನೆಯಲ್ಲಿ ಇನ್ನೊಂದು ಪಾಕಕ್ಕೆ ಕಪ್ಪು ಬೆಲ್ಲ ತಯಾರಿಸಿ ವರ್ಷಕ್ಕಾಗುವಷ್ಟು ಆತ ಸಂಗ್ರಹಿಸಿಡುತ್ತಾನೆ.

ಬೆಲ್ಲದಿಂದ ಸಕ್ಕರೆ ಎಡೆಗೆ ಸರಿದರೆ ನೀವು ಬಾಣಲೆಯಿಂದ ಬೆಂಕಿಗೆ ಬಿದ್ದಂತಾಗುತ್ತದೆಯೇ ಹೊರತು ಏನೂ ಸಾಧಿಸಿದಂತಾಗುವುದಿಲ್ಲ. ನಮ್ಮ ವಿದ್ಯೆ ನಮ್ಮನ್ನು ನಮ್ಮ ನಮ್ಮ ಆಹಾರ ವಸ್ತುಗಳನ್ನು ಅರಿಯುವಂತಿರಬೇಕು, ನಮ್ಮ ಆಹಾರಗಳನ್ನು ನಾವು ನಿರ್ಧರಿಸುವಂತಿರಬೇಕು. ಜಾಹೀರಾತಿನ ಜಾಡ್ಯ ಸರಿಯಬೇಕು. ನಮ್ಮ ಆಹಾರಗಳನ್ನು ನಾವು ಉತ್ಪಾದಿಸುವಂತಿರಬೇಕು. ನಮ್ಮ ಆಹಾರವನ್ನು ನಾವು ಪ್ರೀತಿಸಬೇಕು (ಮೋಹಿಸುವುದಲ್ಲ) ನಮ್ಮ ಆಹಾರ ಉತ್ಪಾದಕರನ್ನು, ರೈತರನ್ನು ನಾವು ಪ್ರೀತಿಸಲು ಕಲಿಯಬೇಕು.

"ಬೆಲ್ಲದ ಗಾಣಿಗ ತನ್ನ ಸ್ವಂತಕ್ಕೆ, ನೆಂಟರಿಷ್ಟರಿಗೆ ಕಪ್ಪು ಬೆಲ್ಲವನ್ನೇ ಇಂದಿಗೂ ತಯಾರಿಸುತ್ತಾನೆ" ಎಂಬ ಮಾತನ್ನು ಇನ್ನೊಮ್ಮೆ ಗಮನಿಸಿ. ಒಳೆಯ ವಸ್ತು ನಮಗೆ ಸಿಗಬೇಕಾದರೆ ಒಳ್ಳೆಯದರ

ಕುರಿತು ಅರಿಯಬೇಕಾದರೆ ನಮಗೆ ಆ ದೃಷ್ಟಿಯಿಂದ ನಮಗೆ ದಾಸರ ಅನುಭವ ಕುರಿತು ನೆಂಟಸ್ತಿಕೆ ಏರ್ಪಡಬೇಕು. ಈ ಕಾವ್ಯ ಸಹಕಾರಿಯಾಲಿ.

ಕಪ್ಪು ಎನ್ನಲು ಬೇಡವೋ
ಶರಧಿಯಾ ಜಲಕಪ್ಪು
ರುಚಿರ ಕೋಗಿಲೆ ಕಪ್ಪು
ಎಸೆವ ಕಸ್ತೂರಿ ಕಪ್ಪು
ಸ್ತ್ರೀಯರು ಕೊರಳೊಳು ಧರಿಸುವ ಕರಿಮಣಿ ಕಪ್ಪು
ಧರೆಯಲಿ ಶಾಲಿಗ್ರಾಮವೆಲ್ಲವು ಕಪ್ಪು
ಗುಲುಗಂಜಿಯ ಶಿರಕಪ್ಪು
ನಮ್ಮ ಪುರಂದರ ವಿಠಲ ಕಪ್ಪಿನಲಿ ಕಪ್ಪು



ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೆ!

ಜಿ. ಟಿ. ನಾರಾಯಣರಾವ್
೮, ಅತ್ರಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತೀಪುರ
ಮೈಸೂರು-೫೭೦೦೦೯

ಇಲ್ಲಿಯ ಯಾತ್ರಿಕ ಅನವರತ ಗತಿಶೀಲವಾಗಿರುವ ಕಾಲ. ಘಟನೆಗಳ ನಡುವಿನ ಅವಧಿಯೇ ಕಾಲ : ನಿನ್ನೆ ಸೂರ್ಯೋದಯವಾಯಿತು, ಇಂದು ಪುನಃ ಅದು ಸಂಭವಿಸಿತು ; ಇವು ಎರಡು ವಿವಿಕ್ತ ಘಟನೆಗಳು ; ಇವುಗಳ ನಡುವೆ ಏನೋ ಸಂದುಹೋದ ಅನುಭವ ನಮಗಾಯಿತು—ಇದೇ ಕಾಲ.

ಬಾಗಿಲು ಎಂದರೆ ಮನೆಯ ಒಳಗನ್ನೂ ಹೊರಗನ್ನೂ ಪ್ರತ್ಯೇಕಿಸುವ ಗಡಿ ಚಿಹ್ನೆ, ವ್ಯಕ್ತಿ ತನ್ನ ಅನುಕೂಲತೆಗೋಸ್ಕರ ಇಟ್ಟದ್ದು ಎಂದು ನಮಗೆ ತಿಳಿದಿದೆ. ಕಾಲರಾಯ ಪ್ರತಿನಿತ್ಯ ಇಂಥ ಒಂದೊಂದು ಬಾಗಿಲನ್ನು ದಾಟಿ ನಮ್ಮ ಮನದ ಮನೆಯೊಳಕ್ಕೆ ಪ್ರವೇಶಿಸುವುದು ಸರಿಯಷ್ಟೆ. ಈ ನಿರಂತರ ಏಕಗತಿಯ ಮತ್ತು ಏಕದಿಶೆಯ ಪರಿಶ್ರಮವನ್ನು ಸೂಚಿಸಲು ನಾವು ಕ್ಯಾಲೆಂಡರುಗಳನ್ನು (ದಿನಸೂಚಿ) ಗೊತ್ತಾದ ಒಂದು ಕ್ರಮದಲ್ಲಿ ರಚಿಸಿ ನಿತ್ಯ ಜೀವನದಲ್ಲಿ ಬಳಸುತ್ತೇವೆ.

ಆದ್ದರಿಂದ ಭಾರತ ಸ್ವತಂತ್ರ ರಾಷ್ಟ್ರವಾದದ್ದು ೧೫-೮-೧೯೪೭ರಂದು ಎನ್ನುವಾಗ, ಅದೇ ರೀತಿ ಪ್ರತಿ ವರ್ಷದ ಆಗಸ್ಟ್ ೧೫ರಂದು ಸ್ವಾತಂತ್ರ್ಯ ದಿನವನ್ನು ಆಚರಿಸುವಾಗ ಪ್ರಪಂಚಾದ್ಯಂತ ಎಲ್ಲೇ ಗೂ ಒಂದೇ ಅರ್ಥ ವಿಡಿಯುತ್ತದೆ. ಈಗ ೧೫-೮-೧೯೪೭ ಎಂಬ ಖಚಿತ ದಿನಾಂಕದಲ್ಲಿ ಮೂರು ವಿಭಿನ್ನ ಘಟಕಗಳಿವೆ. ಮೊದಲನೆಯದು ದಿನಸಂಖ್ಯೆ, ಎರಡನೆಯದು ತಿಂಗಳು ಸಂಖ್ಯೆ, ಮತ್ತು ಮೂರನೆಯದು ಇಸವಿ ಸಂಖ್ಯೆ.

ಈ ಸಂಖ್ಯೆಗಳು ಏನನ್ನು ಸೂಚಿಸುತ್ತವೆ? ಯಾವುದೋ ಒಂದು ನಿರ್ದಿಷ್ಟ ಘಟನೆ ಸಂಭವಿಸಿದ ಬಳಿಕ ೧೯೪೬ ಪೂರ್ತಿ ವರ್ಷಗಳೂ ೭ ಪೂರ್ತಿ ಮಾಸಗಳೂ ೧೪ ಪೂರ್ತಿ ದಿವಸಗಳೂ ಸಂದು ಹೋಗಿವೆ. ಈಗ ಸಲ್ಲುತ್ತಿರುವುದು ೧೯೪೭ ವರ್ಷಗಳೂ ೮ ತಿಂಗಳುಗಳೂ ೧೫ ದಿವಸಗಳೂ ತುಂಬಲಿರುವ ಅಥವಾ ಪೂರ್ತಿಆಗಲಿರುವ ವರ್ತಮಾನ. ೧೯೪೭ ಪೂರ್ತಿ ಆಗುವುದು ೩೧-೧೨-೧೯೪೭ ರಾತ್ರಿ ೨೪೦೦ ಗಂಟೆಗೆ ; ೮ ಪೂರ್ತಿ ಆಗುವುದು ೩೧-೮-೧೯೪೭ ರಾತ್ರಿ ೨೪೦೦ ಗಂಟೆಗೆ ; ಅಂತೆಯೇ ೧೫ ಪೂರ್ತಿ ಆಗುವುದು ೧೫-೮-೧೯೪೭ ರಾತ್ರಿ ೨೪೦೦ ಗಂಟೆಗೆ. ಈ ಸಂಪ್ರದಾಯವನ್ನು ಸ್ಪಷ್ಟವಾಗಿ ತಿಳಿದುಕೊಂಡ ಬಳಿಕ ಮುಂದಿನ ನಿರೂಪಣೆಯನ್ನು ಪರಿಶೀಲಿಸಬೇಕು : ಯಾವುದೇ ದಿನಾಂಕ ಸಂಖ್ಯೆ (ಉದಾಹರಣೆಗೆ ೧೫-೮-೧೯೪೭ ಅಥವಾ

೩೧-೧೨-೧೯೯೯)ಸೂಚಿಸುತ್ತವೆ ಆಯಾ ಘಟಕದಲ್ಲಿ (ಇಸವಿ, ತಿಂಗಳು, ದಿನ ಈ ಘಟಕಗಳು) ಪೂರ್ತಿ ಆಗಲಿರುವ ಭವಿಷ್ಯದಲ್ಲಿರುವ) ಸಂಖ್ಯೆ (ಅಥವಾ ಅದೇಯನ್ನು; ಪೂರ್ತಿ ಆದ ಸಂಖ್ಯೆಯನ್ನಲ್ಲ.

ಏಕಿಂಥ ಮಾನಸಿಕ ಕಸರತ್ತು? ನಾಗರಿಕ ಜೀವನದಲ್ಲಿ ಸುವ್ಯವಸ್ಥೆ ಕಾಪಾಡಲು ಮನುಕುಲ ಅನಾದಿ ಕಾಲದಿಂದಲೂ ಹಲವಾರು ಸಂಪ್ರದಾಯಗಳನ್ನುಪಾಲಿಸುತ್ತ ಬಂದಿದೆ. ಆ ಪೈಕಿ ದಿನಸೂಚಿಯೂ ಸೇರಿದೆ.

ಕಾಲಮಾಪನೆಗೆ ನಮಗೆ ನಿಸರ್ಗ ಕೊಟ್ಟಿರುವ ಬಳುವಳಿಗಳು ಮೂರು: ದಿವಸ, ವರ್ಷ ಮತ್ತು ಬುದ್ಧಿ. ೧ ವರ್ಷದಲ್ಲಿ ಋತುಗಳು ಪುನರಾವರ್ತಿಸುತ್ತವೆ, ಗಗನದಲ್ಲಿ ಸ್ಥಿರ ನಕ್ಷತ್ರ ಚಿತ್ರಗಳು ಅವೇ ನೆಲೆಗಳಲ್ಲಿ ಅದೇ ಕಾಲಕ್ಕೆ ಪ್ರಕಟವಾಗುತ್ತವೆ, ಮತ್ತು ಖುದ್ದು ವ್ಯಕ್ತಿಯಲ್ಲಿಯೂ ಪರಿಸರದಲ್ಲಿಯೂ ಅನೇಕ ವ್ಯತ್ಯಯಗಳು ಸಂಭವಿಸಿರುತ್ತವೆ. ೧ ವರ್ಷದಲ್ಲಿ ಸುಮಾರು ೩೬೫ ದಿವಸಗಳಿವೆಯೆಂದೂ ೧ ದಿವಸದಲ್ಲಿ ಒಂದು ಜೊತೆ ಕ್ರಮಾಗತ ಇರುಳು-ಹಗಲು ಸೇರಿವೆಯೆಂದೂ ಬುದ್ಧಿ ಗುರುತಿಸುತ್ತದೆ.

ವ್ಯಕ್ತಿಯ ಆಯುಷ್ಯದ ಗರಿಷ್ಠಮಿತಿ ೧೦೦ ವರ್ಷಗಳು ಎಂದು ಅನುಭವದಿಂದ ತಿಳಿಯಿತು. ಹೀಗೆ ಶತಮಾನಕ್ಕೆ (=೧೦೦ ವರ್ಷಗಳ ಗುಂಪು) ಪ್ರಾಮುಖ್ಯ ಬಂದಿತು. ವಿವಿಧ ನಾಗರಿಕತೆಗಳ ಮುನ್ನೋಟ ಗಮನಿಸಿದಾಗ ಸಹಸ್ರಮಾನವನ್ನೂ (=೧೦೦೦ ವರ್ಷಗಳ ಗುಂಪು) ಪರಿಗಣಿಸ ಬೇಕಾಯಿತು. ಹೀಗೆ ೧ನೆಯ, ೨ನೆಯ, ೩ನೆಯ, ಇತ್ಯಾದಿ, ಶತಮಾನಗಳೂ ಸಹಸ್ರಮಾನಗಳೂ ರೂಢಿಗೆ ಬಂದುವು.

ಇಂಥ ಎಲ್ಲ ವಿವರಗಳೂ ದಿನಸೂಚಿಯಲ್ಲಿ (ಕ್ಯಾಲೆಂಡರ್) ದೊರೆಯುತ್ತವೆ. ಆದರೆ ಈ ಮನುಷ್ಯಕೃತ ಏರ್ಪಾಡಿನಲ್ಲಿ (ನಿಸರ್ಗದತ್ತವಲ್ಲ ಎಂದು ಅರ್ಥ) ಏಕತೆ ಇರಲಿಲ್ಲ. ನಾಗರಿಕತೆಗಳು ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ಕ್ರಮೇಣ ವಿಕಸಿಸಿ ಪ್ರವರ್ಧಿಸಿದಂತೆ ಆಯಾ ಜನರ ಆಶಯ ಆವಶ್ಯಕತೆಗಳಿಗೆ ಅನುಗುಣವಾಗಿ ವಿಭಿನ್ನ ದಿನಸೂಚಿಗಳು ಬೆಳೆದು ಜನಜೀವನದ ಅವಿಭಾಜ್ಯ ಅಂಗಗಳಾದುವು. ಅಂದಿಗೆ ಅದು ಸಹಜ ಮತ್ತು ಸರಿ. ಆದರೆ ಎಂದೆಂದಿಗೂ ಅಲ್ಲ!

ಕ್ರಿಸ್ತಶಕ ೧೬ನೆಯ ಶತಮಾನದ ವೇಳೆಗೆ ಯೂರೋಪ್ ಖಂಡವು ದಿನಸೂಚಿಗಳ ದೈವಿಕ ಅರಾಜಕತೆಯಲ್ಲಿ ಸಿಕ್ಕಿ ತೊಳಲುತ್ತಿತ್ತು. ಕೈಗಾರಿಕಾ ಕ್ರಾಂತಿ, ಪುನರುಜ್ಜೀವನ, ವ್ಯಾಪಾರ ವಾಣಿಜ್ಯ ಪ್ರವರ್ಧನೆ, ಪ್ರಪಂಚ ಪರ್ಯಟನೆ ಮುಂತಾದವುಗಳ ಕಾರಣವಾಗಿ ಪ್ರಪಂಚದ ವ್ಯಾಪ್ತಿ ಸಂಕೋಚಿಸಿತ್ತು. ಅಂದರೆ ನಾಗರಿಕತೆಗಳ ನಡುವೆ ಸಂಪರ್ಕ, ಸಂವಹನ ಅಂತೆಯೇ ಸಂಧಾನ, ಸಂಘರ್ಷ ನಿತ್ಯ ಘಟನೆಗಳಾಗಿದ್ದುವು.


ಆ ತುಮುಲದ ಅಥವಾ ವಿಪ್ಲವದ ದಿನಗಳಂದು ದಿನಸೂಚಿಗಳಲ್ಲಿ ಏಕರೂಪತೆ ತರುವುದು ಅನಿವಾರ್ಯ ಆವಶ್ಯಕತೆ ಎನ್ನಿಸಿತು. ಇಂಥ ಒಂದು ಅಂತಾರಾಷ್ಟ್ರೀಯ ವ್ಯವಸ್ಥೆಯನ್ನು ವಿಧಿಸಿ ಆಚರಣೆಗೆ ತರುವಲ್ಲಿ ರೋಮನ್ ಚರ್ಚ್‌ನ ಧರ್ಮಗುರು ಪೋಪ್ ಗ್ರೆಗೊರಿ (೧೫೦೨-೮೫) ಐತಿಹಾಸಿಕ ಪಾತ್ರ ವಹಿಸಿದರು. ಧಾರ್ಮಿಕ

ಮುಖಂಡತ್ವ, ವೈಜ್ಞಾನಿಕ ಚಿಂತನೆ ಮತ್ತು ಸಾರ್ವಜನಿಕ ಗೌರವಗಳ ಅಪೂರ್ವ ಮಿಲನ ಇವರ ವ್ಯಕ್ತಿತ್ವ.

ಆಗ ಪ್ರಚಲಿತವಿದ್ದ ಅಸಂಖ್ಯ ದಿನಸೂಚಿಗಳನ್ನು ಇವರು ಪರಿಶೀಲಿಸಿದರು—ಇವು ಸಾಂಸ್ಕೃತಿಕ ಮಹತ್ತ್ವ ಇದ್ದಂಥವು. ಏಕರೂಪತೆಯ ಅನಿವಾರ್ಯತೆಯನ್ನು ಮನಗಂಡರು–ಇದು ವಾಣಿಜ್ಯ ವ್ಯವಹಾರಗಳಿಗೆ ಅವಶ್ಯವಾಗಿತ್ತು. ಖಗೋಳ ವಿಜ್ಞಾನದ ಅಂದರೆ ನಿಸರ್ಗದ ನಿಯಮಗಳನ್ನು ಪರಿಗಣಿಸಿದರು. ವಿಜ್ಞಾನದ ಮುದ್ರೆ ಇರದ ಯಾವ ಸುಧಾರಣೆಯೂ ದೀರ್ಘಕಾಲ ಉಳಿಯದು. ವರ್ಷದಲ್ಲಿ ೧೨ ತಿಂಗಳುಗಳು ಸರಿಯಾದ ಅಳತೆ–ಸುಮಾರು, ೧೨ ಅಮಾವಾಸ್ಯೆ ಅಥವಾ ಹುಣ್ಣಿಮೆಗಳು ಸಂಭವಿಸುವ ಅವಧಿ ಇದು. ತಿಂಗಳುಗಳ ಹೆಸರು ಮತ್ತು ಅವಧಿ ಕುರಿತಂತೆ ಐತಿಹಾಸಿಕ ಸಂಗತಿಗಳನ್ನು ವಿಮರ್ಶಿಸಿದರು.

ಫಲವಾಗಿ ೧೫೮೨ರಲ್ಲಿ ಅವರು ನೂತನ ಅಂತಾರಾಷ್ಟ್ರೀಯ ದಿನಸೂಚಿಯನ್ನು ಚಲಾವಣೆಗೆ ತಂದರು. ಹೀಗೆ ಮಾಡುವಾಗ ಅವರು ದಿನಸೂಚಿಯಿಂದ ೧೦ ದಿವಸಗಳನ್ನು ರದ್ದುಗೊಳಿಸಬೇಕಾಯಿತು. ಅಂದರೆ ಇಂದು ದಿನಾಂಕ ೧ ಎಂದಾದರೆ ನಾಳೆ ದಿನಾಂಕ ೧೨ ಆಗಬೇಕು! ದಿನಸೂಚಿಯಲ್ಲಿಯ ಈ ಸುಧಾರಣೆಯಿಂದ ವಾಸ್ತವತೆಗೆ (ಅಂದರೆ ಕಾಲದ ಪ್ರವಹನಕ್ಕೆ) ಏನೂ ಭಂಗವಿಲ್ಲ, ಆದರೆ ಮನುಷ್ಯನ ದೈನಂದಿನ ವ್ಯವಹಾರಗಳಿಗೆ ಅಪರಿಮಿತ ಅನುಕೂಲತೆ ಉಂಟು. ತರುವಾಯದ ವರ್ಷಗಳಲ್ಲಿ ಇದು ಗ್ರೆಗೊರಿಯನ್ (ಅಥವಾ ಕ್ರಿಶ್ಚಿಯನ್) ದಿನಸೂಚಿ ಎಂದು ಚಲಾವಣೆಗೆ ಬಂದಿತು. ಗ್ರೇಟ್ ಬ್ರಿಟನ್ ಮತ್ತು ಅಮೆರಿಕದ ವಸಾಹತುಗಳಲ್ಲಿ ಗ್ರೆಗೊರಿಯನ್ ದಿನಸೂಚಿ ಪ್ರಚಾರಕ್ಕೆ ಬಂದದ್ದು ೧೭೫೨ರಷ್ಟು ತಡವಾಗಿ! ಸಾಕ್ಷಾತ್ ಸಂತವಾಣಿಯಾದರೂ ಪ್ರಸ್ತುತವಾಗುವುದು ಆತನ ಅನಂತರವೇ ಅಲ್ಲವೇ ? ವರ್ತಮಾನ ಅಂಧಕಾರ ಭಿತ್ತಿಗಳು ಅಭೇದ್ಯ ಸಾಂದ್ರತೆಯವಾಗಿರುವುದೇ ಇದರ ಕಾರಣ.

ಗ್ರೇಗೊರಿಯನ್ ದಿನಸೂಚಿಯನ್ನು ಆಧರಿಸಿ ಭೂತಕಾಲವನ್ನು ಗುರುತಿಸಲಾಯಿತು: ೧೫೮೨, ೧೫೮೧, ೧೫೮೦ ಹೀಗೆ ಸಾಗುವಾಗ ಕೊನೆಗೆ ೦ ತಲಪಬೇಕು, ಮತ್ತೂ ಹಿಂದಕ್ಕೆ ಸರಿದರೆ ಋಣ ಸಂಖ್ಯೆಗಳು ಬರಬೇಕು ಎಂಬುದು ನಿಮ್ಮ ನಿರೀಕ್ಷೆ. ಆದರೆ ಈ ಕಾಲಮಾಪನೆಯಲ್ಲಿ ಸೊನ್ನೆಗೆ ನೆಲೆಯಿಲ್ಲ. ಇದು ಅಂಗೀಕೃತ ಸಂಪ್ರದಾಯ



ಚಿತ್ರದಲ್ಲಿ AB ಸರಳರೇಖೆಯು ಕಾಲದ ಏಕದಿಶಾ ಪ್ರವಾಹವನ್ನು ಸೂಚಿಸುತ್ತದೆ. ಇದರಲ್ಲಿ ನಾವು ನಮ್ಮ ಸೌಕರ್ಯಾರ್ಥ PQ, QR ಮುಂತಾದ ಸಮ ಖಂಡಗಳನ್ನು ಗುರುತಿಸುತ್ತೇವೆ. ಆಯಾ ಅಕ್ಷರದ ಮೇಲೆ ಗುರುತಿಸಿರುವ ಸಂಖ್ಯೆಯನ್ನು ಗಮನಿಸಬೇಕು: ಋಣ ಚಿಹ್ನೆಗಳು ಕ್ರಿಸ್ತಪೂರ್ವ ಕಾಲವನ್ನು ಪ್ರತಿನಿಧಿಸುತ್ತವೆ.

ಇವನ್ನು ಓದುವ ಕ್ರಮ: Pಯಿಂದ Q ವರೆಗೆ ಕ್ರಿಸ್ತಪೂರ್ವ ೩ನೆಯ ಶತಮಾನ (ಹಿಂದೆ ವಿವರಿಸಿರುವ 'ಪೂರ್ತಿ ಆಗಲಿರುವ ಸಂಖ್ಯೆ ಗಮನಿಸಿ') Qನಿಂದ Rನವರೆಗೆ ಕ್ರಿ. ಪೂ. ೨ನೆಯ ಶತಮಾನ, Rನಿಂದ Sವರೆಗೆ ಕ್ರಿ.ಪೂ. ೧ನೆಯ ಶತಮಾನ, Sನಿಂದ Tವರೆಗೆ ಕ್ರಿಸ್ತಶಕ ೧ನೆಯ ಶತಮಾನ ಇತ್ಯಾದಿ ಸಲ್ಲುತ್ತವೆ (ಶತಮಾನದ ಬದಲು ಸಹಸ್ರಮಾನವೆಂದು ಕೂಡ ಓದಬಹುದು).

ಅಂದಮೇಲೆ ೧೯೪೭ ಎಂಬ ಇಸವಿ ಸಂಖ್ಯೆಯಲ್ಲಿಯ ೧ (ಇದು ಸಾವಿರದ ಸ್ಥಾನದಲ್ಲಿದೆ) ಈ ವರ್ಷವು ೨ನೆಯ ('ಪೂರ್ತಿ ಆಗಲಿರುವ ಸಂಖ್ಯೆ') ಸಹಸ್ರಮಾನದಲ್ಲಿ ಇದೆಯೆಂದೂ ೧೯ (ನೂರರ ಸ್ಥಾನದಲ್ಲಿದೆ) ಇದು ೨೦ನೆಯ ಶತಮಾನದಲ್ಲಿದೆಯೆಂದೂ ಸೂಚಿಸುತ್ತವೆ. ಹಾಗಾದರೆ ೧೯೦೦? ಖಚಿತವಾಗಿಯೂ ಇದು ಕೂಡ ೨ನೆಯ ಸಹಸ್ರಮಾನದಲ್ಲಿ ಮತ್ತು ೨೦ನೆಯ ಶತಮಾನದಲ್ಲಿದೆ. ಸರಿ ಇಸವಿ ೨೦೦೦? ಇದು ೩ ನೆಯ ಸಹಸ್ರಮಾನದಲ್ಲಿ ಮತ್ತು ೨೧ನೆಯ ಶತಮಾನದಲ್ಲಿ ಇರತಕ್ಕದ್ದು—ಪ್ರಚಲಿತ ಸಂಪ್ರದಾಯ ಪ್ರಕಾರ. ಆದ್ದರಿಂದ ಕ್ರಿಸ್ತಶಕ ೧ನೆಯ ಸಹಸ್ರಮಾನ ೧-೧-೦೦೦೧ ಮುಂಜಾನೆ ೦೦೦೦ ಗಂಟೆಗೆ ಆರಂಭವಾಗಿ ೩೧-೧೨-೦೯೯೯ ರಾತ್ರಿ ೨೪೦೦ ಗಂಟೆಗೆ ಕೊನೆಗೊಂಡಿತು; ೨ ನೆಯದು ೧-೧-೧೦೦೦ ಮುಂಜಾನೆ ೦೦೦೦ ಗಂಟೆಗೆ ತೊಡಗಿ ೩೧-೧೨-೧೯೯೯ ರಾತ್ರಿ ೨೪೦೦ ಗಂಟೆಗೆ ಮುಗಿಯಲಿದೆ. ಎಂದೇ ೩ನೆಯ ಸಹಸ್ರಮಾನ ೧-೧-೨೦೦೦ ಮುಂಜಾನೆ ೦೦೦೦ ಗಂಟೆಗೆ ರಂಗಪ್ರವೇಶಿಸಲಿದೆ—ಬಾಗಿಲೊಳು ಕೈಮುಗಿದು ಒಳಗೆ ಬರಲಿದೆ.

ಈ ಮನುಷ್ಯಕೃತ ಕಾಲಮಾಪನಕ್ರಮದಲ್ಲಿ ಒಂದು ತಾರ್ಕಿಕ ದೋಷವಿದೆ: ಕ್ರಿಸ್ತಶಕ ೧ನೆಯ ಶತಮಾನದಲ್ಲಿ ೯೯ ವರ್ಷಗಳೂ ೧ನೆಯ ಸಹಸ್ರಮಾನದಲ್ಲಿ ೯೯೯ ವರ್ಷಗಳೂ ಇರುತ್ತವೆ. ಆದರೆ ಇಂದು ಈ ದೋಷ ನಮ್ಮನ್ನು ಬಾಧಿಸಬೇಕಾಗಿಲ್ಲ. ಇದನ್ನು ನಿವಾರಿಸಹೋದರೆ ೨ನೆಯ ಸಹಸ್ರಮಾನ ಮತ್ತು ೨೦ನೆಯ ಶತಮಾನ ೩೧-೧೨-೨೦೦೦ ರಾತ್ರಿ ೨೪೦೦ ಗಂಟೆಗೆ ಕೊನೆಗೊಳ್ಳುವುವು ಎಂದು ಅಂಗೀಕರಿಸಬೇಕಾಗುತ್ತದೆ. ಆದರೆ ಈ ಏರ್ಪಾಡಿನಲ್ಲಿ ಸೌಂದರ್ಯವಿಲ್ಲ. ತರ್ಕ ಮತ್ತು ಸೌಂದರ್ಯ ವಿರುದ್ಧ ಪಕ್ಷಗಳಲ್ಲಿದ್ದರೆ ಸೌಂದರ್ಯವನ್ನು ಪುರಸ್ಕರಿಸುವವರು ಬೆಳೆಯುತ್ತಾರೆ, ಪ್ರಸ್ತುತರಾಗುತ್ತಾರೆ; ತರ್ಕವನ್ನು ಬೆಂಬಲಿಸುವವರು ಕೊಳೆಯುತ್ತಾರೆ, ಪಳೆಯುಳಿಕೆಗಳಾಗುತ್ತಾರೆ!

ಆದ್ದರಿಂದ ೨ನೆಯ ಸಹಸ್ರಮಾನ ಮತ್ತು ೨೦ನೆಯ ಶತಮಾನದ ಕೊನೆಯ ದಿನ ೩೧-೧೨-೧೯೯೯ ರಂದು ಮಲಗಿ ೩ನೆಯ ಸಹಸ್ರಮಾನ ಮತ್ತು ೨೧ ನೆಯ ಶತಮಾನದ ಮೊದಲ ದಿನ ೧-೧-೨೦೦೦

ದೆಂದು ಎದ್ದು ನವ ಶಕ ಪ್ರವರ್ತಿಸುವ ಭಾಗ್ಯ ನಮ್ಮದಾಗಲಿ!

ಇಸವಿ ೨೦೦೦ ಫೆಬ್ರುವರಿಯಲ್ಲಿ ೨೯ ದಿವಸಗಳಿರುವುವು—ಇದು ಅಧಿಕ ವರ್ಷ. ಇಲ್ಲಿಯು ನಿಯಮವಿದು: ಶತಮಾನ ಸಂಖ್ಯೆಗಳಲ್ಲದ ಇಸವಿ ಸಂಖ್ಯೆಗಳು ೪ರಿಂದ ಭಾಗವಾದಾಗ ಮಾತ್ರ ಅಧಿಕ ವರ್ಷಗಳಾಗುತ್ತವೆ. ಉದಾಹರಣೆಗೆ ೧೯೪೦, ೧೯೪೪, ೧೯೪೮ ಅಂತೆಯೇ ೧೮೯೨, ೧೮೯೬, ೧೯೦೪ ಎಲ್ಲವೂ ಅಧಿಕ ವರ್ಷಗಳು. ಶತಮಾನಗಳನ್ನು ಸೂಚಿಸುವ ಇಸವಿ ಸಂಖ್ಯೆಗಳು ೪೦೦ರಿಂದ (೪ರಿಂದ ಅಲ್ಲ) ಭಾಗವಾದರೆ ಮಾತ್ರ ಅವು ಅಧಿಕ ವರ್ಷಗಳಾಗುತ್ತವೆ. ಆದ್ದರಿಂದ ೧೨೦೦, ೧೬೦೦, ೨೦೦೦, ೨೪೦೦ ಮುಂತಾದವು ಅಧಿಕ ವರ್ಷಗಳು; ೧೩೦೦, ೧೪೦೦, ೧೫೦೦, ೧೭೦೦, ೧೮೦೦, ೧೯೦೦ ಮುಂತಾದವು ಅಧಿಕ ವರ್ಷಗಳಲ್ಲ.

ಸ್ವಾಮಿ ದಯಾನಂದ ಸರಸ್ವತಿಯವರ ಸಾಮಾಜಿಕ ಕಳಕಳಿ

ಎಂ. ಪಿ. ರಮೇಶ್
ಸಂಶೋಧನಾ ಸಹಾಯಕ
ಪ್ರಸಾರಾಂಗ
ಮಾನಸಗಂಗೋತ್ರಿ, ಮೈಸೂರು–೫೭೦೦೦೬

ದಯಾನಂದ ಸರಸ್ವತಿಯವರು ಹತ್ತೊಂಬತ್ತನೆ ಶತಮಾನದ ಮಹಾನ್ ಸಾಮಾಜಿಕ ಚಿಂತಕರು. ಪ್ರಸಿದ್ಧ ಸಮಾಜ ಸುಧಾರಕರು. ದಯಾನಂದರು ಗುಜರಾತಿನ ಟಂಕರಾ ಎಂಬ ಊರಿನಲ್ಲಿ ೧೮೨೪ರಲ್ಲಿ ಹುಟ್ಟಿದರು. ಇವರ ತಂದೆ ಕರ್ಷನ್ ಜೀ ಲಾಲ್ ಜೀ ತಿವಾರಿ, ತಾಯಿ ಅಮೃತಬಾಯಿ. ಇವರನ್ನು ಬಾಲ್ಯದಲ್ಲಿ ಮೂಲಶಂಕರ, ದಯಾರಾಮ ಎಂಬ ಹೆಸರುಗಳಿಂದ ಕರೆಯುತ್ತಿದ್ದರು. ಇವರು ಚಿಕ್ಕವರಾಗಿದ್ದಾಗಲೆ ಯಜುರ್ವೇದವನ್ನು ಬಾಯಿಪಾಠ ಮಾಡಿಕೊಂಡಿದ್ದರು.

ಆರ್ಯ ಸಮಾಜದ ಸ್ಥಾಪಕರಿವರು. ಇವರನ್ನು ನವಯುಗದ ನಿರ್ಮಾಪಕರೆಂದು ಕರೆಯುತ್ತಿದ್ದರು. ಮಹರ್ಷಿಗಳೆಂದೇ ಅವರು ಪ್ರಖ್ಯಾತರಾಗಿದ್ದರು. ಅವರು ಬಹು ದೊಡ್ಡ ಚಿಂತಕರೂ ವಿಚಾರವಾದಿಗಳೂ ವಿದ್ವಾಂಸರೂ ಹೌದು. ವೇದಗಳ ಹಿರಿಮೆಯನ್ನು ಜಗತ್ತಿಗೆ ಸಾರಿದರು. ದೇಶದಲ್ಲೆಲ್ಲ ವೈದಿಕ ಧರ್ಮದ ಪ್ರಚಾರಕ್ಕಾಗಿ ದುಡಿದರು. ಸಮಾಜದಲ್ಲಿ ನಡೆಯುತ್ತಿದ್ದ ಹಲವಾರು ಶೋಷಣೆಗಳನ್ನು ತೊಡೆದುಹಾಕಲು ನಿರಂತರ ಹೋರಾಟ ಮಾಡಿದರು. ದಯಾನಂದರು ವೇದಗಳಿಗೆ ಹಿಂದಿರುಗಿ ಎಂಬ ಕರೆಯನ್ನು ಕೊಟ್ಟರು. ವೇದಗಳಲ್ಲಿ ಎಲ್ಲಾ ಜ್ಞಾನವು ಅಡಗಿದೆ. ವೇದಗಳನ್ನು ಬಿಟ್ಟು ನಾವು ಬದುಕಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಸ್ತ್ರೀಯರು ಮತ್ತು ಶೂದ್ರರೆಲ್ಲರು ವೇದಾಧ್ಯಯನಕ್ಕೆ ಅರ್ಹರೆಂದು ಸಾರಿದರು ಮತ್ತು ಎಲ್ಲಾ ದಾನಕ್ಕಿಂತ ವಿದ್ಯಾದಾನ ಸರ್ವಶ್ರೇಷ್ಠವೆಂದು ತಿಳಿಸಿದರು.

ದಯಾನಂದರು ಹಲವಾರು ಸಾಮಾಜಿಕ ತೊಡಕುಗಳನ್ನು ತೊಡೆದುಹಾಕಲು ಶ್ರಮ ವಹಿಸಿದರು. ಸತಿಸಹಗಮನ ಪದ್ಧತಿ, ಬಾಲ್ಯ ವಿವಾಹ, ಹಲವು ಮೂಢನಂಬಿಕೆಯ ಆಚಾರ ಪದ್ಧತಿಗಳ ನಿರ್ಮೂಲನ ಮುಖ್ಯವಾದವು.

೧. ಸಹಗಮನ ಪದ್ಧತಿಯನ್ನು ಖಂಡಿಸಿದರು :

ಸಮಾಜ ಸುಧಾರಣೆಯ ಇತಿಹಾಸದಲ್ಲಿ ದಯಾನಂದ ಸರಸ್ವತಿಯವರ ಹೆಸರು

ಅಜರಾಮರವಾಗಿ ಉಳಿಯುತ್ತದೆ. ಹಿಂದೂ ಸಮಾಜದಲ್ಲಿದ್ದ ದುಷ್ಟಪದ್ಧತಿಗಳು ವಿರುದ್ಧ ಸತತವಾಗಿ ಚಳುವಳಿ ನಡೆಸಿದರು. ಅಂದಿನ ಕಾಲದಲ್ಲಿ ಸ್ತ್ರೀಯರ ಸ್ಥಾನಮಾನಗಳು ತುಂಬಾ ಶೋಚನೀಯ ಸ್ಥಿತಿಯಲ್ಲಿದ್ದುವು. ಹೆಣ್ಣು ಶಿಶುಗಳನ್ನು ನದಿಗೆ ಎಸೆಯುವುದರಿಂದ ಹಿಡಿದು ವಿಧವೆಯಾದ ಹೆಣ್ಣನ್ನು ಸತ್ತ ಗಂಡನ ಜೊತೆಯಲ್ಲಿ ಜೀವಂತವಾಗಿ ಸುಡುವವರೆಗೂ ನಡೆದಿತ್ತು. ಪುರುಷರೊಡನೆ ಸಮಾನ ಸ್ಥಾನಮಾನಗಳನ್ನು ದೊರಕಿಸಿಕೊಡುವ ಸದುದ್ದೇಶದಿಂದ ದಯಾನಂದರು ದಿಟ್ಟ ಹೋರಾಟ ನಡೆಸಿದರು.

ಗಂಡ ಸತ್ತ ನಂತರ ವಿಧವೆಗೆ ಸ್ವರ್ಗ ಲಭಿಸಬೇಕಾದರೆ ವಿಧವೆಯನ್ನು ಅವಳ ಗಂಡನ ಶವದ ಜೊತೆಗೆ ಜೀವಂತವಾಗಿ ಚಿತೆಗೇರಿಸಬೇಕು. ಇದರಿಂದ ಅವಳಿಗೆ ಗಂಡನ ಜೊತೆ ಸ್ವರ್ಗ ಲಭಿಸುವುದೆಂದು ಮತಾಂಧರು ತಿಳಿದಿದ್ದರು. ಅವಳು ಅದನ್ನು ವಿರೋಧಿಸಿದರೂ ಅದನ್ನು ಲೆಕ್ಕಿಸದೆ ಮತ್ತೇರುವ ಔಷಧಿ ಅಥವಾ ಪಾನೀಯವನ್ನು ಕೊಟ್ಟು ಆಕೆಗೆ ಜ್ಞಾನ ತಪ್ಪುವಂತೆ ಮಾಡಿ ಅವಳನ್ನು ಗಂಡನ ಶವದ ಜೊತೆಯಲ್ಲೆ ಹಗ್ಗದಿಂದ ಬಿಗಿದು, ಅವಳ ಕೂಗು ಕೇಳುತ್ತದೆಂದು ಸುತ್ತಮುತ್ತ ಇದ್ದವರೆಲ್ಲಾ ಶಂಖ, ಜಾಗಟೆಗಳ ಮೂಲಕ ಶಬ್ದವನ್ನು ಮಾಡುತ್ತಿದ್ದರು.

ಅನಂತರ ಅವಳನ್ನು ದೇವಿಯೆಂದು ಕರೆದು, ದೇವಸ್ಥಾನಗಳನ್ನು ಕಟ್ಟಿ ಪೂಜಿಸುವ ವ್ಯವಸ್ಥೆಯನ್ನು ಕಾಣಬಹುದಾಗಿತ್ತು. ಇಂಥ ಘೋರವಾದ ಪದ್ಧತಿಯನ್ನು ಹೊಡೆದು ಹಾಕಲು ದಯಾನಂದರು ಹೋರಾಡಿದರು. ಜೀವಂತ ದೇವಿಯನ್ನು ಸುಡುವ ಕಲ್ಲಮೂರ್ತಿಯನ್ನು ಪೂಜಿಸುವ ಈ ಡಾಂಭಿಕತೆಗೆ ದಯಾನಂದರು ಕುಠಾರಸ್ವರೂಪರಾದರು.

೨. ಬಾಲ್ಯವಿವಾಹವನ್ನು ವಿರೋಧಿಸಿದರು :

ಹಿಂದೂ ಧರ್ಮದಲ್ಲಿ ಶಿಶುಗಳಿಗೆ ಬಾಲ್ಯಾವಸ್ಥೆಯಲ್ಲ ವಿವಾಹವನ್ನು ಮಾಡುತ್ತಿದ್ದರು. ಇದೊಂದು ಕ್ರೂರ ಪದ್ಧತಿಯಾಗಿತ್ತು. ಏನೂ ತಿಳಿಯದ ಮಕ್ಕಳಿಗೆ ವಿವಾಹ ಮಾಡಿ ಅವರನ್ನು ಸತಿಪತಿಗಳೆಂದು ಕರೆಯುತ್ತಿದ್ದರು. ಇದರಿಂದ ಸ್ತ್ರೀಯು ಬಾಲ್ಯದಲ್ಲಿಯೇ ಗರ್ಭವತಿಯಾಗಿ ಅನೇಕ ದೈಹಿಕ ಮತ್ತು ಮಾನಸಿಕ ತೊಂದರೆಗಳನ್ನು ಅನುಭವಿಸುತ್ತಿದ್ದಳು. ಅನೇಕ ವೇಳೆ ಮರಣವನ್ನು ಹೊಂದುತ್ತಿದ್ದಳು. ಅವಳ ಪತಿಯು ಸಾವನ್ನಪ್ಪಿದಾಗ ಅವಳು ವಿಧವೆಯಾಗಿ ಬರಿಹಣೆ ಹೊತ್ತು, ಏನನ್ನೂ ಶೃಂಗರಿಸಿಕೊಳ್ಳದೇ, ಕೆಂಪು ಸೀರೆಯನ್ನುಟ್ಟು ಮನೆಯ ಮೂಲೆಯಲ್ಲಿ ಬಿದ್ದಿರಬೇಕಾಗಿತ್ತು. ಅನೇಕ ಶುಭ ಸಮಾರಂಭಕ್ಕೆ ಹೋಗುವುದಕ್ಕೆ ಅವಕಾಶವಿರಲಿಲ್ಲ. ಅವಳು ಬದುಕಿರುವವರೆಗೂ ಕಣ್ತುಂಬ ನೀರನ್ನೆ ತುಂಬಿಕೊಂಡು ಮನಸ್ಸಿನಲ್ಲಿ ಸಹಜವಾಗಿ ಬರುವ ಆಶೆಗಳನ್ನು ನುಂಗುತ್ತಾ ಸತ್ತ ಗಂಡನನ್ನು ಮನದಲ್ಲಿಯೇ ನೆನೆದು ಜೀವನವನ್ನು ಮಾಡಬೇಕಾಗಿತ್ತು. ಅವಳು ಸಾಯುವ ತನಕ ನರಕಯಾತನೆಯನ್ನು ಅನುಭವಿಸಬೇಕಾಗಿತ್ತು. ಇದರಿಂದ ಸಮಾಜಕ್ಕಾಗುವ ಅನನುಕೂಲತೆಗಳನ್ನು ನಿರ್ಮೂಲನ ಮಾಡಲು ದಯಾನಂದರು

ಶ್ರಮಿಸಿದರು. ದಯೆಯೇ ನಿಜಧರ್ಮದ ಮೂಲವಲ್ಲವೇ ?

೩. ಮೂರ್ತಿ ಪೂಜೆಯನ್ನು ನಿರಾಕರಿಸಿದರು.

ದಯಾನಂದರು ಚಿಕ್ಕವರಾಗಿದ್ದಾಗ ಒಂದು ಘಟನೆ ನಡೆಯಿತು. ದೇವಾಲಯದಲ್ಲಿ ರಾತ್ರಿಯಲ್ಲಿ ಶಿವನ ಪೂಜೆಯು ವೈಭವದಿಂದ ನಡೆಯುತ್ತಿತ್ತು. ಮಧ್ಯ ರಾತ್ರಿಯೊಳಗೆ ಇದ್ದವರೆಲ್ಲ ಮಲಗಿದರು, ದಯಾನಂದರು ಒಬ್ಬರೆ ಕುಳಿತಿದ್ದರು. ಒಂದು ಸಲ ಶಿವಲಿಂಗವನ್ನು ನೋಡಿದರು. ಅಲ್ಲಿ ಶಿವಲಿಂಗಕ್ಕೆ ಮಾಡಿದ ನೈವೇದ್ಯವನ್ನು ಹಲವಾರು ಇಲಿಗಳು ತಿಂದು ಕುಣಿದಾಡುತ್ತಿದ್ದವು. ಲಿಂಗದ ಮೇಲೆರಗಿ ಹೊಲಸನ್ನು ಹರಡುತ್ತಿದ್ದವು. ಇದನ್ನು ನೋಡಿ ದಯಾನಂದರಿಗೆ ಆಶ್ಚರ್ಯವಾಯಿತು. ಇದು ಕಲ್ಲಿನ ಲಿಂಗ ಮೂರ್ತಿ ಪೂಜೆಯಿಂದ ಯಾವುದೇ ರೀತಿಯ ಉಪಯೋಗ ಆಗುವುದಿಲ್ಲ ಎಂಬುದನ್ನು ಅರಿತುಕೊಂಡರು.

ಕಲ್ಲನಾಗನಿಗೆ ಪೂಜೆ, ದಿಟದ ನಾಗನಿಗೆ ಕಲ್ಲು—ಡಾಂಭಿಕದ ಈ ನಡತೆಯನ್ನು ಶಿವ ಮೆಚ್ಚುವನೇ!

ಇವರ ಪ್ರಕಾರ ಮೂರ್ತಿಪೂಜೆಯೆಂದರೆ ಆದರ, ಸತ್ಕಾರ, ಸದ್ವಿನಿಯೋಗ, ಪ್ರತಿಮೆ ವಿಗ್ರಹಗಳು ಜಡವಸ್ತುಗಳಾಗಿವೆ, ಅವುಗಳಿರುವುದಿಲ್ಲ. ಆದ್ದರಿಂದ ಪ್ರಸ್ತುತ ಆಚಾರದಲ್ಲಿರುವ ಪೂಜಾವಿದಾನ ವಿಗ್ರಹಗಳು ಅವಶ್ಯವಿಲ್ಲ. ದೂಪ–ದೀಪ ನೈವೇದ್ಯಗಳು, ವಿವಾಹಗಳು, ಶಯನೋತ್ಸವ ಇವೆಲ್ಲವೂ ವಿಗ್ರಹಗಳಾಗಲೀ ಪೂಜಿಸುವ ಜನರಿಗಾಗಲಿ ಮನರಂಜನೆಯೇ ಹೊರತು ಇದರಿಂದ ಯಾವುದೇ ಪ್ರಯೋಜನವಿಲ್ಲ ಮತ್ತು ಪುರುಷಾರ್ಥವೂ ಇಲ್ಲ. ಪಾಷಾಣಾನ ಮೂರ್ತಿ ಪೂಜೆಗಳಿಂದ ಪುಣ್ಯವು ಲಭಿಸದು, ಕರ್ಮಗಳು ಎರಡು ರೀತಿಯದು. ವೇದ ವಿಹಿತ ಕರ್ಮ ಮತ್ತು ವೇದ ನಿಷಿದ್ಧ ಕರ್ಮ. ವಿಗ್ರಹಾರಾಧನೆಯು ವೇದ ವಿರುದ್ಧ ಕರ್ಮವಾದ್ದರಿಂದ ವಿಗ್ರಹರಾಧನೆಯಿಂದ ಪಾಪವುಂಟಾಗುವುದು. ಮೂರ್ತಿಪೂಜೆಯು ಆತ್ಮಸಾಕ್ಷಾತ್ಕಾರಕ್ಕೆ ಪ್ರಥಮ ಹಂತದಲ್ಲಿ ಒಂದು ಹೊಂಡ. ಆದಕ್ಕೆ ಸಿಕ್ಕಿಹಾಕಿಕೊಂಡವರು ಮತ್ತೆ ಹೊರಬರಲಾರದೆ ಒದ್ದಾಡುತ್ತಿದ್ದಾರೆ. ಜಡಪೂಜೆಗಳಿಂದ ಮಾನವರ ಜ್ಞಾನವು ಬದಲಾಯಿಸುವುದಿಲ್ಲ. ಮೂರ್ತಿಪೂಜಕರೆಲ್ಲರೂ ಅಜ್ಞಾನಿಗಳಾಗಿದ್ದು ಮಾನದ ಜನ್ಮವನ್ನು ವ್ಯರ್ಥಮಾಡಿಕೊಂಡು ಅಸುನೀಗಿದ್ದಾರೆ.

ಮೂರ್ತಿಪೂಜೆಯಿಂದ ಹಲವಾರು ದೋಷಗಳಿವೆ. ಕೋಟ್ಯಂತರ ರೂಪಾಯಿಗಳು ದೇವಸ್ಥಾನಗಳ ನಿರ್ಮಾಣದಲ್ಲಿ ವೆಚ್ಚವಾಗುತ್ತಿವೆ. ಧರ್ಮ, ಕಾಮ, ಮೋಕ್ಷಗಳಿಗೆ ಮೂರ್ತಿಪೂಜೆಯೇ ಸಾಧನವಾಗಿದೆ ಎಂದು ತಿಳಿದು ಮನುಷರು ಜನ್ಮವನ್ನು ವ್ಯರ್ಥ ಮಾಡಿಕೊಳ್ಳುವರು. ದೇವಸ್ಥಾನಗಳನ್ನು ಕಟ್ಟಿಸುವ ಬದಲು ವೇದಾಂತ ಶಾಲೆಗಳು, ವೇದಾಂತ ಪ್ರಚಾರಗಳಿಗೂ ವಿದ್ಯಾಸಂಸ್ಥೆಗಳಿಗೂ ಪ್ರಜಾರೋಗ್ಯ ಸಂರಕ್ಷಣಮಾಡುವ ಆಸ್ಪತ್ರೆಗಳನ್ನು ಕಟ್ಟಿಸಿದರೆ ಜನಗಳಿಗೆ ಒಳ್ಳೆಯದಾಗುತ್ತದೆ.

ತಾಯಿ ಮೊದಲ ದೇವತೆ, ತಂದೆ ಎರಡನೆ ದೇವತೆ, ಗುರು ಮೂರನೆ ದೇವತೆ, ಅತಿಥಿ ನಾಲ್ಕನೆ ದೇವರು, ಇವರ ಸೇವೆಯನ್ನು ಬಿಟ್ಟು ಮೂರ್ತಿ ಪೂಜೆ ಮಾಡುವುದು

ಮಹಾಪಾಪವಾಗುತ್ತದೆ. ಸರ್ವವನ್ನು ತಿಳಿದಿರುವ ನಿರಾಕಾರ ಪರಮಾತ್ಮನನ್ನು ಉಪಾಸಿಸುವುದೇ ಧ್ಯಾನಿಸುವುದೇ ಶಿಸ್ತುವಾದ ಮಾರ್ಗ ಎನ್ನುತ್ತಾರೆ ದಯಾನಂದರು.

ವೇದಯಜ್ಞಪದ್ಧತಿ ಉಪಾಸನಾ ಕ್ರಮವು ನಾಶವಾಗಿ ಸಾವಿರಾರು ದೇವ ದೇವತೆಯರು ಹುಟ್ಟಿ ಸಮಾಜದಲ್ಲಿ ಏಕತೆ ಯಿರಲಿಲ್ಲ. ಜಾತಿಪದ್ಧತಿಯಿಂದ ಸಮಾನತೆಗೆ ಅವಕಾಶ ಉಳಿಯಲಿಲ್ಲ, ಹೀಗಾಗಿ ಆರ್ಯ ಜನಾಂಗವೆಲ್ಲಾ ಮತಾಂತರ ಹೊಂದಲು ಕಾರಣವಾಯಿತು. ಇದನ್ನು ಅರಿತ ದಯಾನಂದರು ಹಿಂದೂ ಧರ್ಮದಿಂದ ಹೊರಧರ್ಮಗಳಿಗೆ ಮತಾಂತರ ಹೊಂದಿದ ಹಿಂದೂಗಳನ್ನು ಅವರು ಇಚ್ಛಿಸಿದ್ದರಲ್ಲಿ ಮರಳಿ ಮಾತೃ ಧರ್ಮಕ್ಕೆ ಬರುವ ಅವಕಾಶವನ್ನು ಆರ್ಯ ಸಮಾಜದ ಮೂಲಕ ಕಲ್ಪಿಸಿ ಕೊಟ್ಟರು.

ಹಲವು ಮತಾಂಧರು ಪ್ರಾಚೀನ ಕಾಲದಿಂದಲೂ ಸ್ತ್ರೀಯರು ಹಾಗೂ ಶೂದ್ರರನ್ನು ಸಾಮಾಜಿಕ ಆಧಾರಗಳಿಂದ ಸಂಪೂರ್ಣವಾಗಿ ವಂಚಿಸಲಾಗಿತ್ತು. ಇವರನ್ನು ಪಶುಗಳಂತೆ ಕಾಣುತ್ತಿದ್ದರು ಮತ್ತು ಮತಾಂಧರು ವೈದಿಕ ಧರ್ಮದ ಸ್ಥಾನವನ್ನು ಭೋಗದ ವಸ್ತುವನ್ನಾಗಿ ಪರಿವರ್ತಿಸಿಕೊಂಡಿದ್ದರು. ಇದನ್ನು ಮನಗಂಡ ದಯಾನಂದರು ಸ್ತ್ರೀಯರಿಗೆ ಉಪನಯನದ ಹಕ್ಕನ್ನು ನೀಡಿದರು. ಆ ಮೂಲಕ ಎಲ್ಲಾ ಧಾರ್ಮಿಕ ಕ್ರಿಯೆಗಳನ್ನು ಸ್ತ್ರೀಯರು ಮಾಡಲು ಅವಕಾಶ ಮಾಡಿಕೊಟ್ಟರು ಮತ್ತು ಶೂದ್ರರೆಲ್ಲರು ವೇದಾಧ್ಯಯನವನ್ನು ಮಾಡಬಹುದೆಂದು ಸಾರಿದರು.

ದಯಾನಂದರ ಪ್ರಕಾರ ವರ್ಣವ್ಯವಸ್ಥೆಯೆಂದರೆ ಮಾನವರು ನಿರಂತರ ಕ್ರಮದಲ್ಲಿ ತಮ್ಮ ಧಾರಣಶಕ್ತಿಗಳಿಗೆ ಅಂದರೆ ಸಂಸ್ಕಾರಗಳ ದೃಷ್ಟಿಯಿಂದ ಅವರವರ ಯೋಗ್ಯತೆಗಳಿಗೆ ಅನುಸಾರವಾಗಿ ಇರುವುದೇ ವರ್ಣವ್ಯವಸ್ಥೆಯೇ ಹೊರತು ಜಾತಿಯ ವ್ಯವಸ್ಥೆಯಲ್ಲ. ಮಾನವರೆಲ್ಲರೂ ಸಮಾನರು. ಆದರೆ ಸಂಸ್ಕಾರ ಜನಿತವಾದ ಸಾಮರ್ಥ್ಯಗಳಲ್ಲಿ ಮತ್ತು ಒಲವುಗಳಲ್ಲಿ ಸಹಜವಾದ ಭೇದವಿರುತ್ತದೆ. ಅದನ್ನು ಗುರುತಿಸಿ ಪ್ರತಿಯೊಬ್ಬನಿಗೂ ತನ್ನದೇ ಆದ ರೀತಿಯಲ್ಲಿ ಏಳಿಗೆಯನ್ನು ಸಾಧಿಸಿಕೊಳ್ಳುವುದೇ ವರ್ಣವ್ಯವಸ್ಥೆಯಾಗಿದೆ.

ಯಾರೂ ದೊಡ್ಡವರಲ್ಲ, ಯಾರೂ ಚಿಕ್ಕವರಲ್ಲ, ಎಲ್ಲರೂ ಅಣ್ಣ ತಮ್ಮಂದಿರೆಂದು ತಿಳಿಯಬೇಕು. ಪ್ರತಿಯೊಬ್ಬರೂ ತನ್ನದೇ ಆದ ಮಾರ್ಗವನ್ನು ಹಿಡಿದು ಮಾನವ ಸಮಾಜಕ್ಕೆ ಸೇವೆಯನ್ನು ಮಾಡಬೇಕು. ತನ್ನ ವೈಯಕ್ತಿಕ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದಕ್ಕಾಗಿ ಸೌಲಭ್ಯ ನೀಡುವ ಉದ್ದೇಶದಿಂದ ವೇದಗಳು ಪರಮ ವೈಜ್ಞಾನಿಕವಾದ ವ್ಯವಸ್ಥೆಯ ನಿರೂಪಣೆಯನ್ನು ಮಾಡುತ್ತದೆ.

ಚತುರ್ವರ್ಣಗಳು ಜಾತಿಯಂತೆ ಹುಟ್ಟಿನಿಂದ ಬರುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಗುಣ–ಕರ್ಮ–ಸ್ವಭಾವಕ್ಕನುಗುಣವಾಗಿ ತನ್ನ ವರ್ಣವನ್ನು ಅಳವಡಿಸಿಕೊಳ್ಳ

ತ್ತಾನೆಯೇ ಹೊರತು ಹುಟ್ಟಿದ ಕುಲದಿಂದಲ್ಲ, ಜಾತಿಯಿಂದಲ್ಲ.

ಈ ವರ್ಣವ್ಯವಸ್ಥೆಯು ಜಾತಿ ವಾದದಲ್ಲಿಳಿದು ಬಂದು ಮಾನವ ಸಮಾಜವನ್ನು ನರಕ ಸದೃಶವನ್ನಾಗಿ ಮಾಡಿತು. ನಮ್ಮ ಕರ್ತವ್ಯಗಳು ಬೇರೆ ಬೇರೆಯಾದರೂ ನಾವೆಲ್ಲರೂ ಒಂದೇ ಎಂಬ ಭಾವಾನಾತ್ಮಕ ಏಕತೆಯನ್ನು ಬೆಳಸಿಕೊಳ್ಳಬೇಕು ಎಂದು ಸಾರಿದರು.

ದಯಾನಂದರು ಪಂಚ ಮಹಾಯಜ್ಞಗಳನ್ನು ಆಚರಿಸಿದರೆ ಇದರಿಂದ ಸಮಾಜಕ್ಕೆ ಒಳಿತಾಗುತ್ತದೆ ಎಂಬುದನ್ನು ಒತ್ತಿ ಹೇಳಿದ್ದಾರೆ.

೧. ಋಷಿಯಜ್ಞ ಅಥವಾ ಬ್ರಹ್ಮಯಜ್ಞ
೨. ದೇವಯಜ್ಞ
೩. ಪಿತೃಯಜ್ಞ
೪. ಭೂತಯಜ್ಞ
೫. ಅತಿಥಿಯಜ್ಞ

೧. ಋಷಿಯಜ್ಞ ಅಥವಾ ಬ್ರಹ್ಮಯಜ್ಞ

ವೇದ ಮೊದಲಾದ ಶಾಸ್ತ್ರವನ್ನು ಓದುವುದು, ಓದಿಸುವುದು, ಸಂದೋಪಾಸನಾ, ಯೋಗಭ್ಯಾಸ ಮುಂತಾದುವುಗಳನ್ನು ಚಾಚು ತಪ್ಪದೆ ಕಾರ್ಯ ನಿರ್ವಹಿಸುವುದಾಗಿರುತ್ತದೆ. ಇದರಿಂದ ಜ್ಞಾನವು ಹೆಚ್ಚುತ್ತದೆ.

೨. ದೇವಯಜ್ಞ

ವಿದ್ವಾಂಸರ ಸಂಗ, ಸೇವೆ, ಪವಿತ್ರತೆ ದಿವ್ಯಗುಣಗಳ ಧಾರಣ ಧಾತೃತ್ವದಿಂದ ವಿದ್ಯೆಯ ಉನ್ನತಿಯನ್ನು ಸಾಧಿಸುವುದಾಗಿದೆ. ಈ ಎರಡೂ ಯಜ್ಞಗಳನ್ನು ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಮಾಡಬೇಕು.

ಪ್ರತಿ ಸಾಯಂಕಾಲದಲ್ಲಿ ಯಜ್ಞಯಾಗಾದಿಗಳಲ್ಲಿ ಅಗ್ನಿಗೆ ಹೋಮ ಮಾಡಿದರೆ ಪ್ರಾತಃಕಾಲದವರೆವಿಗೂ ವಾಯು ಶುದ್ಧಿಯಾಗಿ ಸುಖಕರವಾಗಿರುತ್ತದೆ ಮತ್ತು ಪ್ರಾತಃಕಾಲದಲ್ಲೂ ಅಗ್ನಿಗೆ ಹೋಮ ಮಾಡುವುದರಿಂದ ಆಹುತದ್ರವ್ಯವು ಸಾಯಂಕಾಲದ ತನಕ ವಾಯುಶುದ್ಧಿಯಾಗುವುದರ ಮೂಲಕ ಬಲ-ಬುದ್ಧಿ ಆರೋಗ್ಯಗಳು ಲಭಿಸುತ್ತವೆ.

೩. ಪಿತೃಯಜ್ಞ

ವಿದ್ವಾಂಸರುಗಳ, ಋಷಿಗಳ ಓದುವವರ -ಓದಿಸುವವರಲ್ಲಿ ತಾಯಿ, ತಂದೆ, ವೃದ್ಧರು, ಜ್ಞಾನಿಗಳು ಮತ್ತು ಪರಮಯೋಗಿಗಳ ಸೇವೆಯನ್ನು ಮಾಡಿ ಅವರನ್ನು ಸಂತೃಪ್ತರನ್ನಾಗಿ ಮಾಡುವುದಾಗಿರುತ್ತದೆ. ಇದರಲ್ಲಿ ಎರಡು ವಿಧಗಳು. ಶ್ರಾದ್ಧ ಮತ್ತು ತರ್ಪಣ.

ಪಿತೃಯಜ್ಞದಲ್ಲಿ ಪ್ರಮುಖವಾಗಿ ವಂಶೋದ್ಧಾರವನ್ನು ಹೆಚ್ಚಿಸುವುದಾಗಿರುತ್ತದೆ. ಇದರಿಂದ ಪಿತೃಋಣವನ್ನು ತೀರಿಸಿದಂತಾಗುತ್ತದೆ. ಪಿತೃಯಜ್ಞದ ಮೂಲಕ ತಾಯಿ, ತಂದೆ ಮತ್ತು ಜ್ಞಾನಿ ಮಹಾತ್ಮರ ಸೇವೆಯನ್ನು ಮಾಡಿದರೆ ಆಗ ಅವನ ಜ್ಞಾನವು ಹೆಚ್ಚುವುದು. ಅದರಿಂದ ಸತ್ಯ ಅಸತ್ಯಗಳ ನಿರ್ಣಯವನ್ನು ಮಾಡಿ ಸತ್ಯವನ್ನು ಗ್ರಹಿಸಿ ಅಸತ್ಯವನ್ನು ತ್ಯಜಿಸುವುದು.

೪. ಭೂತಯಜ್ಞ

ಯಾವುದೇ ಪ್ರಾಣಿ ಅಥವಾ ಕ್ರಿಮಿ ಕೀಟಗಳಿಗೆ ನೋವನ್ನು ಕೊಡದೇ ಅವುಗಳ ಅಭಿವೃದ್ಧಿಗೆ ಯಾವಾಗಲೂ ಸಹಕರಿಸುವುದಾಗಿರುತ್ತದೆ.

೫. ಅತಿಥಿಯಜ್ಞ

ಧಾರ್ಮಿಕನೂ, ಸತ್ಯೋಪದೇಶಕನೂ, ಸತ್ಯೋಪಕಾರಕ್ಕಾಗಿ ಎಲ್ಲಾ ಕಡೆಯು ಸಂಚರಿಸುವವನು. ಪೂರ್ಣ ವಿದ್ವಾಂಸನೂ ಪರಮ ಯೋಗಿಯೂಗಿರುವವರು ಗೃಹಸ್ಥನ ಹತ್ತಿರ ಬಂದಾಗ, ಆ ಯೋಗಿಗೆ ಮೊದಲು ಪಾದ್ಯ, ಅರ್ಘ್ಯ ಮತ್ತು ಆಚಮನೀಯ ಎಂಬ ಹಲವು ರೀತಿಯ ನೀರನ್ನು ಕೊಟ್ಟ ಅನಂತರ ಅವರನ್ನು ಆಸನದ ಮೇಲೆ ಸತ್ಕಾರ ಪೂರ್ವಕವಾಗಿ ಕೂರಿಸಿ ಆಹಾರ-ಪಾನೀಯ ಮುಂತಾದ ಉತ್ತಮ ಪದಾರ್ಥಗಳನ್ನು ಅರ್ಪಿಸಿ ಸೇವೆಯನ್ನು ಮಾಡಿ ಅವರನ್ನು ಸಂತೋಷಗೊಳಿಸಬೇಕು.

ಅನಂತರ ಅವರ ಹತ್ತಿರ ಕುಳಿತು ಅವರಿಂದ ಜ್ಞಾನ-ವಿಜ್ಞಾನ ಮುಂತಾದವನ್ನು ತಿಳಿಯುವುದರಿಂದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ಪ್ರಾಪ್ತಿಯು ದೊರಕುವುದು. ಅಂತಹ ಉಪದೇಶಗಳನ್ನು ಕೇಳಬೇಕು. ತನ್ನ ನಡೆ-ನುಡಿಗಳನ್ನು ಅವರ ಉಪದೇಶಕ್ಕನುಸಾರವಾಗಿ ವರ್ತಿಸುವುದಾಗಿರುತ್ತದೆ. ಎಲ್ಲಿಯವರೆಗೆ ಉತ್ತಮರಾದ ಅತಿಥಿಗಳು ಜಗತ್ತಿನಲ್ಲಿ ಇರುವುದಿಲ್ಲವೋ ಅಲ್ಲಿಯವರೆಗೆ ಉನ್ನತಿಯು ಆಗುವುದಿಲ್ಲವೆಂದು ದಯಾನಂದರು ತಿಳಿಸಿದ್ದಾರೆ.

ದಯಾನಂದರು ಸನ್ಯಾಸದ ಮಹತ್ವವನ್ನು ತಿಳಿಸಿದರು. ಸನ್ಯಾಸದ ಜೀವನದಿಂದ ಸಾಮಾಜಿಕ ಕೆಡಕನ್ನು ತೊಡೆದುಹಾಕುವುದನ್ನು ತೋರಿಸಿಕೊಟ್ಟರು. ಸಂನ್ಯಾಸಿಯಾದವರು ಪಕ್ಷಪಾತವಾದ ನ್ಯಾಯಾಚರಣ, ಸತ್ಯದ ಅಂಗೀಕಾರ, ಅಸತ್ಯದ ಪರಿತ್ಯಾಗ, ಪರೋಪಕಾರ ಸತ್ಯವಾದ ಮಾತುಗಳು ಮುಂತಾದವುಗಳನ್ನು ರೂಢಿಸಿಕೊಂಡು ಜನರುಗಳಿಗೆ ಒಳ್ಳೆಯದನ್ನು ಬಯಸಿ ಯಾವಾಗಲೂ ಅವರ ಏಳಿಗೆಗಾಗಿ ದುಡಿಯಲು ಶ್ರಮಿಸಬೇಕಾಗುತ್ತದೆ.

ಸಂನ್ಯಾಸಿಯಾದವರು ಪೂರ್ಣ ವಿದ್ವಾಂಸರೂ, ಜಿತೇಂದ್ರಿಯರೂ ಯಾವ ವಿಷಯದಲ್ಲೂ ಕಾಮನೆಯಿಲ್ಲದವರೂ ಪರೋಪಕಾರ ಮಾಡಲು ಇಚ್ಛಿಸುವವರೂ ಸಂನ್ಯಾಸಿಯಾಗಿರುತ್ತಾರೆ. ಸಂನ್ಯಾಸಿಯು ಮಾತು ಮತ್ತು ಮನಸ್ಸನ್ನು ಅಧರ್ಮದಿಂದ ತಡೆದು ಅದೆಲ್ಲವನ್ನು ಜ್ಞಾನ ಮತ್ತು ಆತ್ಮನಲ್ಲಿ ನಿಯೋಜಿಸಬೇಕು ಮತ್ತು ಸಂಪೂರ್ಣ ಜ್ಞಾನದಿಂದ ತನ್ನ ಆತ್ಮನಲ್ಲಿ ನಿಯೋಜಿಸಬೇಕು ಮತ್ತು ಸಂಪೂರ್ಣ ಜ್ಞಾನದಿಂದ ತನ್ನ ಆತ್ಮವನ್ನು ದೇವರಲ್ಲಿ ನಿಯೋಜಿಸುವುದು. ಆ ವಿಜ್ಞಾನವನ್ನು ಶಾಂತಸ್ವರೂಪನಾಗಿರುವ ಆತ್ಮನಲ್ಲಿ ಸ್ಥಿರಗೊಳಿಸಬೇಕು. ಎಲ್ಲಾ ಪಂಚಭೂತಗಳಿಗೆ ಸಂಬಂಧಿಸಿದ ಅನುಭವಗಳನ್ನು ಕರ್ಮದಿಂದ ಕೂಡಿಟ್ಟಿರುವುದು ಎಂಬುದನ್ನು ತಿಳಿದು ಬ್ರಹ್ಮಜ್ಞನಾಗಿರುವ ಸಂನ್ಯಾಸಿಯು ವೈರಾಗ್ಯವನ್ನು ಹೊಂದುವುದು.

ದೇಹವನ್ನು ಒಳಗೊಂಡಿರುವ ಜೀವಿಯು ಸುಖ-ದುಃಖದ ಪ್ರಾಪ್ತಿಯಿಂದ ಯಾವಾಗಲೂ ಬೇರೆಯಾಗಲು ಸಾಧ್ಯವಿಲ್ಲ ಮತ್ತು ಶರೀರ ರಹಿತನಾದ ಜೀವಾತ್ಮನು ಮುಕ್ತಿಯಲ್ಲಿ ಸರ್ವವ್ಯಾಪಕನಾದ, ಸರ್ವಾಂತರ

ಯಾದ, ಪರಮಾತ್ಮನೊಂದಿಗೆ ಶುದ್ಧವಾಗಿರುವನೋ ಅಂತವನಿಗೆ ಸಂಸಾರದಲ್ಲಿ ಸುಖ-ದುಃಖಗಳ, ನೋವು-ನಲಿವುಗಳ ಅರಿವಾಗುವುದಿಲ್ಲ.

ಪ್ರಪಂಚದಲ್ಲಿ ಗೌರವ, ಸಂಪತ್ತು ಭೋಗ ಅಥವಾ ಮಾನ್ಯತೆಯಿಂದ, ಪುತ್ರರ ಮೋಹದಿಂದ ಬೇರೆಯಿದ್ದು ಸಂನ್ಯಾಸಿಯು ಜನರುಗಳು ಕೊಡುವ ಭಿಕ್ಷೆಯಿಂದ, ರಾತ್ರಿ-ಹಗಲು ಎನ್ನದೆ ಮೋಕ್ಷದ ಸಾಧನೆಯ ಕಡೆಗೆ ಆಸಕ್ತನಾಗಿರಬೇಕಾಗುತ್ತದೆ.

ಪಕ್ಷಪಾತವಾದ ನ್ಯಾಯಾಚರಣ, ಸತ್ಯದ ಅಂಗೀಕಾರ, ಅಸತ್ಯದ ಪರಿತ್ಯಾಗ ಪರಮಾತ್ಮನ ವೇದೋಕ್ತವಾದ ಆಜ್ಞೆಯ ಪಾಲನೆ, ಪರೋಪಕಾರವನ್ನು ಮಾಡುವುದು. ಯಾವಾಗಲೂ ಸತ್ಯವನ್ನೇ ಹೇಳುವುದು-ನಡೆಯುವುದು ಸಂನ್ಯಾಸಿಯ ವಿಶೇಷ ಧರ್ಮವಾಗಿರುತ್ತದೆ. ಸಂನ್ಯಾಸಿಯು ಹೋಗುವ ಮಾರ್ಗದಲ್ಲಿ ಬೇರೆ ಕಡೆ ಗಮನ ಹರಿಸದೆ ನೆಲದ ಮೇಲೆ ದೃಷ್ಟಿಯಿಟ್ಟು, ನಡೆಯುವುದು. ನೀರನ್ನು ಕುಡಿಯುವಾಗ ಬಟ್ಟೆಯಿಂದ ಶೋಧಿಸಿ ಕುಡಿಯಬೇಕು. ಮನಸ್ಸಿನಿಂದ ಆಲೋಚಿಸಿ ಸತ್ಯವನ್ನು ಪಡೆದು ಅಸತ್ಯವನ್ನು ತಿರಸ್ಕರಿಸುವುದು.

ಉಪದೇಶ ಹೇಳುವಾಗ, ಸಂವಾದ ನಡೆಸುವಾಗ ಯಾರಾದರೂ ಸಂನ್ಯಾಸಿಯ ಮೇಲೆ ಸಿಟ್ಟುಮಾಡಿಕೊಂಡು ನಿಂದಿಸಿದರೆ, ಆಗ ಸಂನ್ಯಾಸಿಯು ಉದ್ವೇಗಕ್ಕೆ ಒಳಗಾಗದೆ ಯಾವಾಗಲೂ ಅವನಿಗೆ ಶುಭವನ್ನೇ ಕೋರುವುದು ಸಂನ್ಯಾಸಿಯ ಧರ್ಮ. ತನ್ನ ಪಂಚೇಂದ್ರಿಯಗಳನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡು ಯಾವುದೇ ಕಾರಣಕ್ಕೂ ಮೋಸಗೊಳಿಸಬಾರದು. ಮದ್ಯ-ಮಾಂಸವನ್ನು ವರ್ಜಿಸುವುದು ಸಂನ್ಯಾಸಿಯ ಕರ್ತವ್ಯವಾಗಿರುತ್ತವೆ.


ತನ್ನ ನೆರವಿನಿಂದಲೇ ಸುಖವನ್ನುಂಡು ಈ ಪ್ರಪಂಚಕ್ಕೆ ಧರ್ಮ ಮತ್ತು ವಿದ್ಯೆಯ ಉಪದೇಶದ ಪ್ರಾಪ್ತಿಯನ್ನು ದೊರಕಿಸಲು ದೇಶದ ಪರ್ಯಟನೆಯನ್ನು ಹೊಂದಬೇಕಾಗುತ್ತದೆ. ಸಂನ್ಯಾಸಿಯು ತಲೆಗೂದಲು, ಉಗುರುಗಳು, ಗಡ್ಡ-ಮೀಸೆ ತೆಗೆಸಿ, ಕೈಯಲ್ಲಿ ಪಾತ್ರೆ, ದಂಡ ಹಾಗೂ ಕಾವಿ ಬಟ್ಟೆಯನ್ನು ತೊಟ್ಟುಕೊಂಡು ಈ ಲೋಕದಲ್ಲಿರುವ ಸಮಸ್ತ ಪ್ರಾಣಿಗಳಿಗೂ ನೋವನ್ನುಂಟು ಮಾಡದೆ ಎಲ್ಲೆಡೆಯು ಆದರ ಏಳಿಗೆಗಾಗಿ ಪರ್ಯಟನೆ ಹೊಂದುವುದು. ಇಂದ್ರಿಯಗಳನ್ನು ಅಧರ್ಮದಿಂದ ದೂರ ಸರಿಸಿ ಉದ್ವೇಗಕ್ಕೆ ಒಳಗಾಗಬಾರದು ಮತ್ತು ಸಂನ್ಯಾಸಿಯು ಸಮಸ್ತರಿಗೂ ಶುಭವನ್ನೆ ಹರಸುತ್ತಾ ನಿಷ್ಪಕ್ಷಪಾತನಾಗಿ ಧರ್ಮದ ಕಡೆಗೆ ಎಲ್ಲರನ್ನು ಒಯ್ಯಲು ಪ್ರಯತ್ನಿಸುವುದು ಸಂನ್ಯಾಸಿಯ ಕರ್ಮವಾಗಿದೆ. ಸತ್ಯೋಪದೇಶದಿಂದ ಮತ್ತು ವಿದ್ಯಾಭ್ಯಾಸದಿಂದ ಪ್ರತಿಯೊಬ್ಬರ ಏಳಿಗೆಗೆ ಶ್ರಮಿಸುವುದು; ಮತ್ತು

ಸಮಸ್ತ ಪ್ರಾಣಿಗಳ ಹಿತವನ್ನು ಬಯಸುವುದು ಸಂನ್ಯಾಸಿಯ ಮುಖ್ಯ ಕರ್ತವ್ಯವಾಗಿರುತ್ತದೆ.

ಸಂನ್ಯಾಸಿಯು ಪ್ರತಿನಿತ್ಯ ಪಾಲಿಸಬೇಕಾದ ಹತ್ತು ಲಕ್ಷಣಗಳು: ಧೃತಿ, ಕ್ಷಮಾ, ದಮ, ಅಸ್ತೇಯ, ಶೌಚ, ಇಂದ್ರಿಯನಿಗ್ರಹ, ಧೀ ವಿದ್ಯಾ, ಸತ್ಯ ಮತ್ತು ಅಕ್ರೋಧ.

ಭಾರತೀಯ ಸಮಾಜಕ್ಕೆ ಸ್ವಾಮಿ ದಯಾನಂದ ಸರಸ್ವತಿಯವರ ಕೊಡುಗೆ ಅಮೋಘವಾದುದು. ಧರ್ಮದ ನೈಜ ಅರ್ಥವನ್ನು ಪ್ರತಿಯೊಬ್ಬರಲ್ಲಿಯೂ ಮೂಡಿಸಲು ಅವರು ಶ್ರಮಿಸಿದ್ದಾರೆ. ಅವರು ಸಮಾಜಕ್ಕೆ ಸಲ್ಲಿಸಿದ ಸೇವೆಗೆ ಕೃತಜ್ಞತಾ ಪೂರ್ವಕವಾಗಿ ಅನೇಕ ಸಾಮಾಜಿಕ ಸಂಘಟನೆಗಳು, ವಿದ್ಯಾಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಜನ್ಮತಾಳಿ, ಇಂದಿಗೂ ಭಾರತದಲ್ಲಿ ದಯಾನಂದ ಸರಸ್ವತಿಯವರ ಆದರ್ಶಗಳನ್ನು ಸಫಲಗೊಳಿಸುವಲ್ಲಿ ಶ್ರಮಿಸುತ್ತಿವೆ.

ಧರ್ಮೋ ರಕ್ಷತಿ ರಕ್ಷಿತಃ



ನಾವೆಲ್ಲರೂ ಲೋಕದ ದೃಷ್ಟಿಯಿಂದ ಸಾಲಗಾರರಾಗಿದ್ದೇವೆ. ಲೋಕಕ್ಕಾಗಿ ನಾವೇನಾದರೂ ಮಾಡುತ್ತಿದ್ದರೆ, ಅದೇ ನಮ್ಮ ಸೌಭಾಗ್ಯ. ಲೋಕ ಕ್ಷೇಮಕ್ಕೆ ಸಹಾಯ ಸಲ್ಲಿಸುವ ನಾವು, ನಮಗೆಯೆ, ನೆರವಾಗುತ್ತಿದ್ದೇವೆಂಬುವನ್ನು ಅರಿತಿರಬೇಕು.

—ಸ್ವಾಮಿ ವಿವೇಕಾನಂದ

ಏಶಿಯಾದ ಕೆಟ್ಟ ವಾಹನ ಚಾಲಕರು

ಗೋಪಾಲ ಆಶ್ರಿತ
೭-೫-೪೨, 'ರಮಾನಿಲಯ'
ಜವಾಹರನಗರ, ರಾಯಚೂರು-೫೮೪೧೦೧

ಪುರಾತನ ದಿಲ್ಲಿಯ ಜನನಿಬಿಡ ರಸ್ತೆಯಲ್ಲಿ ನಮ್ಮ ಟ್ಯಾಕ್ಸಿ ಸಿಕ್ಕಿಕೊಂಡಿತ್ತು. ನಾನು ಸುತ್ತಲೂ ಕಣ್ಣು ಹಾಯಿಸುತ್ತಿದ್ದಂತೆ ನಾನೊಂದು ಮೃಗಾಲಯದಲ್ಲಿದ್ದಂತೆನಿಸಿತು. ನನ್ನ ಸುತ್ತಲೆಲ್ಲಾ ಮೋಟಾರುಕಾರು ಸೈಕಲ್ ರಿಕ್ಷಾ, ಕಟ್ಟಿಗೆಯ ಬಂಡಿ, ಪ್ರಯಾಣಿಕರನ್ನು ಕಿಕ್ಕಿರಿದು ತುಂಬಿಕೊಂಡಿದ್ದ ಬಸ್ಸು, ಅನೇಕ ಮೋಟಾರು ಸೈಕಲ್ಲುಗಳು ತುಂಬಿಕೊಂಡಿದ್ದವು. ಯಾರೂ ಇನ್ನೊಬ್ಬರಿಗೆ ದಾರಿ ಬಿಡುತ್ತಿಲ್ಲ; ಆದ್ದರಿಂದ ಯಾರಿಗೂ ಪೆಟ್ಟಾಗಲು ಸಾಧ್ಯವಿರಲಿಲ್ಲ. ಭಾರತದಲ್ಲಿ ಪಾದಚಾರಿಗಳಿಗೆ ಮತ್ತು ವಾಹನ ಚಾಲಕರಿಗಿರುವಷ್ಟೇ ರಸ್ತೆಯ ಹಕ್ಕು ದನ, ಆನೆಗಳಿಗಿದೆ. ಸ್ವಲ್ಪ ಹೆಚ್ಚೇ ಇರಬೇಕೆನಿಸುತ್ತದೆ.

ಆದರೆ ಹೊಸ ದಿಲ್ಲಿಯ ರಸ್ತೆಗಳು ಚೆನ್ನಾಗಿವೆ. ಸಾಗಾಟ ಮುಂದುವರೆಯುತ್ತಿದ್ದಂತೆ ಮತ್ತೆ ಎಲ್ಲ ಚಲನವಲಕ್ಕೆ ಮತ್ತೆ ಅಡ್ಡಿಯುಂಟಾಗುತ್ತದೆ ಕೂಡು ರಸ್ತೆಯ ಭಾಗದಲ್ಲಿ ಕೆಲವು ಕೆಲಸಗಾರರು ಒಂದು ಡೇರೆಯನ್ನು ನೆಟ್ಟು ಅಂಚುಗಟ್ಟುತ್ತಿದ್ದಾರೆ. ಇದು ಓಣಿಯ ಅರ್ಧಭಾಗವನ್ನೇ ಆವರಿಸಿದೆ. ಒಂದು ಲಗ್ನದ ಸಮಾರಂಭಕ್ಕಾಗಿ ನೆಟ್ಟ ಈ ಡೇರೆ ರಸ್ತೆಯ ಭಾಗವನ್ನು ಆವರಿಸಿಕೊಂಡಿದೆ.

ಹೀಗೇಕೆ ಆಗುತ್ತಿದೆ ಎಂದು ನನ್ನ ಜೊತೆಗಿದ್ದ ಸ್ನೇಹಿತೆಯನ್ನು ಕೇಳಿದೆ. ಆಕೆ "ಭಾರತದಲ್ಲಿ ಎಲ್ಲ ಸ್ಥಳವೂ ನನ್ನದೇ ಎಂಬ ಭಾವನೆ. ಇದು ರಸ್ತೆಗೂ ಅನ್ವಯಿಸುತ್ತದೆ" ಎಂದು ಹೇಳಿದಳು.

ಏಶಿಯಾದಲ್ಲೆಲ್ಲಾ ಇಂಥ ಗೀಳಿರುವುದೆಂಬುದು ಕೇಳಬಹುದು ಮತ್ತು ನೋಡಬಹುದು. ಚಾಲಕರು ವಾಹನಗಳ ಸಾಗಾಟ ನಡೆಯುತ್ತಿದ್ದತೆ, ತಮ್ಮ ವಾಹನಗಳನ್ನು ಹಿಮ್ಮುಖವಾಗಿ ಒಯ್ಯುತ್ತಾರೆ; ಜನನಿಬಿಡ ರಸ್ತೆಯಲ್ಲಿ ನಿಲ್ಲಿಸಿ ಕಟ್ಟೆ ಮೇಲೆ ನಿಂತ ಗೆಳೆಯರೊಡನೆ ಹರಟೆ ಹೊಡೆಯುತ್ತಾರೆ. ವಾಹನ ನಡೆಸುತ್ತ ಹಂದಿ ಮಾಂಸದರೊಟ್ಟಿ ತಿನ್ನುತ್ತಾರಲ್ಲದೆ, ತಮ್ಮ ವ್ಯವಹಾರದ ವರದಿಯನ್ನು ಬರೆದು ಮುಗಿಸುತ್ತಾರೆ.

ಅಕ್ಟೋಬರ್ ೧೮೮ ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಜೋಸೆಫ್ ಎ ರೀವ್ಸ್ ಅವರ 'ಏಷಿಯಾಸ್ ವರ್ಸ್ಟ್ ಡ್ರೈವರ್ಸ್' ಎಂಬ ಲೇಖನದ ಕನ್ನಡಾನುವಾದ.

ತಮ್ಮ ವಾಹನದ ಗತಿಯನ್ನೂ ಹೆಚ್ಚಿಸುತ್ತಾರೆ. ಅನೇಕ ಚಾಲಕರು ಮದ್ಯಕುಡಿದು ವಾಹನ ಓಡಿಸುತ್ತಾರೆ. ಮತ್ತೆ ಕೆಲವರು ನಡೆಸುವಾಗ ನಿದ್ರೆ ಹೋಗುತ್ತಾರೆ.

ಥೈವಾಧೀನತೆ ಕುರಿತು ನಡೆಸಿದ ಅಧ್ಯಯನದ ಪ್ರಕಾರ ಪ್ರತಿ ೧೦೦,೦೦೦ ವಾಹನಗಳಲ್ಲಿ ಏಶಿಯಾದಲ್ಲಿ ಭಾರತ ಮತ್ತು ಚೀನಾಗಳೇ ಅಲೆವಾರಿ ದೇಶಗಳೆಂದೂ ಜಪಾನ ಮತ್ತು ತೈವಾನ ಬಹಳ ಸುರಕ್ಷಿತ ದೇಶಗಳೆಂಬ ಅಂಶ ಬೆಳಕಿಗೆ ಬಂದಿದೆ. ಭಾರತದಲ್ಲಿ ರಸ್ತೆ ಅಪಘಾತಗಳಲ್ಲಿ ಸಾಯುವವರ ಸಂಖ್ಯೆ ಜಪಾನಿಗಿಂತಲೂ ೧೦೦ ಪಟ್ಟು ಹೆಚ್ಚಿದೆ. ಚೀನಾದಲ್ಲೂ ಈ ಸಂಖ್ಯೆ ತೈವಾನಿನ ೩೨ ರಷ್ಟಿದೆ.

ಈ ಅಂಕಿ ಅಂಶಗಳು ನಿಜವಾದ ಕತೆ ಹೇಳಲಾರವು. ರೀಡರ್ಸ್ ಡೈಜೆಸ್ಟ ತಂಡದವರು ಪೊಲೀಸ್ ಅಧಿಕಾರಿಗಳೊಡನೆ, ಬಸ್ ಚಾಲಕರೊಡನೆ, ವಾಹನ ಚಾಲಕರ ತರಬೇತುದಾರರನ್ನು ಮತ್ತು ಸುರಕ್ಷತಾ ತಜ್ಞರೊಡನೆ ಸಂದರ್ಶನ ನಡೆಸಿದರು. ನಾವು ಟ್ಯಾಕ್ಸಿಗಳಲ್ಲಿ, ಬಾಡಿಗೆ ಮೋಟಾರುಗಳಲ್ಲಿ ಓಡಾಡಿದೆವು. ಸುತ್ತು ಬಳಸುದಾರಿಗಳಲ್ಲಿ, ಸೇತುವೆ ರಸ್ತೆಗಳಲ್ಲಿ ಒಮ್ಮೊಮ್ಮೆ ತಾಸುಗಟ್ಟಲೆ ನಿಂತು ರಸ್ತೆಸಾರಿಗೆ ನಿಯಮ ಪಾಲನೆಯನ್ನು ಗಮನಿಸಿದೆವು. ಏಶಿಯಾದ ೫ ದೇಶಗಳಲ್ಲಿನ ಚಾಲಕರು ಎಷ್ಟು ಅಸಹ್ಯವಾಗಿ ವಾಹನ ನಡೆಸುತ್ತಾರೆಂಬುದು ಈ ಅಧ್ಯಯನದಿಂದ ತಿಳಿದುಬಂತು.

೫ ನೇ ಸ್ಥಾನದಲ್ಲಿ ಥೈಲ್ಯಾಂಡ್

ಥೈಲ್ಯಾಂಡಿನ ಅನೇಕ ಮೋಟಾರು ವಾಹನಗಳಲ್ಲಿರುವ ಚಾಲಕನೆದುರಿನ ಕನ್ನಡಿಗೆ ಅಥವಾ ಕೆಸರು ತಡೆಗಳಿಗೆ ಬುದ್ಧನ ಚಿತ್ರವಿರುವ ಒಂದು ತಾಯಿತ ಕಟ್ಟಿರುತ್ತಾರೆ. ಅದರ ಮೇಲೆ ಚಾಲಕ ಮತ್ತು ಪ್ರಯಾಣಿಕರನ್ನು ಭಗವಂತ ರಕ್ಷಿಸಲೆಂಬ ಪದ್ಯದ ಸಾಲು ಇರುತ್ತದೆ. ಇಂಥದೊಂದು ತಾಯಿತ ನನ್ನ ಹತ್ತಿರವಿಟ್ಟುಕೊಂಡಿರಬೇಕೆನಿಸಿತು.

ನಿರ್ಲಕ್ಷ್ಯದಿಂದ ವಾಹನ ಓಡಿಸುವುದು ಸಾಮಾನ್ಯ—ಅದರಲ್ಲೂ ಬಹಳ ಸಮಯದವರೆಗೆ ದುಡಿಯುವ, ಬಹಳ ದೂರದವರೆಗೆ ವಾಹನಗಳನ್ನು ಓಡಿಸುವ ಟ್ರಕ್ ಚಾಲಕರು ಬಹಳ ಜೋರಾಗಿ ಓಡಿಸುತ್ತಾರೆ. ಅಮೆರಿಕೆಯ ರಾಯಭಾರಿ ಕಛೇರಿಯವರು ಥೈಲ್ಯಾಂಡ್ ಬಗ್ಗೆ ಬರೆದ ತಮ್ಮ ವರದಿಯಲ್ಲಿ "ಮಾದಕ ಅಥವಾ ಇತರ ಪ್ರಚೋದಕ ವಸ್ತುಗಳನ್ನು ಸಾಮಾನ್ಯವಾಗಿ ಸೇವಿಸುವ ವ್ಯಾಪಾರಿ ಚಾಲಕರಿಂದ "ದೂರವಿರುವಂತೆ ಎಚ್ಚರಿಕೆ ನೀಡಿದೆ. ಈ ಎಚ್ಚರಿಕೆಯ ಜೊತೆಯಲ್ಲಿ ಒಂದು ಬೆದರಿಕೆಯ ಸೂಚನೆ ಇದೆ: "ಕಿಕ್ಕಿರಿದ ರಸ್ತೆಗಳು ಮತ್ತು ಅಶಕ್ತಯಾನಗಳ ಕೊರತೆ ಇರುವುದರಿಂದ ಅಪರಾಧಕ್ಕೀಡಾದವರಿಗೆ ಚಿಕಿತ್ಸೆ ನೀಡುವುದು ಕಠಿಣವಾಗುತ್ತದೆ."

೪ ನೇಯ ಸ್ಥಾನದಲ್ಲಿ ಇಂಡೋನೇಶಿಯ

ಇಂಡೋನೇಶಿಯಾದ ರಾಜಧಾನಿ ಜಕಾರ್ತಾದಲ್ಲಿ ಪ್ರಯಾಣಿಕರನ್ನು ನಗರದ ವಿವಿಧ ಭಾಗಗಳಿಗೆ ಕರೆದೊಯ್ಯುವ ವಾಹನಗಳ ಚಾಲಕರೇ ಅತಿ ಅಪಾಯಕಾರಿಯಾಗಿರುವರು. "ಕೆಂಪುದೆವ್ವ"ಗಳೆಂದು ಕರೆಯಲಾಗುವ ಇಲ್ಲಿನ ಮಿನಿ ಬಸ್ಸುಗಳೇ ಸಾರಿಗೆಯ ಪ್ರಧಾನ ವಾಹನಗಳು. ಹಸಿರು ಮತ್ತು ಬಿಳಿ ಬಣ್ಣದ ಕೊಪಾಜಾ ಬಸ್ಸು

ಗಳು ಕೂಡಾ ಕೆಂಪು ದೆವ್ವಗಳು ಓಡಾಡುವ ರಸ್ತೆಗಳ ಮೇಲೆ, ಗಿರಾಕಿಗಳನ್ನು ಆಕರ್ಷಿಸಲು, ಗಾಲಿಗೆ ಗಾಲಿ ಬಡಿಯುವಷ್ಟು ಪಕ್ಕದಿಂದ ಅಷ್ಟೇ ಜೋರಾಗಿ ಓಡಾಡುತ್ತವೆ. ಹತ್ತಿರದ ಸ್ಥಳಗಳಿಗೆ ಹಾಗೂ ಕಡಿಮೆ ದರದಲ್ಲಿ ಹೋಗಬಯಸುವ ಪ್ರಯಾಣಿಕರು ತ್ರಿಚಕ್ರದ 'ಬಾಜೇಸ್' ಎಂಬ ಸ್ಕೂಟರ್ ಅನ್ನು ಏರುತ್ತಾರೆ. ಈ ಚಿಕ್ಕ ವಾಹನಗಳು ಜನಸಂದಣಿಯ ಮಧ್ಯದಿಂದ ನ್ಯಾಟ್‌ಗಳಂತೆ, ಇತರರು ಕೋಪಗೊಳ್ಳುವ ಮೊದಲೇ ನುಣುಚಿಕೊಂಡು ಮುಂದೆ ಸಾಗುತ್ತವೆ. ಇದಲ್ಲದೆ, 'ಕೊಲ್ಟ್ಸ' ಎಂಬ ವ್ಯಾನುಗಳ ಸಮೂಹವೇ ಇದೆ. ಈ ವಾಹನಗಳು ಯಾವಾಗಬೇಕಾದರೂ, ಎಲ್ಲಿ ಬೇಕೆಂದರಲ್ಲಿ ನಿಂತು ಪ್ರಯಾಣಿಕರನ್ನು ಇಳಿಸಿ ಅಥವಾ ಹತ್ತಿಸಿಕೊಂಡು ಸಾಗುತ್ತವೆ.

೩ನೇಯ ಸ್ಥಾನದಲ್ಲಿ ಕೋರಿಯಾ

ಸಿಯಾಲ್‌ನಲ್ಲಿ ಒಂದು ಉದ್ದ ತಿರುವಿನ ಸುತ್ತು ಹಾಕಿ ಹೊರಟಾಗ ಮಧ್ಯೆ ಹ್ಯೂಂಡಾಯಿ ಸೊನೆಟ್ ಸೆಡಾನ ವಾಹನವೊಂದು ನಿಂತಿತ್ತು. ಅದರ ಬದಿಯಿಂದ ನಮ್ಮ ವಾಹನ ಹೋಗುತ್ತಿದ್ದಂತೆ, ಅದರ ಚಾಲಕ ನಿದ್ದೆಯಲ್ಲಿದ್ದುದು ಕಂಡುಬಂತು. ಆದರೆ ಒಮ್ಮಿಂದೊಮ್ಮೆಲೆ ಆ ವಾಹನ ಗುಡುಗುಡುತ್ತಾ ಜೋರಾಗಿ ಮುಂದೆ ಸಾಗಿ ಬಿಟ್ಟಿತು. ಬಹುಶಃ ಕುಡಿತದ ಅಮಲಿನಲ್ಲಿದ್ದ ಚಾಲಕ ಎಚ್ಚರಗೊಂಡು ಈ ರೀತಿ ಅಪಾಯಕಾರಿಯಾಗಿ ಓಡಿಸಿಕೊಂಡು ಮನೆಗೆ ಹೊರಟಿರಬೇಕು.

ಕೊರಿಯಾದಲ್ಲಿ ಇಂಥ ದೃಶ್ಯವನ್ನು ನೋಡಲು ಬಹಳ ಕಾಯಬೇಕಾಗಿಲ್ಲ. ಪ್ರತಿ ವರ್ಷ (ಹತ್ತರಲ್ಲಿ ಒಂದರಂತೆ) ಸಂಭವಿಸುವ ೨೫೦೦೦ ಅಪಘಾತಗಳಿಗೆ ಹೆಚ್ಚಾಗಿ ಅಮಲಿನಲ್ಲಿ ಓಡಿಸುವ ಚಾಲಕರೇ ಕಾರಣರಾಗಿರುತ್ತಾರೆ.

೨ನೇಯ ಸ್ಥಾನದಲ್ಲಿ ಭಾರತ

ರಾತ್ರಿ ಒಂದು ಗಂಟೆಯ ಸಮಯ. ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದಿಲ್ಲಿ ಪಟ್ಟಣಕ್ಕೆ ತೆರಳುವ ದಾರಿ. ನಮ್ಮ ಮುಂದೆ ಆನೆ ಗಾತ್ರದ ವಾಹನಗಳಿಗೆ ಹಿಂದಿನ ಎಚ್ಚರಿಕೆ ದೀಪಗಳಿರಲಿಲ್ಲ. ಇದೇನು ಹೊಸ ವಿಷಯವಲ್ಲ. ಇದಕ್ಕೂ ಮೊದಲು ನಾನು ಕಂಡ ನಾಲ್ಕು ಟ್ರಕ್ಕುಗಳಿಗಾಗಲೀ ಅಥವಾ ಟ್ಯಾಕ್ಸಿಗಳಿಗಾಗಲಿ ಹಿಂದಿನ ದೀಪಗಳಿರಲಿಲ್ಲ. ಕೆಲವೊಂದು ವಾಹನಗಳ ಹಿಂದಿನ ದೀಪಗಳು ಚೆನ್ನಾಗಿದ್ದರೂ ಚಾಲಕರು ಅವುಗಳನ್ನು ಬೆಳಗಿಸುವುದಿಲ್ಲ. ಆಸನಗಳ ಪಟ್ಟಿಗಳಂತೂ ಇನ್ನೂ ಅಪರಿಚಿತ ವಿಷಯ. ನಾನೀಗ ಇರುವುದು ಭಾರತದಲ್ಲಿ. ಈ ದೇಶದಲ್ಲಿ ಸುರಕ್ಷತೆಯ ಮೂಲ ಲಕ್ಷಣಗಳನ್ನು ಕಾಣುವುದು ಕೂಡಾ ಅಪರೂಪ. ಸುರಕ್ಷತೆಯ ಮಟ್ಟ ಸಡಿಲಾಗಿರುವುದರಿಂದ ಹೆಚ್ಚು ಸಾವುಗಳು ಸಂಭವಿಸುತ್ತವೆ: ಥೈಲ್ಯಾಂಡ್ ಮತ್ತು ಟೈವಾನಿನಲ್ಲಿರುವಷ್ಟೇ ವಾಹನಗಳು ಭಾರತದಲ್ಲಿದ್ದರೂ ವಿಶ್ವದ ಒಟ್ಟು ರಸ್ತೆ ಸಾವುಗಳಲ್ಲಿ ೧೦% ಭಾರತದ್ದಾಗಿದೆ. ಇಂಥ ದಿಗ್ಭ್ರಾಂತಗೊಳಿಸುವ ಸಾವುಗಳ ಸಂಖ್ಯೆಗೆ ಒಂದು ಸರಳ ಕಾರಣವುಂಟು: ಜೋರಾಗಿ ಓಡಿಸುವುದೇ ಸಾವು ತರುತ್ತದೆ. "ದಿಲ್ಲಿಯಲ್ಲಿನ ಜನ ಸಂಚಾರ ವಿಶ್ವದಲ್ಲಿಯೇ ಬಹಳ ಅವಸರದಿಂದ ಕೂಡಿದ್ದಾ

ಗಿದೆ. ಜನರು ಯಾವಾಗಲೂ ೮೦ ಕಿ.ಮೀ. ಗತಿಯಲ್ಲಿ ವಾಹನ ಓಡಿಸುತ್ತಾರೆ." ಎಂದು ದಿಲ್ಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ, ಸಾರಿಗೆ ಸಂಶೋಧನೆ ಮತ್ತು ದುರಂತ ತಡೆ ಕಾರ್ಯಕ್ರಮದ ದಿನೇಶ ಮೋಹನ ಹೇಳುತ್ತಾರೆ. ವಾಹನಗಳ ಗತಿ ಹೆಚ್ಚಾದಂತೆಲ್ಲಾ, ಸಾವುಗಳ ಸಂಖ್ಯೆ ಕೂಡಾ ಸಿಕ್ಕಾಪಟ್ಟೆ ಏರುತ್ತಲಿದೆ ಎಂಬುದು ವಿವಿಧ ಅಧ್ಯಯನಗಳಿಂದ ತಿಳಿದು ಬಂದಿದೆ.

ಈ ದಿಶೆಯಲ್ಲಿ ಪ್ರಮುಖ ಅಪರಾಧಿಗಳೆಂದರೆ—ಮಾರುತಿ ಸಂಸ್ಕೃತಿಯವರೆಂದು ಕುಪ್ರಸಿದ್ಧರಾಗಿರುವ, ಕೆಂಪುದೀಪಗಳನ್ನು ಕಡೆಗಣಿಸಿ ಜೋರಾಗಿ ವಾಹನ ಓಡಿಸುವ ಶ್ರೀಮಂತ ಮನೆತನದ ತರುಣರು. ವಾಹನ ಓಡಿಸುವಲ್ಲಿ ಕೂಡಾ ತಲೆಮಾರಿನ ಅಂತರವಿರುವುದು ಕೋಪ ತರುತ್ತದೆ. ಎಂತಲೇ ಬೇಸತ್ತ ಒಂದು ಸಮಾಚಾರ ಪತ್ರಿಕೆ ಭಾರತವನ್ನು ಸೆಳೆದೊಯ್ಯುತ್ತಿರುವ ಈ 'ರಸ್ತೆ ಹುಚ್ಚು'ನ್ನು ಕುರಿತು ಒಂದು ಪುಟದಷ್ಟು ವಿಶೇಷ ಲೇಖನ ಪ್ರಕಟಿಸಿತು.

೧ ನೇ ಸ್ಥಾನದಲ್ಲಿ ಚೀನಾ

ವಿಸ್ತಾರವಾದ ಭೂಭಾಗದಲ್ಲಿ ವಿಸ್ಮಯಕಾರಿ ಆರ್ಥಿಕ ಸ್ಫೋಟವಾದದ್ದರಿಂದ ವಾಹನಗಳ ಚಲನೆ ಹೆಚ್ಚಾಗಿದೆ. ೧೪ ವರ್ಷಗಳ ಹಿಂದೆ ನಾನು ವಿದೇಶಿ ವರ್ತಮಾನಗಾರನಾಗಿ ಬಂದಾಗ ಬೀಜಿಂಗ್ ಪಟ್ಟಣ ಶಾಂತವಾಗಿತ್ತು. ಅಲ್ಲಲ್ಲಿ ಕೆಲವು ಎತ್ತರದ ಕಟ್ಟಡಗಳಿದ್ದವು. ರಾತ್ರಿಯಾಯಿತೆಂದರೆ ದೀಪಗಳೂ ಕಾಣುತ್ತಿರಲಿಲ್ಲ. ಎಲ್ಲಕಡೆ ವಿಶಾಲವಾದ ಸ್ವಚ್ಛ ರಸ್ತೆಗಳಿದ್ದವು. ಸ್ವಯಂಚಾಲಿತ ವಾಹನಗಳು ಎಲ್ಲೋ ಒಂದೆರಡು ಕಾಣಿಸುತ್ತಿದ್ದವು. ಇದಕ್ಕೆ ಪ್ರತಿಯಾಗಿ ಎಲ್ಲಿ ನೋಡಿದರೂ ಸೈಕಲ್ಲುಗಳೇ ಕಾಣಿಸುತ್ತಿದ್ದವು. ಆ ದಿನಗಳಲ್ಲಿ ಕಾಣಬಹುದಾಗಿದ್ದ ಮೋಟಾರು ವಾಹನಗಳೆಂದರೆ ಕಮ್ಯುನಿಸ್ಟ್ ಪಕ್ಷದ 'ಕೆಂಪುಧ್ವಜ' ಹೊತ್ತ ದೊಡ್ಡ ಕರಿಯ ಲಿಯೊಸಿನ್ನಗಳು. ಇವು ಪಕ್ಷದ ಹಿರಿಯ ಅಧಿಕಾರಿಗಳನ್ನು ಜಿಂಗ್ಗ್ವೊ ಮಿನ್ಸ್ವಾಯಿ ದಾರಿಯಲ್ಲಿ ಕರೆದೊಯ್ಯುತ್ತಿದ್ದವು. ಇವಲ್ಲದೆ ರಾಯಭಾರಿಗಳು, ಪತ್ರಕರ್ತರು, ನೂರಾರು ವಾಹನಗಳಲ್ಲಿ ಓಡಾಡುತ್ತಿದ್ದರು. ಸರ್ಕಾರದ ವತಿಯಿಂದ ಓಡಿಸಲಾಗುತ್ತಿದ್ದ ಪ್ರವಾಸಿ ವಾಹನಗಳೂ ಇದ್ದವು. ಸದಾ ಓಡಾಡುವ ಟ್ಯಾಕ್ಸಿಗಳು ಮಾತ್ರ ಆಗ ಕೆಲವೇ ಇದ್ದವು.

ಅದೆಲ್ಲ ಈಗ ಬದಲಾಗಿದೆ. ಈ ಬದಲಾವಣೆ ಜನರಿಗೆ ತಿಳಿಯುವ ಮೊದಲೇ ಬಹಳ ಕ್ಷಿಪ್ರ ಗತಿಯಿಂದ ಬಂದಿದೆ. ಹೋದ ವರ್ಷ ಚೀನಾಲ್ಲಿ ನೊಂದಾಯಿಸಲಾಗಿದ್ದ ವಾಹನಗಳ ಸಂಖ್ಯೆ ೧೧ ಮಿಲಿಯ. ಆ ದೇಶದಲ್ಲಿ ಸ್ವಯಂಚಾಲಿತ ವಾಹನಗಳು ಹೊಸದಾಗಿ ಕಾಣಿಸಿ ಕೊಂಡಾಗ, ಬಾಲಾವಸ್ಥೆಯಲ್ಲಿದ್ದ ಮಕ್ಕಳು ಇಂದು ಅವುಗಳನ್ನು ತಾವೇ ಓಡಿಸುತ್ತಿದ್ದಾರೆ. ಇಂದು ವಾಹನಗಳನ್ನು ಓಡಿಸುತ್ತಿರುವ ಪ್ರತಿಯೊಬ್ಬ ಚಾಲಕ ಹೆಚ್ಚುಕಡಿಮೆ ಅನನುಭವಿ ಎಂದೇ ಹೇಳಬಹುದು ಈ ಅಂಶ ಇಲ್ಲಿ ಎದ್ದು ಕಾಣುತ್ತದೆ.

ನಾನು ಬೀಜಿಂಗಿಗೆ ಬಂದು ಎರಡು ದಿನಗಳಾಗಿವೆ. ನನ್ನ ಟ್ಯಾಕ್ಸಿ ಚಾಲಕರು ಎದುರುಗಡೆಯಿಂದ ಬರುತ್ತಿರುವ ಜನಸಂಚಾರ ನೋಡದೆ ನುಗ್ಗುವುದು ಸಾಮಾನ್ಯ

ದೃಶ್ಯವಾಗಿದೆ. 'ಮುಖ' ಮಾಡುವುದು ಒಂದು ಸಾಮಾನ್ಯ ವಿಷಯುನೆನಿಸುತ್ತಿದೆ. ಅವರೇನಾದರೂ ಆ ಕಡೆ ನೋಡಿದರೆ ಇನ್ನು ಒಂದು ವಾಹನ ಬರುವುದು ಕಾಣಬಹುದು. ಅದರಿಂದಾಗಿ ಆ ಚಾಲಕನ ಕಡೆ ದೃಷ್ಟಿ ಹಾಯಿಸಿ, ತನ್ಮೂಲಕ ಅವನಿಗೆ ದಾರಿ ಬಿಡಬೇಕಾಗಬಹುದು. ಆದ್ದರಿಂದ, ಮುಂದೆ ಒತ್ತಿಕೊಂಡು ಹೋಗಿಬಿಟ್ಟರೆ, ದಾರಿ ಬಿಡುವ ಹೊಣೆ ಇನ್ನೊಬ್ಬ ಚಾಲಕನ ಮೇಲಿರುತ್ತದೆ. ಈ ಮುಖ ತಿರುಗಿಸುವ ಅಪಾಯಕಾರಿ ಆಟ ಪ್ರತಿನಿತ್ಯ ಈ ದೇಶದ ಪ್ರತಿಯೊಂದು ಭಾಗದಲ್ಲಿ ನಡೆದಿರುತ್ತದೆ.

ಬೀಜಿಂಗ್ ಹೊರಗಡೆ ಅವ್ಯವಸ್ಥೆ ಆವರಿಸಿರುತ್ತದೆ. ದಕ್ಷಿಣದಲ್ಲಿನ ಬಂದರು ಪಟ್ಟಣವಾದ ಗುವಾಂಗೆರ್ಝೂ ಅಂತೂ ಬಹಳ ದಿನಗಳಿಂದ ಸಿಂಹಸ್ವಪ್ನಕ್ಕೆ ಪ್ರಸಿದ್ಧವಾಗಿದೆ. ಈ ವರ್ಷ ಮೂರು ದಿನಗಳ ಅವಧಿಯಲ್ಲಿ ಗುವಾಂಗ್ ಡಾಂಗೆ ಜಿಲ್ಲೆಯೊಂದರಲ್ಲಿಯೇ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ ೨೬ ಜನರು ಮೃತರಾದರು ಮತ್ತು ೧೦೦ ಜನ ಗಾಯಗೊಂಡರು. ಸ್ವಲ್ಪವೂ ಅಂಜದೆ ಅತಿ ಜೋರಾಗಿ ಓಡಿಸುವ ಚೀನಾದ ಚಾಲಕರಂಥವರನ್ನು ತಾನೆಲ್ಲೂ ನೋಡಿಲ್ಲವೆಂದು, ವಿಶ್ವದ ವಿವಿಧ ಭಾಗಗಳನ್ನು ನೋಡಿರುವ ಮೆಕ್ಡೊನಾಲ್ಡ್ಸ್ ಹೋಟೆಲ್ಲುಗಳ ಕಾರ್ಯನಿರ್ವಾಹಕ ಹೇಳಿದ್ದಾನೆ. "ಚಾಲಕರು ಕಡಿಮೆ ಗತಿಯಲ್ಲಿ ಓಡಿಸುವಂತೆ ಕೇಳಿಕೊಂಡು ನಾನು ಅವರಿಗೆ ಹೆಚ್ಚು ಹಣ ಕೊಡುತ್ತೇನೆ. ಜೋರಾಗಿ ಓಡಿಸುವ ಕಂಪನಿಯ ಕೆಲವು ಚಾಲಕರನ್ನು ನಾನು ವಾಹನದಿಂದ ಕೆಳಗೆ ಇಳಿಸಿದ್ದುಂಟು: ಆದರೆ ಅವರಿಗೆ ಇದು ಸರಿ ಬರುವುದಿಲ್ಲ. ನನಗೆ ಅವರ ನಡವಳಿಕೆ ಸರಿಬರುವುದಿಲ್ಲ. ಹೋಗಬೇಕಾದ ಸ್ಥಳಕ್ಕೆ ನಾನು ಜೀವಂತವಾಗಿ ಹೋಗಿ ತಲುಪಬೇಕೆಂಬುದೇ ನನ್ನ ಆಶೆ." ಎಂದೆನ್ನುತ್ತಾನೆ.

ಚೀನೀ ಚಾಲಕರು ಇಷ್ಟು ಅಪಾಯಕಾರಿ ರೀತಿಯಲ್ಲಿ ಏಕೆ ನುಗ್ಗುತ್ತಾರೆಂಬುದಕ್ಕೆ ವ್ಯಾಪಾರಿಯೊಬ್ಬನ ವಾದವಿದೆ: ಈ ದೇಶದಲ್ಲಿ 'ಮುಖ' ಮತ್ತು 'ಚಿಕನ್' ಬಗೆಗಿನ ಅಭಿಪ್ರಾಯ ಜೊತೆಯಾಗಿ ಬಂದಿವೆ. ಈ ಎರಡು ಸಂಸ್ಕೃತಿಗಳ ಸಂಯೋಗ ಮಾರಕವಾಗಿದೆ".

ಈ ಮಾರಕ ಚಾಲನೆಯಿಂದಾಗಿ ಚೀನಾದ ಚಾಲಕರನ್ನು ಏಶಿಯಾದ ಅಧಮಾಧಮ ಚಾಲಕರೆಂಬ ಶ್ರೇಣಿಗೆ ಸೇರಿಸುವಂತಾಗಿದೆ. ಅಷ್ಟೇ ಏಕೆ? ವಿಶ್ವದ ಯಾವುದೇ ಭಾಗದಲ್ಲಿ ಇಷ್ಟು ಅಧಮ ಚಾಲಕರು ಸಿಗಲಿಕ್ಕಿಲ್ಲ.

ನಾನು ಏನಾಗಲಿ?


ಒಂದೂರಲ್ಲಿ ಒಬ್ಬ ಕಲ್ಲು ಕಟೆಯುವವನಿದ್ದ. ದಿನನಿತ್ಯ ಉರಿಬಿಸಿಲಲ್ಲಿ ಕುಳಿತು ಕಲ್ಲು ಕಟೆಯುವ ಶ್ರಮದ ಕೆಲಸದಿಂದ ಅವನು ಬೇಸತ್ತಿದ್ದನು. ಈ ಕೆಲಸ ಬಹಳ ದಣಿಸುವಂಥಾದ್ದು. ನಾನು ಸೂರ್ಯನಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು" ಎಂದೆನಿಸಿತು. ಒಂದು ಪವಾಡವೆಂಬಂತೆ ಅವನ ಆಶೆ ಈಡೇರಿ ಅವನು ಸೂರ್ಯನಾಗಿಬಿಟ್ಟನು.

ಬಹಳ ಸಂತೋಷಗೊಂಡು ಸೂರ್ಯಕಿರಣಗಳನ್ನು ಎಲ್ಲೆಡೆ ಚೆಲ್ಲಿ ಹೊಳೆಯ ಹತ್ತಿದನು. ಆದರೆ ಈ ಕಿರಣಗಳು ಮೋಡಗಳನ್ನು ಭೇದಿಸಿ ಹೋಗಲಾರವೆಂಬ ಅಂಶ ಬಹಳ ಶೀಘ್ರ ಅವನ ಗಮನಕ್ಕೆ ಬಂತು. "ನನ್ನ ಕಿರಣಗಳನ್ನು ಮೋಡಗಳು ತಡೆಯುವಂತಾದರೆ ನಾನು ಸೂರ್ಯನಾಗಿ ಸಾಧಿಸಿದ್ದೇನು?" ಎಂದು ಉದ್ಗಾರ ತೆಗೆದ. ಅವನು ಮೋಡವಾದ. ಆಕಾಶದಲ್ಲಿ ತೇಲಾಡುತ್ತ ಭೂಮಿಗೆ ಮಳೆ ಸುರಿಸಿದ. ಆದರೆ ಗಾಳಿ ಬಂದು ಮೋಡ ಚದುರುವುದು. ಆಯಿತು, "ಓಹೊ....ಈ ಗಾಳಿಯೆಂಬುದು ಮೋಡಗಳನ್ನು ಚದುರಿಸಬಲ್ಲದ್ದಾಗಿದೆ. ಇದೇ ಬಹಳ ಬಲಶಾಲಿಯೆಂದೆಂತಾಯಿತು.... ನಾನು ಗಾಳಿಯಾಗಬೇಕು" ಎಂದೆನಿಸಿತು. ಅದರಂತೆ ಅವನು ಗಾಳಿಯಾದ. ಗಾಳಿಯಾಗಿ ಮಂದವಾಗಿ, ಬಿರುಸಿನಿಂದ ಬೀಸಿದ; ಬಿರುಗಾಳಿಯಾಗಿಯೂ ಬೀಸಿದ. ಆದರೆ ಒಂದು ದಿನ ಅದರ ಮುಕ್ತ ಚಲನೆಯನ್ನು ಒಂದು ಪರ್ವತ ಅಡ್ಡಗಟ್ಟಿತು. "ಒಂದು ಪರ್ವತ ಅಡ್ಡಗಟ್ಟಬಹುದಾದರೆ ನಾನು ಗಾಳಿಯಾಗಿ ಏನು ಫಲ?" ಎಂದ. ಆಗ ಪರ್ವತವಾಗಿಬಿಟ್ಟ. ಆದರೆ ಬಹಳ ತೀವ್ರ ಅವನನ್ನು ಯಾರೋ ಸುತ್ತಿಗೆಯಿಂದ ಜೋರಾಗಿ ಕುಟ್ಟಿ ಕುಟ್ಟಿ ಕೆತ್ತುತ್ತಿದ್ದಾರೆ ಎನಿಸಿತು.

ಹೌದು. ಒಬ್ಬ ಕಲ್ಲು ಕಟಿಯುವವ ಈ ಕೆಲಸದಲ್ಲಿ ತೊಡಗಿದ್ದ.

ಸಂಗ್ರಹ : ಮೈಕೆಲ್ ಸುರತ್ತ

———



ಆಸೆಯಿಂದ ಬೇಕು ಎನಲುಬಾರದು, ಬೇಡ ಎನಲು ಬಿಡದು, ದೇವರು ಕೊಟ್ಟರೆ ತೆಗೆದುಕೊ, ಕೊಡದಿದ್ದರೆ ಅಳಬೇಡ. ಆಸೆಯೆಂಬ ಪಾಶದಿಂದ ಯಾವಾಗಲೂ ದೂರವಿರು.

—ಕವಿ ವೇಮನ

ಪುಸ್ತಕ ವಿಮರ್ಶೆ

ಎರಡು ಉತ್ತಮ ಪುಸ್ತಕಗಳು

ಮೊದಲನೆಯದು ಶ್ರೀ ಬಿ. ಎನ್. ನಂಜುಂಡಯ್ಯನವರು ಇಂಗ್ಲೀಷಿನಲ್ಲಿ ರಚಿಸಿದ Evolution of Democracy in India ಎಂಬ ಪುಸ್ತಕದ ಕನ್ನಡ ಅನುವಾದ: "ಭಾರತದಲ್ಲಿ ಪ್ರಜಾಸತ್ತೆಯ ವಿಕಾಸ." ನಂಜುಂಡಯ್ಯನವರೇ ಅನುವಾದಕರೂ ಹೌದು. ಪ್ರಕಾಶಕರು: ಭಾರತೀ ಪ್ರಕಾಶನ ಮೈಸೂರು, ೧೯೯೮, ಪುಟಗಳು ೨೧೬, ಬೆಲೆ ರೂ. ೧೦೦

ಪ್ರಜಾಸತ್ತೆ ಎಂದರೇನು? ಲೇಖಕರು ವಿವರಿಸಿದ್ದಾರೆ: ಅದರ ಒಂದು ಮುಖ್ಯ ಲಕ್ಷಣ ವ್ಯಕ್ತಿ ಸ್ವಾತಂತ್ರ್ಯ. ಅದು ವ್ಯಕ್ತಿಗೆ ಕೆಲವು ಮಾನವೀಯ ಹಕ್ಕುಗಳ ಭರವಸೆ ಕೊಡುತ್ತದೆ: ಜೀವಧಾರಣೆ, ಸುಖಾನ್ವೇಷಣೆ, ಅಂತಸ್ಸಾಕ್ಷಿ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ ಮತ್ತು ವಾಕ್ ಸ್ವಾತಂತ್ರ್ಯ. ಪ್ರಜಾಸತ್ತೆ ಇರುವಲ್ಲಿ ವ್ಯಕ್ತಿ ತನ್ನ ಅಂತಸ್ಸಾಕ್ಷಿಗೆ ಅನುಗುಣವಾಗಿ ಪ್ರಾಮಾಣಿಕ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸ್ವತಂತ್ರನಾಗಿದ್ದಾನೆ. ಈ ದಿಸೆಯಲ್ಲಿ ಯಾವುದೇ ಬಗೆಯ ಅಸಹನೆ ಅಥವಾ ಬಾಯಿಗೆ ಬೀಗ ಹಾಕುವ ಪ್ರಯತ್ನ ಪ್ರಜಾಸತ್ತೆಯ ನಿಷೇಧವೆನ್ನಿಸುತ್ತದೆ—ಇದು ಫ್ಯಾಸಿಸಮ್‌ನ ಕರಾಳ ಮಾರ್ಗ.

ಪ್ರಜಾಸತ್ತೆಯಾಗಲಿ ನಿರಂಕುಶ ಪ್ರಭುತ್ವವಾಗಲಿ ಮನುಕುಲದ ಆದಿಯಿಂದಲೂ ವ್ಯವಹಾರದಲ್ಲಿದ್ದ ಆಡಳಿತ ಶೈಲಿಗಳಲ್ಲ. ಎಂದೇ ಪ್ರಸಕ್ತ ಪುಸ್ತಕದಲ್ಲಿ ಅಂದಿನ ಅಲೆಮಾರಿ ವಾನರ ಮಾನವ ಇಂದಿನ ನಾಗರಿಕ ನರಮಾನವನಾಗಿ ವಿಕಸಿಸಿದ ವಿವಿಧ ಮಜಲುಗಳನ್ನು ಗುರುತಿಸಲಾಗಿದೆ. ಮೊದಲನೆಯ ಮಜಲಿನಲ್ಲಿ ಕ್ರಮೇಣ ಮುಂದಾಳುತನ ಅಥವಾ ಪ್ರಭುತ್ವ ಮೈದಳೆಯುತ್ತದೆ. ಸಹಜವಾಗಿ ಆಳುವವರು ಮತ್ತು ಆಳಲ್ಪಡುವವರು. ಅಂದರೆ ಪ್ರಭು ಮತ್ತು ಪ್ರಜೆ ಎಂಬ ಎರಡು ವರ್ಗಗಳು ಏರ್ಪಡುತ್ತವೆ. ಪ್ರಭು-ಪ್ರಜೆ ಸಂಬಂಧ ಅನ್ಯೋನ್ಯವಾಗಿದ್ದರೆ ಸಮಾಜ ಸುಖವಾಗಿರುತ್ತದೆ; ಇಲ್ಲವಾದರೆ ಪ್ರಭು

ನಿರಂಕುಶನಾಗಿ ಸರ್ವಾಧಿಕಾರ ಚಲಾಯಿಸ ಬಹುದು, ಇಲ್ಲವೇ ಪ್ರಜೆಗಳು ದಿಕ್ಕೆಟ್ಟು ದೇಶ ಅರಾಜಕವಾಗಬಹುದು. ಉಭಯ ಸಂದರ್ಭಗಳಲ್ಲಿಯೂ ರಾಷ್ಟ್ರದ ವಿಘಟನೆ ಶತಸ್ಸಿದ್ಧ. ಈ ದುರಂತ ಸಂಭವಿಸದಂತೆ ಜನರನ್ನು ರಕ್ಷಿಸಬಲ್ಲ ಏಕೈಕ ಸಂಜೀವಿನೀ ಎಂದರೆ ಪ್ರಜಾಸತ್ತೆ.

ಪುಸ್ತಕದ ಪೂರ್ವಾರ್ಧ "ಪ್ರಪಂಚದ ಇತಿಹಾಸದಲ್ಲಿ ಪ್ರಮುಖ ಪ್ರವೃತ್ತಿಗಳು" ಎಂಬ ವಿಷಯಕ್ಕೆ ಮೀಸಲಾಗಿದೆ. ಇತಿಹಾಸ ದಿಂದ ಆಯ್ದ ಪ್ರಾತಿನಿಧಿಕ ನಿದರ್ಶನ ಗಳನ್ನು ಉಲ್ಲೇಖಿಸುತ್ತ ಹೀಗೆ ಬರೆ ದಿದ್ದಾರೆ: "ಜನತೆ ಚುನಾವಣೆಗಳ ಸಂದರ್ಭ ದಲ್ಲಿ ತನ್ನ ಶಕ್ತಿಶಾಲಿಯಾದ ಮತದಾನ ಅಸ್ತ್ರವನ್ನು ಪ್ರಯೋಗಿಸಿ ರಾಷ್ಟ್ರಜೀವನಕ್ಕೆ ಶುಭದಾಯಕವಾಗುವ ಬದಲಾವಣೆಯನ್ನು ತರಬಹುದು." ಪ್ರಜಾಪ್ರಭುವಿನ ಸಮರ್ಪಕ ಶಿಕ್ಷಣ ಕುರಿತು ವಿಧಿ ನಿಷೇಧ ಗಳನ್ನು ಸೂಚಿಸಿದ್ದಾರೆ. "ಪ್ರತಿಯೊಂದು ರಾಷ್ಟ್ರದ ಬೇರೂ ಅವರ ವಿಶಿಷ್ಟ ಸಂಸ್ಕೃತಿ ಯಲ್ಲಿ ಭದ್ರವಾಗಿರಬೇಕು. ಸ್ಥಳೀಯ ಸಂಸ್ಕೃತಿ ಆ ನಾಡಿಗೆ ದಾರ್ಢ್ಯ ಮತ್ತು ಧಾರಣ ಶಕ್ತಿಯನ್ನು ನೀಡುತ್ತದೆ." ಪುಸ್ತಕದ ಉತ್ತರಾರ್ಧದಲ್ಲಿ ವ್ಯಾಪಕವಾಗಿ ಚರ್ಚಿಸಿರುವ ವಿಷಯ: "ಭಾರತದಲ್ಲಿ ಪ್ರಜಾಸತ್ತೆಯ ವಿವಿಧ ಮುಖಗಳು." ಸ್ವತಂತ್ರ ಭಾರತದಲ್ಲಿ ಪ್ರಜಾಸತ್ತೆಯ ಅವನತಿಯನ್ನು ತುಂಬ ಕಳವಳದಿಂದ ವಿವರಿಸುತ್ತ ಬರೆದಿದ್ದಾರೆ: "ಭಾರತದಲ್ಲಿ ಪ್ರಜಾಸತ್ತೆ ಒಂದು ರೀತಿ ಹಳಿ ತಪ್ಪಿದೆ. ಪ್ರಜಾಸತ್ತೆಯನ್ನು ವಿಕೃತಗೊಳಿಸಿರುವು ದಕ್ಕೆ ಬಲುಮಟ್ಟಿಗೆ ನಮ್ಮ ರಾಜಕೀಯ ಪಕ್ಷಗಳೇ ಹೊಣೆಗಾರರು." ವ್ಯಕ್ತಿ ಮಟ್ಟ ದಲ್ಲಿ ಒಬ್ಬ ಏನು ಮಾಡಬೇಕು? "ನಮ್ಮ ದೇಶದಲ್ಲಿ ಪ್ರಜಾಸತ್ತೆಯ ಯಶಸ್ಸು ಅಥವಾ ವಿಫಲತೆ, ಅದು ಸಣ್ಣಪದವಿ ಯಾಗಲಿ ದೊಡ್ಡ ಪದವಿಯಾಗಲಿ, ಬಲು ಮಟ್ಟಿಗೆ ನಮ್ಮೆಲ್ಲರ ಮನೋಭಾವ ಮತ್ತು ವರ್ತನೆಯನ್ನು ಅವಲಂಬಿಸಿದೆ." ಎಲ್ಲರೂ ಒಪ್ಪುವ ಮಾತು. ಶಾಸ್ತ್ರಜ್ಞಾನ, ಬೋಧನಾನುಭವ, ಅನುಷ್ಠಾನ ಮತ್ತು ಆರ್ದ್ರ ಹೃದಯಗಳ ಮೇಳನವಾಗಿದ್ದಾರೆ ಈ ಹಿರಿಯ ಲೇಖಕರು. ಇವರು ಜನತೆಗೆ ನೀಡಿರುವ ಸಮಾರೋಪ ಸಂದೇಶ ಅತ್ಯಂತ ಮನನೀಯವಾಗಿದೆ: "ನಮ್ಮ ರಾಷ್ಟ್ರದ ಪರಿಮಿತ ಸಾಧನ ಸಂಪತ್ತನ್ನೂ ನಮ್ಮ ಅಮೂಲ್ಯವಾದ ಕಾಲ ಮತ್ತು ಚೈತನ್ಯ ವನ್ನೂ ಪ್ರಗತಿ ಮತ್ತು ಅಭಿವೃದ್ಧಿಗೆ ಔಚಿತ್ಯವಲ್ಲದ ಕ್ಷುಲ್ಲಕ ವಿಷಯಗಳಲ್ಲಿ ವ್ಯರ್ಥ ಮಾಡುವುದು ಬೇಡ. ನಮ್ಮಲ್ಲಿ ನಾವು ಸಂಪೂರ್ಣ ಆತ್ಮಭರವಸೆಯಿಂದ ಮುಂದಿನ ದೃಷ್ಟಿಯನ್ನೂ ದೂರದೃಷ್ಟಿಯನ್ನೂ ತಾಳೋಣ. ಪ್ರಗತಿಯ ಪಥದಲ್ಲಿ, ಹೊರ-ಗಡೆಯಿಂದ ಊರುಗೋಲಿನ ಸಹಾಯ ವಿಲ್ಲದೆ, ನಮ್ಮ ಹೆಜ್ಜೆ ಭದ್ರವೂ ದೃಢವೂ ಆಗಿರಲಿ" ನಮ್ಮೆಲ್ಲರ ಆಶಯವೂ ಇದೇ. ಪಕ್ವಮತಿ ರಚಿಸಿರುವ ಪ್ರೌಢ ಕೃತಿ ಇದು.

* * *

ಈಗ ಎರಡನೆಯ ಪುಸ್ತಕ: "ಹಾತಿಂ-ತಾಯ್‌ನ ಸಾಹಸಗಳು." ಮೂಲ ಪರ್ಷಿಯನ್ ಭಾಷೆಯಿಂದ ಇಂಗ್ಲಿಷಿಗೆ ಅನುವಾದವಾಗಿದ್ದ ಕೃತಿಯನ್ನು ಕನ್ನಡಕ್ಕೆ ತಂದವರು ಎಂ. ಎಸ್. ಪುಟ್ಟಣ್ಣನವರು. ಇವರ ಜೀವಿತಾವಧಿ ೧೮೫೪–೧೯೩೦.

ಹೊಸಗನ್ನಡ ಅರುಣೋದಯ ಕಾಲದ ಪ್ರಸಿದ್ಧ ಕಾದಂಬರಿಕಾರರಿವರು. ೧೯೩೦ರಲ್ಲಿ ಸಿದ್ಧವಾಗಿದ್ದ ಕನ್ನಡ ರೂಪ ಹಸ್ತಪ್ರತಿಯಲ್ಲೇ ಉಳಿದಿತ್ತು—ಅತ್ಯಂತ ಜೀರ್ಣ ಶೀರ್ಣ ಸ್ಥಿತಿಯಲ್ಲಿ. ಇದನ್ನು ಪುಟ್ಟಣ್ಣನವರ ವಂಶಸ್ಥರಿಂದ ಪಡೆದು ಯಥಾರೂಪ ನಕಲು ಮಾಡಿ, "ಪ್ರಬುದ್ಧ ಕರ್ಣಾಟಕ"ದಲ್ಲಿ ಪ್ರಕಟಿಸಿ, ಈ ಮುದ್ರಿತ ವಸ್ತುವನ್ನು ಸಂಗ್ರಹಿಸಿ ಸಂಪಾದಿಸಿ ಶೈಲಿಯನ್ನು ಹದವರಿತು ಆಧುನೀಕರಿಸಿ ಪ್ರಸಕ್ತ ಸುಂದರ ಸಚಿತ್ರ ಪುಸ್ತಕವನ್ನು ಪ್ರಕಟಿಸಿರುವವರು ಡಾ|| ಎಚ್. ಎಸ್. ಸುಜಾತಾ ಅವರು. ಪ್ರಕಾಶಕರು: ಸುಹಾಸ ಪ್ರಕಟಣೆಗಳು ಮೈಸೂರು, ೧೯೯೯, ಪುಟಗಳು ೩೫೫, ಬೆಲೆ ರೂ. ೩೨೫.

ಶ್ರೀಮಂತ ಪುತ್ರ ಹಾತಿಂತಾಯ್ ಸಮಸ್ತ ಸದ್ಗುಣಗಳ ಖನಿ. ಆರ್ತಜನ ಸಂರಕ್ಷಣೆ, ಸತ್ಯಪರಾಯಣತೆ ಮತ್ತು ದಾನಶೀಲತೆ ಇವನ ಉಸಿರು. ಮುನೀರ್ ಶಾಮಿ ಎಂಬ ರಾಜಕುಮಾರ ಹುಸ್ನ್ ಬಾನು ಎಂಬ ಚೆಲುವೆಯಲ್ಲಿ ಅನುರಕ್ತನಾಗಿ ವಿವಾಹ ಪ್ರಸ್ತಾವನೆ ಎತ್ತುತ್ತಾನೆ. ಈಕೆ ಇವನೆದುರು ಸಪ್ತಸಮಸ್ಯೆಗಳನ್ನು ಒಡ್ಡಿ ಇವುಗಳಿಗೆ ಪರಿಹಾರ ಒದಗಿಸುವುದಾದರೆ ಮಾತ್ರ ತಾನು ಸಮ್ಮತಿಸುವುದಾಗಿ ಪಣ ವಿಧಿಸುತ್ತಾಳೆ. ವಿರಹಿ ಮುನೀರನ ಹೃದಯ ತಾಪ ನೋಡಲಾಗದೆ ಹಾತಿಂ ತಾನು ಆ ಪರಿಹಾರಗಳನ್ನು ಶೋಧಿಸಿ ತಂದು ಈ ಮದುವೆಯನ್ನು ನೆರವೇರಿಸುವುದಾಗಿ ಆಶ್ವಾಸಿಸುತ್ತಾನೆ ಹಾಗೆಯೇ ಮಾಡಿ ಕೃತಕೃತ್ಯನಾಗುತ್ತಾನೆ.

ದೃಢನಿರ್ಧಾರ, ಅಚಲಸ್ಥೈರ್ಯ, ಪರಮ ಅನುಕಂಪ ಮತ್ತು ಸತ್ಯಸಂಕಲ್ಪ ಭರಿತನಾಗಿ ಹಾತಿಂತಾಯ್ ಆ ಏಳೂ ಪ್ರಶ್ನೆಗಳಿಗೆ ಹೇಗೆ ಉತ್ತರ ಅರಸುತ್ತಾನೆ ಮತ್ತು ಈ ಅನ್ವೇಷಣೆಯ ವೇಳೆ ಹೇಗೆ ಅನೇಕ ಉಪಸಾಹಸಗಳನ್ನು ಪ್ರದರ್ಶಿಸುತ್ತಾನೆ ಎಂಬುದು ಪ್ರಸಕ್ತ ಪುಸ್ತಕದ ವಸ್ತು. "ಪಂಚತಂತ್ರ," "ಅರೆಬಿಯನ್ ನೈಟ್ಸ್" ಮುಂತಾದ ರೋಚಕ ಕಾಲ್ಪನಿಕ ಸಾಹಸಗಳ ಸಾಲಿಗೆ ಸೇರುವ ಈ ಗ್ರಂಥದ ಆಧಾರ ಶ್ರುತಿ: ಕಥೆ ಓದುವಾಗ ಮನದೊಳಗೆ ಮಿಡಿಯುವ ನೀತಿ. ಎಂದೇ "ಹಾತಿಂತಾಯ್‌ನ ಸಾಹಸಗಳು" ಕಿರಿಯರಿಗೆ ಅದ್ಭುತ ಸಾಹಸ, ನಡುವರಿಗೆ ರಮ್ಯ ಕಲ್ಪನಾವಿಲಾಸ, ಹಿರಿಯರಿಗೆ ಉತ್ತಮ ಸಾಹಿತ್ಯ ಮತ್ತು ಸಕಲರಿಗೆ ಜೀವನೋಲ್ಲಾಸ ಪ್ರೇರಕ ಕೃತಿಯಾಗಿದೆ. ಹಾತಿಂತಾಯ್‌ನ ಏಳು ಸಾಹಸಗಳ ಜೊತೆಗೆ ಸೇರುವ ಇನ್ನೊಂದು ಸಾಹಸವೂ ಇದೆ: ಈ ಕೃತಿ ಆವಿಷ್ಕರಿಸಿರುವ ಸುಜಾತಾ.

ಜಿ. ಟಿ. ನಾರಾಯಣರಾವ್

ನಂ. ೮, 'ಅತ್ರಿ,' ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತೀಪುರ
ಮೈಸೂರು ೫೭೦ ೦೦೯

ಡಾ॥ ಹೆಚ್. ಎ. ಪಾರ್ಶ್ವನಾಥ್ ಅವರ ವ್ಯಕ್ತಿ—ಶಕ್ತಿ ಕೃತಿ ವಿಮರ್ಶೆ

ಡಾ॥ ಹೆಚ್. ಎ. ಪಾರ್ಶ್ವನಾಥ್ ವೃತ್ತಿಯಲ್ಲಿ ವೈದ್ಯರು. ಕೆ. ಆರ್. ಆಸ್ಪತ್ರೆಯಲ್ಲಿ ಪ್ಯಾಥಾಲಜಿ ಪ್ರಾಧ್ಯಾಪಕರು ಮತ್ತು ಇಲಾಖಾ ಮುಖ್ಯಸ್ಥರು. ಆದರೆ ಇವರು ವೈದ್ಯರು ಎನ್ನುವುದಕ್ಕಿಂತ ಹೆಚ್ಚಾಗಿ ರಂಗ ಕರ್ಮಿಗಳು ಎಂದರೆ ಸೂಕ್ತವಾದೀತು. ಕಾರಣ ತಮ್ಮ ವೃತ್ತಿ ಜೀವನಕ್ಕಿಂತ ರಂಗ ಭೂಮಿಗೆ, ಸಾಹಿತ್ಯಕ್ಕೆ ಹೆಚ್ಚು ಒತ್ತು ಕೊಟ್ಟರು. ಇವರನ್ನು ಮೊದಲಬಾರಿಗೆ ಕಂಡವರು ಯಾರೂ ವೈದ್ಯರೆಂದು ಭಾವಿಸುವುದಿಲ್ಲ. ಅಷ್ಟೊಂದು ಸರಸವಾಗಿ, ಸರಳವಾಗಿ, ಯಾವ ಹಮ್ಮು–ಬಿಮ್ಮುಗಳಿಲ್ಲದೆ ಬಂದವರೊಂದಿಗೆ, ಕಂಡವರೊಂದಿಗೆ ಬೆರೆಯುವ ಸಜ್ಜನಿಕೆಯ ವ್ಯಕ್ತಿ. ಅವರ ನಿರಾಡಂಬರ ಜೀವನ ಶೈಲಿ ಎಲ್ಲರನ್ನೂ ಆಕರ್ಷಿಸುತ್ತದೆ. ಭ್ರಷ್ಟ ಸಾಮಾಜಿಕ ವ್ಯವಸ್ಥೆಯ ಮಧ್ಯದಲ್ಲಿ ಇಂಥ ಸರಳ, ಪ್ರಾಮಾಣಿಕ ವ್ಯಕ್ತಿಯೂ ಇದ್ದಾರೆ ಎಂಬುದು ಸೋಜಿಗದ ಸಂಗತಿ. ಏನಿಲ್ಲದಿದ್ದರೂ, ಏನು ಬರೆಯದಿದ್ದರೂ ಅಬ್ಬರದಿಂದ ಪತ್ರಿಕೆಗಳ ಮೂಲಕ ತುತ್ತೂರಿ ಊದಿಸಿಕೊಳ್ಳುವ ಗೋಸುಂಬೆಗಳ ಮಧ್ಯೆ ಸದ್ದುಗದ್ದಲವಿಲ್ಲದೆ ಎಲೆಮರೆಯಕಾಯಂತೆ ತನ್ನ ಪಾಡಿಗೆ ತಾನು ಮೌನವಾಗಿ ತಮ್ಮ ವೈದ್ಯಕೀಯ ಹಾಗೂ ರಂಗ ಕಾರ್ಯ ಮಾಡಿಕೊಂಡು ಬರುತ್ತಿರುವ ಡಾ॥ ಹೆಚ್. ಎ. ಪಾರ್ಶ್ವನಾಥರ ಪುಸ್ತಕ 'ವ್ಯಕ್ತಿ-ಶಕ್ತಿ' ಬಗ್ಗೆ ಎರಡು ಮಾತು ಬರೆಯಲು ಸಂತೋಷವೆನಿಸುತ್ತದೆ.

'ವ್ಯಕ್ತಿ-ಶಕ್ತಿ' ಗ್ರಂಥದಲ್ಲಿ ಒಟ್ಟು ೩೪ ಲೇಖನಗಳಿದ್ದರೂ ಚಿತ್ರಿತರಾಗಿರುವ ವ್ಯಕ್ತಿಗಳ ಸಂಖ್ಯೆ ೩೨. ರಂಗಪುಂಗವ ಕೈಲಾಸಂ, ನಟರಾಗಿ ಕೈಲಾಸಂ ಎಂಬುದಾಗಿ ಕೈಲಾಸಂ ಬಗ್ಗೆ ಎರಡು ಚಿತ್ರಗಳು ಮತ್ತು ಮಹಾನ್ ಕಲಾವಿದ ಸಂಪತ್, ರಂಗ ಸಂಪನ್ನ ಸಂಪತ್ ಬಗ್ಗೆ ಎರಡು ಚಿತ್ರಗಳು ಇರುವುದರಿಂದ ೩೦ ಪ್ರತಿಭಾವಂತ ಕಲಾವಿದರ ವ್ಯಕ್ತಿ ಚಿತ್ರಗಳು ಈ ಗ್ರಂಥದಲ್ಲಿ ಮೂಡಿಬಂದಿವೆ. ಸ್ವತಃ ನಟರಾದ ಪಾರ್ಶ್ವನಾಥರು ರಂಗ ಕರ್ಮಿಗಳಿಗೆ ಹೆಚ್ಚು ಒತ್ತುಕೊಟ್ಟಿದ್ದಾರೆ. ಇವರಲ್ಲಿ ಕನ್ನಡದ ಕಟ್ಟಾಳು ಆರ್. ಸಿ. ಹಿರೇಮಠ, ಹೃದಯವಂತ ಸಮೇತನಹಳ್ಳಿ ರಾಮರಾಯ, ಧರ್ಮಪ್ರವರ್ತಕ ಮದನ ಕೇಸರಿ ಸಾಹಿತಿಗಳು, ಅತಿಶಯಮಹನೀಯ ಸಿ. ಬಿ. ಎಂ. ಚಂದ್ರಯ್ಯ ವ್ಯಾಪಾರಸ್ಥರು ಮತ್ತು ಸಮಾಜಸೇವಕರು; ಕುಷ್ಠರೋಗ ದ್ರಷ್ಟಾರ ಹ್ಯಾನ್ಸೆನ್; ಪಿ. ಆರ್. ತಿಪ್ಪೇಸ್ವಾಮಿ ಚಿತ್ರಕಲಾವಿದರು. ಉಳಿದ ೨೪ ಮಂದಿ ಗಣ್ಯರು ವಿಶೇಷವಾಗಿ ನಾಟಕಕಾರರು ಮತ್ತು ರಂಗಕಲಾವಿದರು. ಇವರಲ್ಲಿ ಕನ್ನಡಕ್ಕೊಬ್ಬರೇ ಕೈಲಾಸಂ ಹಾಗೂ ಹಾಸ್ಯ ಪ್ರವೃತ್ತಿಯ ನಾ. ಕಸ್ತೂರಿ ಸಾಹಿತಿಗಳೂ ಹೌದು. ಇವರ ಮಧ್ಯೆ ಅಭಿಜಾತ ಕಲಾವಿದೆ ಅಂಬುಜಾದೇವಿ ಮತ್ತು ನೃತ್ಯಕಲಾವಿದೆ ಶಶಿರೇಖಾ ದೇವೂರ್ ಎಂಬ ಇಬ್ಬರು ಸ್ತ್ರೀಯರಿಗೂ ಸ್ಥಾನ ಲಭ್ಯವಾಗಿದೆ. ಡಾ॥ ಹೆಚ್. ಎ. ಪಾರ್ಶ್ವನಾಥ್ ಸ್ವತಃ ರಂಗ ಕಲಾವಿದರಾಗಿದ್ದುಕೊಂಡು ಅನೇಕ ನಾಟಕ

ಗಳಲ್ಲಿ ಅಭಿನಯಿಸಿದ್ದಾರೆ. ಇದರ ದ್ಯೋತಕವಾಗಿ ತಾವು ಆರಿಸಿಕೊಂಡಿರುವ ವ್ಯಕ್ತಿ-ಶಕ್ತಿಗಳಲ್ಲಿ ಅನೇಕರು ರಂಗಕರ್ಮಿಗಳಾಗಿದ್ದಾರೆ. ನಾಟಕ ಕರ್ತೃಗಳಾಗಿ, ಅಭಿನಯಪಟ್ಟುಗಳಾಗಿ, ರಂಗ ನಿರ್ದೇಶಕರಾಗಿ ನೇಪಾತ್ಯಕಾರರಾಗಿ ಹೀಗೆ ರಂಗಕರ್ಮಕ್ಕೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಿರುವ ಅನೇಕ ವ್ಯಕ್ತಿ ಶಕ್ತಿಗಳ ಚಿತ್ರಕಲಾ ಶಾಲೆಯಾಗಿದೆ ಈ ಗ್ರಂಥ.

ವೈದ್ಯವೃತ್ತಿ–ರಂಗ ಕರ್ಮಗಳೆರಡನ್ನು ಜೊತೆಜೊತೆಯಾಗಿಯೇ ನಿರ್ವಹಿಸುತ್ತಿರುವ ಪಾರ್ಶ್ವನಾಥರು ತಾವು ಹಿಡಿದ ಕಾರ್ಯವನ್ನು ತಲಸ್ಪರ್ಶಿಯಾಗಿ ನಿರ್ವಹಿಸುವ ಛಲಗಾರರಾಗಿ, ಅತ್ಯಂತ ನಿಷ್ಠೆ, ಆಸಕ್ತಿ ಪ್ರಾಮಾಣಿಕತೆಯಿಂದ ಕೆಲಸವನ್ನು ಆಗುಮಾಡುತ್ತಾರೆ. ತಮಗೆ ವಹಿಸಿದ ಪಾತ್ರವನ್ನು ಅಭಿನಯಿಸುವಾಗಂತೂ, ಅದು ದೊಡ್ಡದಿರಲಿ–ಚಿಕ್ಕದಿರಲಿ, ಶ್ರದ್ಧೆಯಿಂದ ಅಭಿನಯಿಸುವುದನ್ನು ಕಂಡಿದ್ದೇನೆ, ಅವರು ಮಾಡುವ ಕಾರ್ಯದಲ್ಲಿ ತೋರುವ ಶ್ರದ್ಧೆ ನಿಷ್ಠೆ, ಕಳಕಳಿಯಿಂದಾಗಿ ಅವರು ಇಲ್ಲಿ ಚಿತ್ರಿಸಿರುವ ವ್ಯಕ್ತಿ–ಶಕ್ತಿಗಳು ಅತ್ಯಂತ ಶಕ್ತಿಯುತವಾಗಿ ಮೂಡಿಬಂದಿವೆ. ವ್ಯಕ್ತಿಚಿತ್ರಗಳನ್ನು ಕೊಡುವಾಗ ಅವರ ಜನನದಿಂದ ಹಿಡಿದು ಕಾರಣದವರೆಗಿನ, ಬಾಲ್ಯ–ಯೌವನ–ಮುಪ್ಪು-ಆ ಕಾಲದ ಕಾರ್ಯ ಚಟುವಟಿಕೆಗಳ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಕೊಡುತ್ತಾರೆ. ಅನೇಕರ ಬಗ್ಗೆ ಅನೇಕರಿಗೆ ಗೊತ್ತಿಲ್ಲದ ಅನೇಕ ವಿಷಯಗಳು ಇಲ್ಲಿ ಮೂಡಿ ಬಂದಿವೆ. ವೈಯಕ್ತಿಕವಾಗಿ ಅವರನ್ನು ನೇರವಾಗಿ ಭೇಟಿಯಾಗಿ, ಅವರ ಬಗೆಗೆ ಬಂದಿರುವ ಸಾಹಿತ್ಯವನ್ನು ಅಧ್ಯಯನ ಮಾಡಿ, ಇನ್ನು ತೃಪ್ತಿಯಾಗದಿದ್ದರೆ ಕ್ಷೇತ್ರಕಾರ್ಯಮಾಡಿ ಆಯಾ ವ್ಯಕ್ತಿಗಳ ಬಗೆಗಿನ ಅಧಿಕಾರಯುಕ್ತ ಮಾಹಿತಿಗಳನ್ನು ಸಂಗ್ರಹಿಸಿ ಆಯಾ ವ್ಯಕ್ತಿಗಳ ಚಿತ್ರವನ್ನು ಓದುಗರ ಮನಸ್ಸಿನಲ್ಲಿ ನಾಟಿ ನಿಲ್ಲುವಂತೆ ದಳದಳವಾಗಿ ನಮ್ರರಾಗಿ, ಕಿರಿದರಲ್ಲಿ ಹಿರಿದನ್ನು ತುರುಕಿ ಹೇಳಿದ್ದಾರೆ. ಇದು ಅವರ ವೈಶಿಷ್ಟ್ಯ. ಅವರಿಗೆ ಸಿದ್ಧಿಸಿರುವ ವಿಶಿಷ್ಟ ಶೈಲಿ, ಕಲೆ. ಇದರಿಂದಾಗಿ ಇಲ್ಲಿ ಮೂಡಿಬಂದಿರುವ ವ್ಯಕ್ತಿಚಿತ್ರ ಸಂಕ್ಷಿಪ್ತವಾಗಿದ್ದರೂ ಆ ವ್ಯಕ್ತಿಗಳ ಜೀವನ ಚರಿತ್ರೆ ಬರೆಯ ಹೊರಟವರಿಗೆ ಇಲ್ಲಿ ವಿಫುಲಮೂಲ ಸಾಮಗ್ರಿ ದೊರೆಯುತ್ತದೆ. ಈ ದೃಷ್ಟಿಯಿಂದ 'ವ್ಯಕ್ತಿ–ಶಕ್ತಿ' ಒಂದು ಐತಿಹಾಸಿಕ ದಾಖಲೆಯಾಗಿ ಪರಿಣಮಿಸಿದೆ. ತಾವು ನೀಡಿರುವ ಪ್ರತಿಯೊಬ್ಬ ವ್ಯಕ್ತಿಯ ಹೆಸರಿನ ಮುಂದೆ ಸೇರಿಸಿರುವ ಗಂಗಪುಂಗವ ಕೈಲಾಸಂ, ಕಲಾನಿಧಿ ಪಿ. ಆರ್. ತಿಪ್ಪೇಸ್ವಾಮಿ, ಕನ್ನಡದ ಕಟ್ಟಾಳು ಆರ್. ಸಿ. ಹಿರೇಮಠ, ನೃತ್ಯಕಲಾವಿದೆ ಶಶಿಕಲಾ ದೇವ್ಗರ್, ಸಮನ್ವಯನಟ ಶಂಕರ್‌ನಾಗ್ ಮುಂತಾದ ಗುಣವಾಚಕಗಳು ಆಯಾ ವ್ಯಕ್ತಿಯ ವ್ಯಕ್ತಿತ್ವವನ್ನು ಸೆರೆ ಹಿಡಿವ ಫೋಟೋಲೆನ್ಸ್ ಆಗಿ ಕಾಣುತ್ತವೆ. ಹೆಸರು ಮಾತ್ರದಿಂದಲೇ ಆಯಾ ವ್ಯಕಿಗಳ ಗುಣ–ಸ್ವರೂಪ-ಲಕ್ಷಣಗಳನ್ನು ತಿಳಿಯುವ ದಿಕ್ಸೂಚಿಗಳೆನಿಸುತ್ತವೆ. ಇದು ಡಾ॥ ಪಾರ್ಶ್ವನಾಥರ ಸಿದ್ಧಿ ಶೈಲಿ. ಗುಣವಾಚಕಗಳಂತೆಯೇ ಇವರ ಕೆಲವು ವಾಕ್ಯಗಳೂ ವ್ಯಕ್ತಿಯ ಇಡೀ ಚಿತ್ರವನ್ನು ಕಣ್ಮುಂದೆ ನಿಲ್ಲಿಸುತ್ತವೆ. ಉದಾ: "ಹೆಗಲಮೇಲೊಂದು ಟವಲು, ಬಿಳಿಯ

ಪಂಚೆ ಮತ್ತು ದೊಗಲು ನಿಲುವಂಗಿ, ಗಂಭೀರ ಹಾಗೂ ಎತ್ತರದ ನಿಲುವು, ಮುಖದಲ್ಲಿ ಸದಾ ಮಿನುಗುವ ಮಂದಹಾಸ, ಕಂಚಿನಕಂಠ ಮತ್ತು ನಡೆನುಡಿಯಲ್ಲಿ ಸ್ಪಷ್ಟತನದ ಛಾಯೆಯನ್ನುಳ್ಳ ವ್ಯಕ್ತಿಯೋರ್ವನನ್ನು ಕಂಡೊಡನೆ ತಟ್ಟನೆ ಇವರು ಓರ್ವ ನಟನೇ ಇರಬಹುದೆಂಬ ನಿಮ್ಮ ಭಾವನೆ ಎಂದೂ ಕಿಂಚಿತ್ತೂ ಹುಸಿಯಾಗದು. ಇವರೇ ವೃತ್ತಿರಂಗಭೂಮಿಯ ನಟನಾಗಿ ಬೆಳೆದು ವಿಜೃಂಭಿಸುತ್ತಲೇ ಹವ್ಯಾಸಿಗಳ ಒಡನಾಟವನ್ನು ಮೈಗೂಡಿಸಿಕೊಂಡಿರುವ ಬೆಳಗಲ್ ವೀರಣ್ಣನವರು." ಇಂಥ ಅನೇಕ ವಾಕ್ಯಗಳನ್ನು ಉದಾಹರಣೆಯಾಗಿ ಕೊಡಬಹುದು. ಇದು ಅವರ ಭಾಷೆಯಮೇಲಿನ ಹಿಡಿತ ಹಾಗೂ ಪ್ರಭುತ್ವವನ್ನು ಸೂಚಿಸುತ್ತದೆ. ಪ್ರಾಸ ಪ್ರಿಯರಾದ ಪಾರ್ಶ್ವನಾಥರು ಪ್ರಾಸಬದ್ಧ ಪದಗಳನ್ನು ಜೊಡಿಸಿ ಬಳಸುತ್ತಾರೆ, ಶಬ್ದಗಳ ಮೇಲೆ ಪನ್ ಮಾಡುತ್ತಾರೆ, ಇಂಥಲ್ಲಿ ಭಾವುಕ ಹೃದಯಿ ಕವಿಯನ್ನು ಕಂಡಂತಾಗುತ್ತದೆ. ತಮ್ಮ ಅಭಿಮಾನೀ ಚಿತ್ರನಟರ ಬಗೆಗಿನ ತಿಳಿಯದ ಅನೇಕ ಘಟನೆಗಳು ಇಲ್ಲಿ ತಿಳಿದುಬರುವುದರಿಂದ ಆಯಾ ಚಿತ್ರನಟರ ಅಭಿಮಾನಿಗಳಿಗೆ, ಪ್ರೇಕ್ಷಕ ವೃಂದಕ್ಕೆ ಆಶ್ಚರ್ಯವಾಗುವುದರ ಜೊತೆಗೆ ಅವರ ಅನುಭವ ಮತ್ತಷ್ಟು ಅರ್ಥಪೂರ್ಣವಾಗುತ್ತದೆ. ಅಂಥದೊಂದು ಉದಾ: ನಾಗರಕಟ್ಟೆನಾಗ್, ಶಂಕರನಾಗ್ ಎಂದು ಪ್ರಸಿದ್ಧಿಗೊಂಡ ಪ್ರಸಂಗ. ಇದರಲ್ಲಿ ಕೇವಲ ಕಲಾಬ್ದಿ ನಯದಿಂದ ಜೀವಿಸುವವರಿದ್ದಾರೆ, ಸರ್ಕಾರಿ ಅಧಿಕಾರಿಗಳಾಗಿ ತಮ್ಮ ಕಲಾಪ್ರದರ್ಶನ ಮಾಡುವವರಿದ್ದಾರೆ. ಒಟ್ಟಿನಲ್ಲಿ ಕರ್ನಾಟಕದ ಎಲ್ಲ ಭಾಗದ ಕಲಾವಿದರೂ ಇಲ್ಲಿ ಚಿತ್ರಿತರಾಗಿದ್ದಾರೆ. ಈ ಎಲ್ಲ ಕಾರಣಗಳಿಂದ ಇದೊಂದು ಉತ್ತಮ ಸಂಗ್ರಹಣ ಯೋಗ್ಯ ಗ್ರಂಥವಾಗಿದೆ.

ಡಾ॥ ಬಿ. ನಂ. ಚಂದ್ರಯ್ಯ
ನಂ. ೩, ಬಿ.ಎಡ್. ಕಾಲೇಜು ಪೂರ್ವ
ಟಿ.ಕೆ. ಲೇಔಟ್, ಕುವೆಂಪುನಗರ
ಮೈಸೂರು ೫೭೦ ೦೨೩

Reg. No. KRNN-29 / WPP 6

LICENCE No. 21
LICENCED TO POST WITH PAYMENT

Edited by R. Boriah. Printed by Papanna
Printed & Published by Karnataka State Adult Education Council
5/1 Vinoba Road, Mansa Gangothri, Mysore-570 006.